










ಸಿದ್ಧಗಂಗಾ

ಸಂಚಿಕೆ - ೪

೧೯೬೭



"ಸಿದ್ಧಗಂಗಾ"

(ತ್ರೈಮಾಸಿಕ)

ಸಂಚಿಕೆ ೪

೧೯೬೭



ವಿನಮ್ರ ಪ್ರಾರ್ಥನೆ



ಮಹಾಶಯರೇ,

"ಸಿದ್ಧಗಂಗಾ ತ್ರೈಮಾಸಿಕದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಪ್ರಥಮ ವರ್ಗದ ಪತ್ರಿಕೆಯನ್ನಾಗಿ ಮಾಡಲು ವಾಚಕವೃಂದದ ಹಾಗೂ ಜನತೆಯ ವಿಶೇಷ ಆರ್ಥಿಕ ನೆರವನ್ನು ಆಶಿಸಿದ್ದೇವೆ.

ಪತ್ರಿಕೋದ್ಯಮದ ಯಶಸ್ಸಿಗೆ ಸ್ವಂತ ಮುದ್ರಣಾಲಯ; ವಿಚಾರಪೂರಿತ ಲೇಖನಗಳೂ ಅತ್ಯಗತ್ಯ. ಇದಕ್ಕಾಗಿ ಈ ಕೆಳಕಂಡಂತೆ ಆರ್ಥಿಕ ಸಹಾಯವನ್ನು ತಮ್ಮಿಂದ ಬಯಸಿದ್ದೇವೆ.

1) 200 ರೂ. ಮೇಲೆ ನೀಡುವವರು–ಪೋಷಕರು.
2) 150 ರೂ. ಕೊಡುವವರು–ಪ್ರೋತ್ಸಾಹಕರು.
3) 100 ರೂ. ಕೊಡುವವರು–ಸಹಾಯಕರು.
4) 50 ರೂ. ಕೊಡುವವರು–ಹಿತೈಷಿಗಳು.

ಹೀಗೆ ಆದರಪೂರ್ವಕವಾಗಿ ಧನಸಹಾಯ ಮಾಡುವ ಮಹನೀಯರ ಹೆಸರುಗಳನ್ನು ಪತ್ರಿಕೆಯಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸಿ ಪ್ರಕಟಿಸಲಾಗುವುದು.

ಪತ್ರಿಕೆಯ ಅಭಿವೃದ್ಧಿಯನ್ನು ಕೋರಿ ಬೆಂಗಳೂರಿನ ಶ್ರೀ ಕೆ. ಎಲ್. ಪಿ. ಯವರು 200 ರೂಪಾಯಿಗಳ ಧನಸಹಾಯಮಾಡಿ, ಪತ್ರಿಕೆಯ ಪೋಷಕರಾಗಿರುತ್ತಾರೆ. ಅವರಿಗೆ ನಮ್ಮ ಕೃತಜ್ಞತೆಗಳನ್ನು ಈ ಮೂಲಕ ಅರ್ಪಿಸುತ್ತೇವೆ.

ಚಂದಾದಾರರಲ್ಲಿ ವಿನಂತಿ

ಮಾನ್ಯ ಚಂದಾದಾರರು ತಮ್ಮ ಚಂದಾಹಣವನ್ನು ತೀವ್ರ ಕಳುಹಿಸಿ, ತನ್ಮೂಲಕ ಪತ್ರಿಕೆಯ ಪುರೋಬಿವೃದ್ಧಿಗೆ ನೆರವು ನೀಡಬೇಕಾಗಿ ಪ್ರಾರ್ಥಿಸಲಾಗಿದೆ.

ಸಿದ್ಧಗಂಗಾ

ಸಂಪಾದಕರು :
ಸಂ। ವಿ। ಟಿ.ವಿ. ಮುತ್ತಾಚಾರ್ಯ,
ಬಿ.ಎ. (ಆನರ್ಸ್) ಬಿ.ಇ.

ಉಪ-ಸಂಪಾದಕರು :
ಪಂಡಿತ್ ಕೆ.ಪಿ. ಶಿವಲಿಂಗಯ್ಯ, ಬಿ.ಎ.;
ಹೆಚ್.ವಿ. ವೀರಭದ್ರಯ್ಯ, ಎಂ.ಎ.,
ರಾಜೀವಲೋಚನ, ಎಂ.ಎ.,
ಕೆ.ಜಿ. ರಂಗಯ್ಯ, ಬಿ.ಎ.,

ಪ್ರಕಾಶಕರು :
ಹಳೆಯ ವಿದ್ಯಾರ್ಥಿ ಸಂಘ, ಶ್ರೀಸಿದ್ಧಗಂ

ಮುದ್ರಕರು :
ಟಿ.ಬಿ. ಧರಣೇಂದ್ರಯ್ಯ,
ಪೃಥ್ವಿ ಪ್ರಿಂಟರ್ಸ್, ಬಳೇಪೇಟೆ, ಬೆಂಗಳೂರು

ಪತ್ರಿಕೆ ಹೊರಡುವ ಸ್ಥಳ :
ಶ್ರೀ ಸಿದ್ಧಗಂಗಾ ಕ್ಷೇತ್ರ

ಪತ್ರಿಕೆ ಹೊರಡುವ ಮಾಸಗಳು :
ಜನವರಿ
ಏಪ್ರಿಲ್
ಜುಲೈ
ಅಕ್ಟೋಬರ್

ಲೇಖಕರಲ್ಲಿ ವಿನಂತಿ

"ಸಿದ್ಧಗಂಗಾ" ಪತ್ರಿಕೆಗೆ ಮಾನ್ಯ ಲೇಖಕರ ಸಾಹಿತ್ಯದ ವಿವಿಧ ಪ್ರಕಾರಗಳ ಲೇಖನಗಳ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು. ತ ಹೆಸರು, ವಿಳಾಸಗಳ ಸಹಿತ ಕಾಗದದ ಒಂದು ಮಗ್ಗ ಲೇಖನಗಳನ್ನು ಸ್ಪಷ್ಟವಾಗಿ ಬರೆದು ಕಳುಹಿಸ ಪ್ರಾರ್ಥನೆ ಧರ್ಮ, ಸಂಸ್ಕೃತಿ, ಕಲೆ, ಸಾಹಿ ವಿಜ್ಞಾನ, ಶಿಕ್ಷಣ ಮುಂತಾದ ವಿಚಾರಗಳನ್ನೊ ಗೊಂಡ ಲೇಖನಗಳಿಗೆ ಮಾನ್ಯತೆ ಹೆಚ್ಚು. ಲೇಖ ತಮ್ಮಲ್ಲಿ ಲೇಖನದ ಪ್ರತಿಯನ್ನು ಕಾಯ್ದಿಟ್ಟುಕೊಳ್ಳ ಪ್ರಾರ್ಥನೆ. ಲೇಖನಗಳನ್ನೂ, ವಿಮರ್ಶೆಗೆ ಗ್ರ ಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಸಂಪಾದ ವಿಳಾಸಕ್ಕೆ ದಯವಿಟ್ಟು ಕಳುಹಿಸಬೇಕು.

ಈ ಸಂಚಿಕೆಯಲ್ಲಿ

ಸಂಪಾದಕೀಯ

ಶ್ರೀ ಗುರು ಕೃಪೆಯಿಂದ ಪ್ರಸಕ್ತ ಸಾಲಿನ ನಾಲ್ಕೂ ಸಂಚಿಕೆಗಳನ್ನು ತಮ್ಮ ಹಸ್ತದಲ್ಲಿಟ್ಟಿರುವುದರ ಬಗೆಗೆ ಸಂತಸಪಟ್ಟು ಆ ಯಶಸ್ಸಿಗೆ ಕಾರಣವಾದ ಲೇಖಕರು, ಜಾಹಿರಾತುದಾರರು, ಚಂದಾದಾರರು, ಮುದ್ರಕರು-ಈ ಎಲ್ಲ ಮಿತ್ರ ಬಾಂಧವರಿಗೆ ಸಂಪಾದಕ ಮಂಡಲಿ ತನ್ನ ಕೃತಜ್ಞತೆಗಳನ್ನರ್ಪಿಸುತ್ತದೆ.

ಇತ್ತೀಚಿಗೆ ನಮ್ಮನ್ನಗಲಿದ ಭಾರತ ಮತ್ತು ನೆರೆಯ ಮಿತ್ರರಾಷ್ಟ್ರಗಳಿಗೆ ತಮ್ಮ ಅಧಿಕಾರಾವಧಿಯಲ್ಲಿ ಸ್ವಾತಂತ್ರ್ಯ ದೊರಕಿಸಿಕೊಟ್ಟ ಬ್ರಿಟನ್ನಿನ ಮಾಜಿ ಪ್ರಧಾನಿ ಮಿ॥ ಕ್ಲೆಮೆಂಟ್ ಅಟ್ಲಿ, ಕನ್ನಡದ ಸುಪ್ರಸಿದ್ಧ ಸಾಹಿತಿ ಹಾಗೂ "ಜೀವನ" ಪತ್ರಿಕಾ ಸಂಪಾದಕ ಶ್ರೀ ಕೆ. ಗೋಪಾಲಕೃಷ್ಣರಾವ್; ಭಾರತದ ಸೋಷಲಿಷ್ಟ ನಾಯಕ--ಬಡವರ ಬಂಧು ಡಾ॥ ಶ್ರೀ ರಾಂ ಮನೋಹರ ಲೋಹಿಯಾ ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಉಪ ಕುಲಪತಿ ಶ್ರೀ ಜಾಗೀರ್‌ದಾರ್, ತಿಪಟೂರು ಕಲ್ಪತರು ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಜಿ. ಆರ್. ಮಹಾಲಿಂಗಯ್ಯ. ಈ ಮಹನೀಯರ ಆತ್ಮಕ್ಕೆ ಶಾಂತಿ ಕೋರಿ, ತತ್ಸಂಬಂಧವಾದ ದುಃಖ ಸಹಿಸುವ ಶಕ್ತಿಯನ್ನು ಲೋಕಕ್ಕೆ ಕರುಣಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಶ್ರೀವಾಣಿ

ಮಹಾತ್ಮರ ಜಯಂತಿ ಆಚರಣೆ

ಮಹಾಪುರುಷರ ಜಯಂತಿಯನ್ನು ಆಚರಿಸುವುದು ಅವರಿಗೆ ದೊಡ್ಡಸ್ತಿಕೆಯನ್ನುಂಟುಮಾಡುವುದಕ್ಕಲ್ಲ; ಪರಂತು ನಮ್ಮ ಜೀವನದ ಸಾಫಲ್ಯಕ್ಕಾಗಿ; ಅರ್ಥಾತ್ ನಾವು ನಿಜವಾದ ಬೆಳಕನ್ನು ಕಾಣುವ ಸಲುವಾಗಿ.

“ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ......... ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ”–ಲೋಕದಲ್ಲಿ ಅಧರ್ಮವು ಹೆಚ್ಚಿದಾಗಲೆಲ್ಲ ಧರ್ಮವನ್ನು ಪುನರುತ್ಥಾನಗೊಳಿಸುವ ಸಲುವಾಗಿ ತಾನು ಪ್ರತಿಯುಗದಲ್ಲಿಯೂ ಅವತಾರ ಮಾಡುವುದಾಗಿ ಗೀತಾಕಾರನು ಆಶ್ವಾಸನೆಯನ್ನಿತ್ತಿರುವುದು ಸರಿಯಷ್ಟೆ.

ಅಂತೇ ಭಗವಾನ್ ಬಸವೇಶ್ವರರು ಕೂಡ ಇಂತಹ ಮಹಾ ಅವತಾರ ಪುರುಷರು. ಅವರ ಜೀವನ ಚರಿತ್ರೆಯ ವಿಷಯದಲ್ಲಿ ಹರಿಹರ, ಪಾಲ್ಕುರಿಕೆ ಸೋಮನಾಥ, ಸಿಂಗಿರಾಜ. ಭೀಮಕವಿ ಮುಂತಾದ ಅನೇಕ ಮಂದಿ ಕವಿಗಳು ಮಹಾಕಾವ್ಯಗಳನ್ನೇ ರಚಿಸಿರುತ್ತಾರೆ. ಏನೇ ಆಗಲಿ, ಭೂಮಿಯಲ್ಲಿನ ಅಧರ್ಮ ನಿವೃತ್ತಿ, ಧರ್ಮ ಪ್ರವೃತ್ತಿಗಳ ಸಲುವಾಗಿ ಈ ಮಹಾನುಭಾವರು ಜನ್ಮ ತಾಳಿದರು. ಮಹತ್ತರ ಕಾರ್ಯವನ್ನು ಸಾಧಿಸಿದರು.

ಹರಿದು ಹಂಚಿಹೋಗಿದ್ದ ಅಖಂಡ ಕರ್ನಾಟಕ ಈಗ ಮತ್ತೆ ಒಂದುಗೂಡಿದೆ. ಯಾವ ರಾಷ್ಟ್ರದೇಳಿಗೆಗೆ ಬಸವಾದಿ ಪ್ರಮಥರು ಅನವರತ ಶ್ರಮದಿಂದ ದುಡಿದರೋ ಆ ದೇಶದಲ್ಲಿ ಇಂದು ವೈಭವಪೂರಿತವಾಗಿ ನಡೆಸಬೇಕು ಅವರ ಜಯಂತಿಯನ್ನು. ಆ ಮಹಾನುಭಾವರ ಜೀವನದಲ್ಲಿ–ಈ ಹೊತ್ತಿನ ಜೀವನಕ್ಕೆ ಹೊಂದಿಕೆಯಾಗತಕ್ಕಂತಹ ಸಂಗತಿಗಳಾವುವು? ಎಂಬುದನ್ನು ನಾವು ವಿಚಾರ ಮಾಡಬೇಕು. ಅವರು ಪವಾಡಪುರುಷರೆಂದ ಮಾತ್ರಕ್ಕೆ ಬೆಲೆಕೊಡಬೇಕಾದ್ದಿಲ್ಲ. “ಜೀವತ್ವವದಾವುದೆಂದರಿಯರು ಕೇಳು ಮನವೆ.........ಉರಿವ ಕಿಚ್ಚನು ಹೊಕ್ಕು ಬೇಯದೆ ಪೊರಟರೆ, ಅದು ದೇವತ್ವವೆಂಬರು ಕೇಳು ಮನವೇ, ಅದು ದೇವತ್ವವಲ್ಲ........... ಅರೈವ ಮನದಿ ಷಡಕ್ಷರಿಯ ಲಿಂಗ ನೆಲಸಿ ....” ಮುಪ್ಪಿನ ಷಡಕ್ಷರಿ ಸ್ವಾಮಿಗಳವರ ಈ ಕವಿತಾಭಾಗದ ಅರ್ಥವನ್ನು ನಾವು ಗಮನಿಸಿ ತಿಳಿಯಬೇಕು.

ಒಂದೂರಿನಲ್ಲಿ ಇಬ್ಬರು ಅಣ್ಣತಮ್ಮಂದಿರಿದ್ದರು ಇಬ್ಬರೂ ಸಂಸ್ಕಾರಿಗಳೇ. ಆದರೆ ಅಣ್ಣ ನಿಜವಾದ ಯೋಗಾಭ್ಯಾಸವನ್ನಾಡುತ್ತಾ ಪಾರಮಾರ್ಥಿಕ ತತ್ವ ಸಂಪಾದನೆಯಲ್ಲಿದ್ದ. ತಮ್ಮ ಹಠಯೋಗ, ವಾಮಾಚಾರ ಮುಂತಾದುವನ್ನು ಅಭ್ಯಸಿಸಿ, ಕೆಲವು ಪವಾಡ (ಮಾಯಾ) ನಡೆಸುವುದನ್ನು ಕಲಿತಿದ್ದ. ಒಮ್ಮೆ ಇಬ್ಬರೂ ಜೊತೆಯಲ್ಲಿ ನಡೆದುಹೋಗುವಾಗ ಮಾರ್ಗ ಮಧ್ಯೆ ಸಿಕ್ಕಿದ ನದಿಯನ್ನು ದಾಟಬೇಕಾದ ಸಂದರ್ಭ ವೊದಗಿತು. ಅಣ್ಣ, ಅಂಬಿಗನಿಗೆ ನಾಲ್ಕು ಆಣೆ ಹಣ ಕೊಟ್ಟು ದೋಣಿಯಲ್ಲಿ ಕುಳಿತು ನದಿಯನ್ನು ದಾಟಿದರೆ ತಮ್ಮ ತಾನು ಪಡೆದಿದ್ದ ಸಿದ್ಧಿಯಿಂದ ನೀರಿನ ಮೇಲೆ ನಿರಾಯಾಸವಾಗಿ ನಡೆದು ನದಿದಾಟಿದ. "ನೋಡು, ನಾನು ಹೇಗೆ ನೀರಿನ ಮೇಲೆ (ಮುಳುಗದೆ) ದಾಟಿಬಂದೆ" ಎಂದು ಜಂಭ ತೋರಿಸಿದ ತಮ್ಮನಿಗೆ ಅಣ್ಣ ಹೇಳಿದ: "ನೀನು ಕಷ್ಟಪಟ್ಟು ಆರ್ಜಿಸಿದ ಸಿದ್ಧಿಯಿಂದ ಹೊಳೆ ದಾಟಿದರೆ, ನಾನು ನಾಲ್ಕು ಆಣೆ ಕೊಟ್ಟು ದಾಟಿದೆ. ಅಂದ ಮೇಲೆ ಈ ದಿಸೆಯಲ್ಲಿ ನೀನು ಕಲಿತ ವಿದ್ಯೆ ನಾಲ್ಕಾಣೆ ಕಿಮ್ಮತ್ತಿನದು!"

ಬಿಜ್ಜಳರಾಯನ ಪ್ರಧಾನಿಯಾಗಿದ್ದರೆಂದ ಮಾತ್ರಕ್ಕೆ ಬಸವಣ್ಣನವರ ಜಯಂತ್ಯುತ್ಸವ ಮಾಡಬೇಕಾಗಿಲ್ಲ. ಈಗೆಷ್ಟು ಜನ ಮಂತ್ರಿಪದವಿಯಲ್ಲಿದ್ದು ನಿವೃತ್ತರಾಗುವುದಿಲ್ಲ?

ದಿನಂಪ್ರತಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರ ದಾಸೋಹ ನಡೆಯುತ್ತಿದ್ದ ಮಹಾಮೂರ್ತಿಯೆಂದೂ ಅಲ್ಲ. ಬದಲಿಗೆ, ಬಸವಣ್ಣನವರು ವಿಶ್ವದ ಎಲ್ಲ ದೀನ-ದಲಿತರ ಸಲುವಾಗಿ ತಮ್ಮ ಜೀವನವನ್ನೇ ಮುಡುಪಿಟ್ಟುದರಿಂದ ಮಾತ್ರ.

ಕರ್ಣಾಟಕದ ಮಹಾಮಂತ್ರಿಯಾಗಿ, ಶ್ರೇಷ್ಠ ವರ್ಗದ ಸಮಾಜ ಸುಧಾರಕರಾಗಿ, ನೂತನ ರೀತಿಯ ಸಾಹಿತ್ಯ ರಚಕರಾಗಿ, ಅನುಭವ ಮಂಟಪದ ಸ್ಥಾಪಕರಾಗಿ-ಹೀಗೆ ತಮ್ಮ ವಿವಿಧ ಮುಖಜೀವನದಿಂದ ಇಡಿಯ ಮಾನವಕೋಟಿಗೇ ಸೇರಿದವರು ಮಹಾನ್ ವಿಭೂತಿ- ಜಗಜ್ಯೋತಿ ಬಸವೇಶ್ವರರು. ಈ ಅಂಶವನ್ನು ಮನಗಂಡಾಗ, ಕೇವಲ ವೀರಶೈವರಿಗೆ ಮಾತ್ರ ಅವರು ಸೇರಿದರೆನ್ನುವ ಅಲ್ಪಜ್ಞತೆ ನ್ಯಾಯವಾಗುವುದು ಸಹಜವಲ್ಲವೆ? ಬಸವಣ್ಣನವರು ಜನ ಜಾಗೃತಿ, ನವಕಲ್ಯಾಣಕಾರಕ ಸುಧಾರಣೆಗಳ ಜೊತೆಗೆ ಶ್ರಮಜೀವನಕ್ಕೆ ಅತಿಮಹತ್ವ ಕೊಟ್ಟು 'ಕಾಯಕವೇ ಕೈಲಾಸ' (Work is -Worship) ಎನ್ನಿಸಿ ಧನ್ಯರಾದರು.

ಟಾಲ್‌ಸ್ಟಾಯ್ ಮಹರ್ಷಿ ಬಳಿಗೆ ಒಮ್ಮೆ ಒಬ್ಬ ಮನುಷ್ಯ ಬಂದ. "ಸ್ವಾಮಿ, ನಾನು ತುಂಬ ಬಡವ; ನನಗೇನಾದರೂ ಸಹಾಯಮಾಡಬೇಕು" ಅಂತ ಕೇಳಿದ. ಈ ಮಹಾನುಭಾವ ಅವನನ್ನು ನೋಡಿದರು. ಒಳ್ಳೆಯ ದೃಢಕಾಯ; ಅಯ್ಯೋ ಎನ್ನಿಸಿ ಅವನಿಗೆ ಬುದ್ಧಿಕಲಿಸಬೇಕೆಂದುಕೊಂಡು ಹೀಗೆ ಹೇಳಿದರು; "ಅಯ್ಯಾ, ನನ್ನ ಸ್ನೇಹಿತ ಒಬ್ಬ ಕೈಗಳ ವ್ಯಾಪಾರ ಮಾಡುತ್ತಾನೆ. ನಿನ್ನ ಎರಡು ಕೈಗಳನ್ನೂ ಕೊಡು. ಐದು ಸಾವಿರ ರೂಪಾಯಿ ಕೊಡಿಸುತ್ತೇನೆ."

"ಇಲ್ಲಾ ಸ್ವಾಮಿ. ನನ್ನ ಕೈಗಳು ನನಗೇ ಇರಲಿ."

"ಹಾಗಾದರೆ ಇನ್ನೊಬ್ಬ ಸ್ನೇಹಿತ ಕಾಲು ಮಾರಾಟ ಮಾಡ್ತಾನೆ. ನಿನ್ನೆರಡೂ ಕಾಲುಗಳನ್ನು ಕತ್ತರಿಸಿಕೊಡು. ಹತ್ತು ಸಾವಿರ ರೂಪಾಯಿ ಕೊಡುತ್ತಾನೆ"

"ಆಗೋದಿಲ್ಲ ಸ್ವಾಮಿ."

"ಹೋಗಲಿ, ನನ್ನ ಬೇರೊಬ್ಬ ಸ್ನೇಹಿತ ವಿಜ್ಞಾನ ಸಂಶೋಧನೆಗಾಗಿ ಕಣ್ಣುಗಳನ್ನು ಸಂಗ್ರಹಿಸುತ್ತಿದ್ದಾನೆ ನಿನ್ನೆರಡು ಕಣ್ಣುಗಳನ್ನೂ ಕಿತ್ತುಕೊಟ್ಟರೆ, ಇಪ್ಪತ್ತೈದು ಸಾವಿರ ರೂಪಾಯಿ ಕೊಡುತ್ತಾನೆ. ಕೊಡುವೆಯಾ?"

"ಬೇಡಿ ಸ್ವಾಮಿ, ನನ್ನ ಕಣ್ಣು ನನಗೇ ಇರಲಿ."

ಆಗ ಹೇಳಿದರು ಟಾಲ್‌ಸ್ಟಾಯ್:

"ಅಲ್ಲಯ್ಯಾ, ದೇವರು ನಮಗೆ ಕೊಟ್ಟಿರುವುದೇ ಲಕ್ಷಾಂತರ ರೂಪಾಯಿ ಬೆಲೆಬಾಳುವ ಸ್ವತ್ತು. ಅದು ಲಭ್ಯವಾಗಿ ಇರುವಾಗ ಶ್ರಮಪಟ್ಟು ದುಡಿದು, ನಾಲ್ಕು ಜನರಿಗೆ ನೆರಳಾಗಿ ಬಾಳಲಾರದೆ ಹೀಗೆ ಭಿಕ್ಷೆ ಬೇಡುವರೆ?"


ಈ ರೀತಿ ಪರಮಾತ್ಮನು ಕೊಟ್ಟಿರತಕ್ಕ ಶ್ರೇಷ್ಠವಾದ ಆಸ್ತಿಯಲ್ಲಿ ಹೆಚ್ಚಿನ ಭರವಸೆಯನ್ನು ತಾಳಬೇಕು. "ಕಾಯಕವೇ ಕೈಲಾಸ" ಎನ್ನುವ ಶರಣರ ನುಡಿಯನ್ನು ಎಲ್ಲರೂ ತಂತಮ್ಮ ಜೀವಿತದಲ್ಲಿ ಅಮಲವಾಗಿಸಲು ಸರ್ವಥಾ ಪ್ರಯತ್ನಿಸಬೇಕು. 'ಕಾಯಕದಲ್ಲಿ ನಿರತನಾದೊಡೆ ಗುರುಲಿಂಗ ಜಂಗಮವನಾದರೂ ಮರೆಯಬೇಕು............' ಎಂಬ ಅವರ ನುಡಿ ಎಷ್ಟು ಅರ್ಥವತ್ತಾಗಿದೆಯೆಂಬುದನ್ನು ಚೆನ್ನಾಗಿ ಅರಿತು ನಡೆಯಬೇಕು.

ಕಪ್ಪಡಿ (ಕೂಡಲಸಂಗಮ) ಸುಕ್ಷೇತ್ರದಿಂದ ಕಲ್ಯಾಣಕ್ಕೆ ಬಂದ ಮೇಲಿನ ಕೇವಲ ಒಂಬತ್ತು ವರ್ಷಗಳ ಅಲ್ಪಾವಧಿಯಲ್ಲಿ ಎಷ್ಟೊಂದು ಅನುಪಮ ಸೇವೆ ಅಣ್ಣನವರಿಂದ ಜಗತ್ತಿಗೆ ಸಂದಿತು ಎನ್ನುವುದನ್ನು ಮನಗಂಡಾಗ ಆಶ್ಚರ್ಯವೆನಿಸುತ್ತದೆ.

ಮಹಾತ್ಮಾ ಗಾಂಧೀಜಿಯವರು ಹೇಳಿದ ಉಪಕಸುಬಿನ ಯೋಜನೆಯ ಗೃಹಕೈಗಾರಿಕೆಗಳನ್ನು (Home Industries) ಎಂಟುನೂರು ವರ್ಷಗಳ ಹಿಂದೆಯೇ ಜಾರಿಗೆ ತಂದರು ಬಸವಣ್ಣನವರು.

ಈ ದಿವಸ ಜಗತ್ತಿನಲ್ಲಿ ತಾಂಡವವಾಡುತ್ತಿರುವ ಕ್ಲಿಷ್ಟಸಮಸ್ಯೆಗಳನ್ನು ಎದುರಿಸಿದ ಧೀರರು ಅವರು. ಮನುಷ್ಯ ಜೀವನದಲ್ಲಿ ಒಂದು ವೃತ್ತಿಯನ್ನು ಅವಲಂಬಿಸಿ. ಅಂದಂದಿನ ಜೀವಿತಾರ್ಥವನ್ನು ಗಳಿಸಿ ಅದನ್ನು ಸದ್ವಿನಿಯೋಗಗೊಳಿಸಬೇಕು. 'ಅದುಬಿಟ್ಟು ನಾಳೆಗಾಗಿ ಸಂಗ್ರಹ ಮಾಡುವುದು' ಪರಮಾತ್ಮನಲ್ಲಿ ಅವಿಶ್ವಾಸವನ್ನು ಸ್ಥಾಪಿಸಿದಂತಾದೀತು; ಅದು ದೇಶದ್ರೋಹ, ಧರ್ಮದ್ರೋಹ, ಆತ್ಮದ್ರೋಹವಾದೀತು-ಎಂಬಂಶವನ್ನು ತಮ್ಮ ಹಲವಾರು ವಚನಗಳಲ್ಲಿ ವ್ಯಕ್ತಪಡಿಸಿ, ಅಂತೇ ಸ್ವತಃ ಆಚರಿಸಿ ತೋರಿಸಿದರು.

[ಹಿಂದಿನ ಸಂಚಿಕೆಯಿಂದ ಮುಂದುವರಿದ ಶ್ರೀ 'ಗುರುದೇವ'ರ ಭಾಷಣದ ಭಾಗ —ಸಂ.]



ನಮ್ಮ ಋಷಿಗಳು

ಸಂಗೀತ ವಿದ್ವಾನ್ :
ಟಿ. ವಿ. ಮುತ್ತಾಚಾರ್ಯ

ಇಂದಿನ ಮಾನವ ಲೌಕಿಕದ ಕೈಗೊಂಬೆ ಯೆಂದೇ ಹೇಳಬಹುದು. ಇದಕ್ಕೆ ಕಾರಣ ಅವನ ಐಹಿಕ ಸುಖಲೋಲುಪ್ತಿ. ವಿಜ್ಞಾನದ ಆವಿಷ್ಕಾರಗಳೆಲ್ಲಾ ಕೇವಲ ತಿಂದುಂಡು ಸುಖ ಪಡುವ ಸಾಧನಗಳಿಗೋಸ್ಕರವೇ ಆಗಿವೆ. ಆಧ್ಯಾತ್ಮಿಕ ಪ್ರವೃತ್ತಿ ಮಾನವನಲ್ಲಿ ಬೆಳೆದು ಬರುವ ವಾತಾವರಣವೇ ಮಾಯವಾಗುತ್ತಿದೆ. ಇದರ ಕಡೆಗೆ ಭಾರತೀಯರು ಗಮನ ಕೊಡುವ ಕಾಲ ಬರಲೆಂದು ನಮ್ಮ ತತ್ವಜ್ಞಾನಿಗಳು ಆಗಾಗ ನಿರೂಪಿಸುತ್ತಲೇ ಇರುತ್ತಾರೆ. ಭಾರತ ನಿಜವಾಗಿಯೂ ಶಾಂತಿ ಪ್ರಿಯ ರಾಷ್ಟ್ರವಾಗಬೇಕಾದರೆ ಅದರ ಆಧ್ಯಾತ್ಮಿಕ ಪ್ರವೃತ್ತಿ ಜಾಗೃತವಾಗಿಯೇ ಇರಬೇಕು. ಆಧ್ಯಾತ್ಮಿಕ ಪ್ರವೃತ್ತಿಯನ್ನು ಬೆಳಸಿಕೊಳ್ಳುವುದಾದರೆ ದೈವಸಾಕ್ಷಾತ್ಕಾರವನ್ನು ಪಡೆಯುವ ಮಾರ್ಗವೆಂದೇ ಅರ್ಥ. ದೈವ ಸಾಕ್ಷಾತ್ಕಾರವನ್ನು ಪಡೆದು ಅದನ್ನು ಉಪದೇಶ ಮಾಡಿದ ಮಂತ್ರ ದ್ರಷ್ಟಾರರೇ ಋಷಿಗಳು

ಭರತ ಖಂಡತ ಸಂಸ್ಕೃತಿಗಾಗಲಿ ಆಚಾರಕ್ಕಾಗಲಿ, ವಿಚಾರಕ್ಕಾಗಲಿ, ಜಗತ್ತಿನಲ್ಲಿ ಬೆಲೆಯಿರುವುದಾದರೆ, ಆ ಕೀರ್ತಿಯೆಲ್ಲಾ ನಮ್ಮ ಋಷಿ ಪರಂಪರೆಗೇ ಸಲ್ಲಬೇಕು. ಆದ್ದರಿಂದ ನಾವು ನಮ್ಮ ಭವ್ಯ ಸಂಸ್ಕೃತಿಯ ಅರಿವಿನ ಗೌರಿಶಿಖರವನ್ನಡರ ಬೇಕಾದರೆ ಋಷಿಗಳು ತುಳಿದ ಮಾರ್ಗವನ್ನು ಅವಲಂಬಿಸದೆ ವಿಧಿಯೇ ಇಲ್ಲ. ಹಾಗಾದರೆ ಭಾರತೀಯರಾದ ನಾವು ಈ ದಿಶೆಯಲ್ಲಿ ಎಂದರೆ ಋಷಿಗಳ ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವುದರ ಕಡೆಗೆ ಎಷ್ಟು ಲಕ್ಷ್ಯವನ್ನು ಕೊಟ್ಟಿದ್ದೇವೆ? ಆಧುನಿಕ ಜಗತ್ತಿನಲ್ಲಿ ವರ್ತಮಾನಕಾಲ ನಮ್ಮ ಸಂಸ್ಕೃತಿಯರಿವಿಗೆ ಎಷ್ಟುಮಟ್ಟಿಗೆ ಅವಕಾಶ ಮಾಡಿ ಕೊಟ್ಟಿದೆ ?

ಎಮರ್ಸನ್ ಎಂಬ ಅಮೆರಿಕಾದ ಪ್ರಾಜ್ಞ ಒಂದ ಕಡೆ ಹೀಗೆ ಹೇಳಿದ್ದಾನೆ: "ನಾವು ಹಲವು ವೃತ್ತಿಗಳ ತನ್ಮಯರಾಗಿ ನಾವು ಮಾನವರು ಎಂಬ ಭಾವನೆಯನ್ನೆ ಮರೆತಿದ್ದೇವೆ." ಈ ಮಾತು ಸತ್ಯಸ್ಯಸತ್ಯ. ನಮ್ಮ ಪ್ರಾಚೀನ ಋಷಿ ಪರಂಪರೆಯು ಆಧ್ಯಾತ್ಮಿಕ ರಂಗದಲ್ಲಿ ಸಾಧಿಸಿರುವ ಅಮೂಲ್ಯ ತತ್ವಗಳ ನೆಲೆಯನ್ನರಿಯಲು ನಮಗೆ ಸಮಯವೇ ಇಲ್ಲವಾಗಿದೆ. ಟೆನಿಸನ್ ಹೇಳಿರು ವಂತೆ: 'ವರ್ತಮಾನ-ಕಾಲವೆಂಬ ಚಿಕ್ಕ ಪರ್ವತ, ಭೂತಕಾಲವೆಂಬ ದೊಡ್ಡ ಪರ್ವತವನ್ನು ಮುಚ್ಚಿಬಿಡು ತ್ತದೆ"

ಆಧುನಿಕ ವಿದ್ಯಾ ಪದ್ಧತಿಯು ಸಹ ಈ ನಿಟ್ಟಿನಲ್ಲಿ ಪ್ರಾಚೀನ ಭಾರತದ ಭವ್ಯ ದಿವ್ಯ ಭಂಡಾರದ ಬೀಗಮುದ್ರೆಯನ್ನೊಡೆಯುವುದರ ಕಡೆಗೆ ಗಮನ ಕೊಡದಿರುವುದೂ ಬಹಳ ದುರದೃಷ್ಟಕರ.

ಋಷಿಗಳು ಮಂತ್ರ ದ್ರಷ್ಟಾರರು, ತಾವು ಕಂಡುಂಡ ದಿವ್ಯ ಸತ್ಯವನ್ನು ಮಂತ್ರಗಳ ರೂಪದಲ್ಲಿ ನಮಗಾಗಿ ಬಿಟ್ಟು ಹೋಗಿದ್ದಾರೆ ಅವರು ರಚಿಸಿದ ವೇದ ಮಂತ್ರಗಳು ಜಗತ್ತಿನ ದಿವ್ಯ ನಾಗರಿಕತೆಯ ಮಹಾ ಸೌಧದಲ್ಲಿ ಕಂಗೊಳಿಸುವ ಭವ್ಯ ಕಳಶಗಳೆನ್ನ

ಬಹುದು. ಇಂದಿನ ವಿಜ್ಞಾನವು ಬಹಿರ್ದೃಷ್ಟಿಯಲ್ಲಿ ಕಂಡಿರುವ ಸೃಷ್ಟಿ ರಹಸ್ಯವನ್ನು ಋಷಿಗಳು ತಮ್ಮ ಅಂತ ರ್ದೃಷ್ಟಿಯಿಂದಲೇ ಕಂಡುಹಿಡಿದುವಿಜ್ಞಾನವನ್ನೇ ಮೂಕ ವನ್ನಾಗಿ ಮಾಡಿದ್ದಾರೆ. ವಿಜ್ಞಾನವು ಯಾವ ಅಂತಿಮ ರಹಸ್ಯವನ್ನು ಕಂಡುಹಿಡಿಯಲು ಇದುವರೆಗೂ ಸಾಧ್ಯ ವಾಗಿಲ್ಲವೊ ಅಥವಾ ಸಾಧ್ಯವಾಗುವುದಿಲ್ಲವೋ ಅಂತಹ ಪೂರ್ಣ ಸತ್ಯ ಸ್ವರೂಪವನ್ನು ತಮ್ಮ ನಿರಂತರ ತಪಶ್ಶಕ್ತಿ ಯಿಂದ ಸಾಧಿಸಿ ಕಂಡು ಆನಂದಿಸಿದ್ದಾರೆ.

ಋಷಿಗಳು ಎಂತಹವರು ? 'ಇರುಳಿನಾಚೆ ಸೂರ್ಯನೋಪಾದಿಯಲ್ಲಿ ಪ್ರಜ್ವಲಿಸುವ ದೇವನನ್ನು ಕಂಡು' ಎಂದಿದ್ದಾರೆ. ಪುರುಷ ಸೂಕ್ತದಲ್ಲಿ

ವೇದಾಹ ಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಃ ಪರಸ್ತಾತ್

ಇದು ಅವರು ಕಂಡಿರುವ ಪರಬ್ರಹ್ಮ ಸ್ವರೂಪ.
ಋಷಿಗಳೆಂದರೆ ಎಂತಹವರು ?

ಊರ್ಧ್ವರೇತಾಸ್ತಪೋಯೋಗಃ
ನಿಯತಾಶೀ ಚ ಸಂಯಮಿ
ಶಾಪಾನುಗ್ರಹಯೋ: ಶಕ್ತ:
ಸತ್ಯಸಂಧೋಭವೇ ದೃಷಿ:

ಈ ಶ್ಲೋಕವು ಋಷಿಗಳೆಂತಹವರೆಂಬುದನ್ನು ವರ್ಣಿಸುತ್ತದೆ. ಋಷಿಗಳು ಇಂದ್ರಿಯಗಳ ಉಪಟಳ ದಿಂದ ದೂರವಿರುವವರೂ, ತಪಸ್ವಿಗಳೂ, ಮಿತಾಹಾರಿ ಗಳೂ, ಸಂಯಮವುಳ್ಳವರೂ. ಶಾಪಾನುಗ್ರಹ ಸಮ ರ್ಥರೂ, ಸತ್ಯ ಸಂಧರೂ ಆದವರು.

ಸ್ವಾಮಿ ವಿವೇಕಾನಂದರು ತಮ್ಮ ಒಂದು ಭಾಷಣ ದಲ್ಲಿ ಋಷಿ ಎಂದರೆ ಯಾರೆಂಬುದನ್ನು ಹೀಗೆ ಹೇಳಿ ದ್ದಾರೆ :-

"ಋಷಿ, ಮಂತ್ರ ದೃಷ್ಟಾರ ನೆನಿಸಿದ ದಿವ್ಯಜ್ಞಾನಿ ವೇದಗಳಲ್ಲಿ ಕಂಡುಬರುವ ಜ್ಞಾನ ಸಂಪತ್ತು ಹೇಗೆ ಬಂತು ? ಅದು ಋಷಿಗಳೇ ನೀಡಿದ ದಿವ್ಯಜ್ಞಾನ. ಋಷಿ ಅಸಾಮಾನ್ಯ ವ್ಯಕ್ತಿ......ಋಷಿತ್ವವು ಕಾಲ ದೇಶಕ್ಕಾ ಗಲಿ, ಲಿಂಗ ಭೇದಕ್ಕಾಗಲಿ, ಜಾತಿ ಪಂಥಗಳಿಗಾಗಲಿ ಒಳಪಟ್ಟಿದಲ್ಲ. ಪ್ರಪಂಚದಲ್ಲಿ ಯಾರಿಗೂ ಮಹರ್ಷಿ ಯನ್ನೆದುರಿಸಲು ಸಾಧ್ಯವೇ ಇಲ್ಲ. ಋಷಿತ್ವವೆಂದರೆ ಇದೇ. ನಮ್ಮ ಸಿದ್ಧಾಂತವೂ ಇದೇ. ಇದನ್ನುಳಿದು ದೆಲ್ಲಾ ವ್ಯರ್ಥಾಲಾಪ. ತತ್ವಶಾಸ್ತ್ರ, ದ್ವೈತ, ಅದ್ವೈತ, ವೇದ-ಇವು ಮುಖ್ಯವಲ್ಲ. ಅವು ನಮ್ಮ ಆತ್ಮವನ್ನು ಪಕ್ವಗೊಳಿಸಲು ಸಾಧನಗಳು ಮಾತ್ರವಾಗಿವೆ. ನಿತ್ಯ ತತ್ವವನ್ನು ಅರಿಯುವ ಜ್ಞಾನವೇ ಎಲ್ಲಕ್ಕಿಂತ ಶ್ರೇಷ್ಠ. ವೇದಗಳಲ್ಲಿ ಕಂಡುಬರುವ ಈ ಋಷಿಗಳು ಮಾತ್ರ ಇಂತಹ ಅನುಭವವನ್ನು ಪಡೆದಿದ್ದಾರೆ, ಆದ್ದರಿಂದ ನಾವೆಲ್ಲ ಋಷಿಗಳಾಗಿ, ಋಷಿಗೋಷ್ಠಿಯಲ್ಲಿ ನೆರೆಯ ಬೇಕು. ಹಿಂದುಗಳೆನಿಸಿದ ನಮಗೆ ಇದರಿಂದಲೇ ಮೋಕ್ಷ......"

ಋಷಿ ಜೀವನದ ಅನುಭವವನ್ನು ಹೊಂದಲೆಂದು ಶ್ರೀರಾಮ ಅಡವಿಗೆ ಹೋಗಲುಬಯಸಿದ್ದಾಗಿ ವಾಲ್ಮೀಕಿ ರಾಮಾಯಣದಿಂದ ತಿಳಿದು ಬರುತ್ತದೆ :

ನಾಹಮರ್ಥ ಪರೋದೇವಿ
ಲೋಕಮಾವಸ್ತುಮುತ್ಸಹೇ
ವಿದ್ಧಿಮಾಂ ಋಷಿಭಿಸ್ತುಲ್ಯಂ
ಕೇವಲಂ ಧರ್ಮಮಾಸ್ಥಿತಂ (ಅಯೋಧ್ಯಾ ಕಾಂಡ)

ಋಷಿಗಳೇ ನಿಜವಾದ ಮಹಾ ಕವಿಗಳು. ವಾಲ್ಮೀಕಿ ಋಷಿ, ಶುಕಮಹರ್ಷಿ, ವ್ಯಾಸಮಹರ್ಷಿ ಗಳನ್ನು ಮೀರಿಸಬಲ್ಲ ಕವಿಗಳು ಹುಟ್ಟಲು ಸಾಧ್ಯವೇ ?- ಅವರ ಕವಿತೆಯ ಗುರಿಯೆಲ್ಲಾ "ಸತ್ಯಂ, ಶಿವಂ, ಸುಂದರಂ" ಈ ಅನರ್ಘ್ಯ ತತ್ವಗಳ ಕಡೆಗೇ ಆಗಿದೆ. ಕಾಳಿದಾಸ ನಂತಹ ಮಹಾ ಕವಿಯೂ ಸಹ ಮಹರ್ಷಿ ಗಳು ಹಾಕಿಕೊಟ್ಟಿರುವ ಮಾರ್ಗದಲ್ಲೇ ತನ್ನ ಕಾವ್ಯ ವನ್ನು ನಡೆಸಿಕೊಂಡು ಹೋಗುವುದಾಗಿ ತನ್ನ ರಘು ವಂಶ ಕಾವ್ಯದಲ್ಲಿ ಹೇಳಿದ್ದಾನೆ. "ನಾನೃಷಿಃ ಕುರುತೇ ಕಾವ್ಯಂ" ಎಂಬ ಉಕ್ತಿ ಋಷಿಯಾಗದವನು ಶ್ರೇಷ್ಠ ಕವಿಯಾಗಲಾರನೆಂಬುದನ್ನೇ ಸಮರ್ಥಿಸುವುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬಹುದು.

ಜಗತ್ತಿನಲ್ಲಿ ಜನತೆಗೆ ಸತ್ಯ ಸಂಗತಿಗಳನ್ನು ಮೊಟ್ಟ ಮೊದಲು ಹೇಳಿದವರೇ ಋಷಿಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಕೊನೆಯದಾದ ಮೋಕ್ಷವೇ ಸರ್ವಶ್ರೇಷ್ಠ ಪುರುಷಾರ್ಥವೆಂದು ಅವರು ಸಾರಿದರು ಲೌಕಿಕ ಸುಖಸಾಧನೆಗಳಲ್ಲಿ ಮಾತ್ರ ತೊಳಲಿ ಇಂತಹ ಅಖಂಡ, ಅಮೃತ ಪದವಿಯನ್ನು ಕಳೆದುಕೊಳ್ಳಬಾರದು. ಇದೇ ಅವರ ತತ್ತ್ವೋಪದೇಶ. ಇಂತಹ ವಿದ್ಯೋಪದೇಶವನ್ನು ಜಗತ್ತಿಗೆ ಸಾರುತ್ತಿರಲೆಂದು ಸಪ್ತ ಋಷಿಗಳನ್ನೂ ಮನುಗಳನ್ನೂ ತಾನು ಸೃಷ್ಟಿಸಿರುವುದಾಗಿ ಗೀತೆಯಲ್ಲಿ ಶ್ರೀ ಕೃಷ್ಣನು ಸಾರಿರುವುದು ಸಹ ಋಷಿ ಪರಂಪರೆಯ ಔನ್ನತ್ಯಕ್ಕೆ ಸಾಕ್ಷಿ.

> ಮಹರ್ಷಯಃ ಸಪ್ತ ಪೂರ್ವೇಚ ತ್ವಾರೋ
> ಮನವಸ್ತಥಾ।
> ಮದ್ಭಾವಾ ಮನಸಾ ಜಾತಾ ಏಷಾಂ
> ಲೋಕ ಇಮಾಃ ಪ್ರಜಾಃ॥
> ಋಷಿಗಳು ರಚಿಸಿದ ವೇದಗಳ ಪೂರ್ಣ
> ಜ್ಞಾನವನ್ನು ಪಡೆದವನೂ ನಾನೇ
> ಸರ್ವಸ್ಯ ಚಾಹಂ ಹೃದಿ; ಸನ್ನಿವಿಷ್ಟೋ
> ಮತ್ತಃ ಸ್ಮೃತಿ ಜ್ಞಾನಮಪೋಹನಂಚ
> ವೇದೈಶ್ಚ ಸರ್ವೈರಹಮೇವ ವೇದ್ಯೋ
> ವೇದಾಂತ ಕೃದ್ವೇದ ವಿದೇವ ಚಾಹಂ ॥

ಋಷೀಣಾಂ ಪುನರಾದ್ಯಾನಾಂ
ವಾಚಮರ್ಥೋऽನುಧಾವತಿ

ಇದು ಮಹಾಕವಿ ಭವಭೂತಿ ತನ್ನ 'ಉತ್ತ[ರ] ರಾಮಚರಿತ್ರೆ'ಯಲ್ಲಿ ಹೇಳಿರುವ ಮಾತು ಸಾಧಾರ[ಣ] ಮಾನವರ ವಿಷಯದಲ್ಲಾದರೋ ಶಬ್ದಗಳು ಅರ್ಥವನ್[ನು] ವ್ಯಕ್ತಪಡಿಸುತ್ತವೆ; ಮಹರ್ಷಿಗಳ ವಿಷಯದಲ್ಲಿ ಶಬ್ದಾ[ರ್ಥ]ರ್ಥವನ್ನು ವಿವರಿಸುವ ವಿಷಯವು ಶಬ್ದದ ಅರ್ಥ ವ್ಯಾಪ್ತಿಯನ್ನು ಮೀರಿ ಮುಂದೆ ಹೋಗುತ್ತದೆ ಎಂ[ದು] ಇದರರ್ಥ.

ಭಾರತೀಯ ಸಂಸ್ಕೃತಿಯ ಮೇಲೆ ಋಷಿಗ[ಳ] ಪ್ರಭಾವ ಅಚ್ಚಳಿಯದೆ ನಿಂತಿದೆ. ಭಾರತದ ದಿವ್ಯಭವ[ನ] ಸಂಸ್ಕೃತಿಯ ಸೌಧವನ್ನು ನಿರ್ಮಿಸಿದವರೇ ಅವರು ಸ್ವಾವಲಂಬದ ಆಧಾರದ ಮೇಲೆ ಸ್ಥಿರವಾದ ಸುಭದ್ರವಾದ ಆದರ್ಶಯುತವಾದ ಸಮಾಜವನ್ನು ಕಟ್ಟಿದವರು ಅವರೇ ಅವರು ರಚಿಸಿದ ವೇದ ಪುರಾಣ ಉಪನಿಷತ್ತುಗಳೇ ಅಲ್ಲದೆ ನೀತಿ-ಶಾಸ್ತ್ರ, ಅರ್ಥ-ಶಾಸ್ತ್ರ, ರಾಜ[ನೀತಿ] ಶಾಸ್ತ್ರ, ಆಧ್ಯಾತ್ಮತತ್ತ್ವೋಪದೇಶಗಳು ನಮ್ಮ ಸ್ವಾರ್ಥ[ದ] ಹೃದಯದ ಕಲ್ಮಷತೆಯನ್ನು ತೊಡೆದುಹಾಕಿ ಇಹಪ[ರ] ಸೌಖ್ಯಗಳನ್ನು ಕರುಣಿಸಿ ಪರಿಪೂರ್ಣ ಪರಂಜ್ಯೋತಿಯ ಸಾಕ್ಷಾತ್ಕಾರ ಮಾಡಿಸಿ ಪರಿಪೂರ್ಣತೆಯೆಡೆಗೆ ಕರೆದೊಯ್ಯುತ್ತವೆ.



ನಾವು

ಒಂದಾದೆವು। ನಾವು। ಒಂದಾದೆವು ॥ಪ॥
ಒಂದಾಗಿ-ಹೊಂದಾಗಿ! ಮುಂದಾಗಿ ನಡೆದೆಂದು
ಒಂದಾದೆವು! ನಾವು— ಒಂದಾದೆವು ॥ಅ ಪ॥
ಭಾರತಾಂಬೆಯ ಗರ್ಭ-ಸಂಜಾತರೈ ನಾವು।
ಭಾರತಿಯ ಸಂದೇಶ ಕೇಳುವೆವು ನಾವು॥
ಆರದೊಲು ಹಚ್ಚಿದಾ ದೀಪವನು ಉರಿಸುವೆವು।
ಊರಿರುವ ಸಂಸ್ಕೃತಿಯ ಸೇರಿ ತೈಲವೆರೆದು ॥೧॥

ವಿವಿಧ ಮತ—ಜಾತಿಗಳು. ಹಿಂದಣಾ
ಬೇರುಗಳು!
ಅವಿರತದ ಧಾಳಿಗಳು, ಬಹಳ ಯುದ್ಧಗಳು॥
ಕವಿ-ಕವಿದು ಬರುತಿದ್ದ ವೈರಿಗಡಣಕೆ ಮಣಿದು
ವಿವಿಧತೆಯೊಳೇಕತೆಯನುಳಿಸಿರುವ ಕತದಿಂದೆ ॥೨॥

ಎಸ್. ಹೆಚ್. ಗೀರ್ವಾಣಮ್ಮ

ಅಮೆರಿಕದಲ್ಲಿನ ಉಪಾಧ್ಯಾಯ—ಶಿಕ್ಷಣದ ಒಂದು ವೀಕ್ಷಣೆ

ಮೂಲ: **ಕೆ. ವಿ. ಚಂದ್ರಶೇಖರಯ್ಯ,**

ಅನುವಾದ: **ಕೆ. ಪಿ. ಶಿವಲಿಂಗಯ್ಯ.**

ಆಧುನಿಕ ಜಗತ್ತಿನಲ್ಲಿ ಶಿಕ್ಷಣದ ಮಹತ್ವವು ನಿರ್ಲಕ್ಷಿಸುವಂತಹುದಲ್ಲ. ಲೋಕದ ಎಲ್ಲ ಅಪಾಯಗಳಿಂದಲೂ ರಕ್ಷಿಸುವ ಏಕೈಕ ಸಾಧನ 'ಶಿಕ್ಷಣ'. ಬುದ್ಧ. ಬಸವ, ಗಾಂಧಿ, ಜಾನ್‌ಡ್ಯೂಯಿ (John Dewey) ಮೊದಲಾದ ಶಿಕ್ಷಣ-ಯೋಜಕರು ಮಾನವನ ಆದರ್ಶವಾದಕ್ಕೆ ಕರೆಯಿತ್ತರಲ್ಲದೆ, ಮನುಷ್ಯನ ನಿಯಮ ಬದ್ಧವಾದ ಜೀವನಕ್ಕೆ ವಾಸ್ತವತೆಯನ್ನು ಅನ್ವಯಿಸಲು ಪ್ರಯತ್ನ ಪಟ್ಟರು. ಶಿಕ್ಷಣದಲ್ಲಿ ನಿಷ್ಠಾವರ್ಗ-ವಿಭಾಗಗಳನ್ನು ನಂಬುವ ಒಂದು ಯುಗದಲ್ಲಿ ಅಮೆರಿಕನರು ಎಲ್ಲರೂ ವಿದ್ಯಾವಂತರಾಗಬೇಕೆಂದೂ ಮತ್ತು ಪ್ರತಿಯೊಬ್ಬರಿಗೂ ಸಮಾನಾವಕಾಶಗಳು ಒದಗಬೇಕೆಂದೂ ಬಯಸುತ್ತಾರೆ.

ಸಮಾಜದಲ್ಲಿ ಶಿಕ್ಷಕನ ಪ್ರಭಾವ ಅಮಿತವಾಗಿರಬಲ್ಲುದು. ಆತನ ಅಭಿಪ್ರಾಯಗಳು ಪ್ರಪಂಚದ ಸಹಸ್ರಾರು ಜನರ ಮೇಲೆ ಪರಿಣಾಮ ಬೀರಬಹುದು. ಅವು ನಾಗರೀಕತೆಯಲ್ಲಿ ಒಂದು ಘನವಾದ ಮಾರ್ಪಾಟನ್ನೇ ಮಾಡಬಹುದಲ್ಲದೆ. ಮಾನವ ವರ್ಗದ ನಾಯಕರನ್ನು ಸೃಷ್ಟಿಸಲೂ ಬಹುದು.

ಅಬ್ರಹಾಮ್ ಲಿಂಕನನು ಗಡಿನಾಡಿನ ಒಬ್ಬ ಅಧ್ಯಾಪಕ ಮೆಂಟರ್ ಗ್ರಹಾಮ್ (Mentor Graham)ನಿಗೆ ತಾನು ಋಣಿಯಾಗಿದ್ದುದರ ಪ್ರಜ್ಞೆಯುಳ್ಳವನಾಗಿದ್ದನು. ಏಕೆಂದರೆ ಆತನಿಂದ ವ್ಯಾಕರಣವನ್ನೂ, ನ್ಯಾಯವಾದದ ಮೂಲ - ತತ್ತ್ವಗಳನ್ನೂ ಕಲಿತಿದ್ದನು. ಲಿಂಕನನು 1832ರಲ್ಲಿ "ನಾವು ಒಂದು ಜನಾಂಗವಾಗಿ ರೂಪುವಡೆಯುವಲ್ಲಿ ಶಿಕ್ಷಣವೇ ಅತ್ಯಂತ ಮುಖ್ಯವಾದ ವಿಷಯ" ಎಂಬುದಾಗಿ ಪ್ರತಿಪಾದಿಸಿದನು

ಅಮೆರಿಕದ ಜನತೆ ಉಪಾಧ್ಯಾಯರ ಪ್ರಾಮುಖ್ಯತೆಯನ್ನು ಗುರುತಿಸಿದೆ. ಈ ಕಾರಣದಿಂದ ಅಲ್ಲಿನ ವಿಶ್ವವಿದ್ಯಾನಿಲಯಗಳು ಬಹುಮಟ್ಟಿಗೆ ಶಿಕ್ಷಣಕ್ಕೆಂದೇ ಪ್ರತ್ಯೇಕ ಪಾಠಶಾಲೆಯನ್ನು ಹೊಂದಿವೆ ಈ ಶಾಲೆಗಳಲ್ಲಿ ಶಿಕ್ಷಣದ ಪ್ರಧಾನ ವಿಷಯಗಳು ಮುಂದೆ ಕಾಣಿಸುವ ಭಾಗಗಳನ್ನೊಳಗೊಂಡಿವೆ :

1. ಶೈಕ್ಷಣಿಕ ಆಡಳಿತ ಮತ್ತು ಮೇಲ್ವಿಚಾರಣೆ.

2. ಸಾಮಾಜಿಕ ಮತ್ತು ತತ್ತ್ವ-ಶಾಸ್ತ್ರದ ಮೂಲ ವಿಷಯಗಳು

(ಎ) ಶಿಕ್ಷಣದ ತತ್ತ್ವ ಶಾಸ್ತ್ರ.

(ಬಿ) ಶೈಕ್ಷಣಿಕ ಇತಿಹಾಸ.

(ಸಿ) ಶಿಕ್ಷಣದ ಸಮಾಜ ಶಾಸ್ತ್ರ.

(ಡಿ) ತೌಲನಿಕ ಅಥವಾ ಅಂತರ ರಾಷ್ಟ್ರೀಯ ಶಿಕ್ಷಣ ಶಾಸ್ತ್ರ.

(ಇ) ಶೈಕ್ಷಣಿಕ ಮನಶ್ಶಾಸ್ತ್ರ.

3. ಮಾರ್ಗದರ್ಶನ ಮತ್ತು ಸಮಾಲೋಚನೆ.

4. ಟೆಸ್ಟ್‌ಗಳು ಮತ್ತು ಪ್ರಮಾಣಗಳು.

5. ಬೋಧನಾ ಕ್ರಮಗಳು.

6. ಶ್ರವಣ-ದರ್ಶಕ ಪದಾರ್ಥಗಳು (Audio visual materials).

7. ಪ್ರಾಥಮಿಕ ಶಿಕ್ಷಣ.

8. ಮಾಧ್ಯಮಿಕ ಶಿಕ್ಷಣ (Secondary Education).

9. ಪ್ರೌಢ ಶಿಕ್ಷಣ (Higher Education).

10. ಕಾಲೇಜು ಶಿಕ್ಷಣ.

11. ಶಾಲಾ ನಿಯಮ, ಆಯವ್ಯಯ ಶಾಸ್ತ್ರ ಮತ್ತು ಕಾರ್ಯ ನಿರ್ವಹಣೆ.

12. ವಯಸ್ಕರ ಶಿಕ್ಷಣ.

13. ವಿದ್ಯಾರ್ಥಿ-ಬೋಧನೆ.

14. ಭಾಷಣದ ತಿದ್ದುವಿಕೆ (Speech-correction).

15. ಓದುವುದು. ಬರೆಯುವುದು, ಅಂಕಗಣಿತ, ದೈಹಿಕ ಶಿಕ್ಷಣ, ಸಾಮಾಜಿಕ ಅಭ್ಯಾಸ, ಪ್ರಾಣಿ-ವನಸ್ಪತಿ ವಿಜ್ಞಾನ (Biological Sciences), ದೈಹಿಕ ವಿಜ್ಞಾನ, ಔದ್ಯೋಗಿಕ ಕಲೆಗಳು ಮುಂತಾದ ವಿಷಯಗಳ ಬೋಧನೆ.

16. ಶೈಕ್ಷಣಿಕ ಸಂಶೋಧನೆ.

ಅಮೆರಿಕದಲ್ಲಿ ದೂರದೃಷ್ಟಿಯುಳ್ಳ ಶಿಕ್ಷಕನು ಶೈಕ್ಷಣಿಕ ತಜ್ಞತೆಯ ಕ್ಷೇತ್ರಗಳಲ್ಲಿ ಪರಿಚಯವುಳ್ಳವನು ಮಾತ್ರನಲ್ಲ; ಯಥೋಚಿತವಾದ ಸಾಧಾರಣ ಜ್ಞಾನವನ್ನು ಕೂಡ ಗಳಿಸಿರುತ್ತಾನೆ. ಬೇರೆ ವಿಷಯಗಳಲ್ಲಿ ವಿಶಾಲವಾದ ಹಿನ್ನೆಲೆಯನ್ನು ಹೊಂದಿರುವ ಶಿಕ್ಷಕರು ತಮ್ಮ ಸ್ವಂತ ವಿಶಿಷ್ಟ ವಿಷಯದಲ್ಲಿಯಂತೂ ಪೂರ್ಣ ಪಾಂಡಿತ್ಯ ಪಡೆದಿರುತ್ತಾರೆ.

ಶಿಕ್ಷಣದಲ್ಲಿ ಸ್ನಾತಕ ಪದವಿ ಗಳಿಸಬೇಕಾದರೆ ವಿದ್ಯಾರ್ಥಿಯು ಎಲ್ಲ ಅಗತ್ಯಗಳನ್ನೂ ತನ್ನ ತಜ್ಞತೆಯ ಬಗೆಗೆ ಪೂರೈಸಬೇಕಲ್ಲದೆ, ಶಿಕ್ಷಣದ ಶಾಲಾ ಹಂತಗಳನ್ನೂ ಪರಿಚಯ ಮಾಡಿಕೊಳ್ಳಬೇಕು.

ಉಪಾಧ್ಯಾಯನ ಸಿದ್ಧತೆಯ ಮುಖ್ಯ ಭಾಗವೆಂದರೆ-ತನ್ನ ಪ್ರಾಯೋಗಿಕ ಬುದ್ಧಿವತ್ತೆಯನ್ನೂ ಪ್ರಗತಿಯನ್ನೂ ಬೆಲೆಗಟ್ಟುವ ನಿಪುಣ ಪ್ರಾಧ್ಯಾಪಕನ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುವುದು.

ಶಿಕ್ಷಣದಲ್ಲಿ ಪದವಿ ಪಡೆದ ಮಾತ್ರಕ್ಕೆ ಉದ್ಯೋಗದ ಖಾತರಿಯೇನಿಲ್ಲ. ಅಧ್ಯಾಪಕನು ಉದ್ಯೋಗಕ್ಕೆ ಅರ್ಜಿ ಸಲ್ಲಿಸುವುದಕ್ಕೆ ಮೊದಲು ಬೋಧನಾ ಕ್ರಮದಲ್ಲಿ ತನಗಿರುವ ಶಕ್ತಿಯನ್ನು ಗುರುತಿಸಬಲ್ಲ ಶಿಕ್ಷಣ ಇಲಾಖೆಯಿಂದ ಯೋಗ್ಯತಾ ಪತ್ರವನ್ನು ಪಡೆಯಬೇಕು. ಅದನ್ನು ಪಡೆಯಬೇಕಾದರೆ ಇರಬೇಕಾದ ಅರ್ಹತೆಗಳು ಒಂದು ಸಂಸ್ಥಾನದಿಂದ ಇನ್ನೊಂದು ಸಂಸ್ಥಾನಕ್ಕೆ ಬೇರೆ ಬೇರೆ ಇರುತ್ತವೆ. ಸಂಸ್ಥಾನದ ಶಿಕ್ಷಣ-ಇಲಾಖೆಗಳು ನೈತಿಕ ಭ್ರಷ್ಟತೆಯ ವಿಷಯಗಳಲ್ಲಿ ತಾವು ಕೊಟ್ಟ ಯೋಗ್ಯತಾ ಪತ್ರವನ್ನು ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತವೆ.

ಉದ್ಯೋಗಸ್ಥ ಶಿಕ್ಷಕರು ತಮ್ಮ ನೌಕರಿಯಲ್ಲಿ ನಿಲ್ಲುವಿಕೆಯನ್ನು ತಡೆಗಟ್ಟುವುದಕ್ಕಾಗಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಅಭ್ಯಾಸ ಮಾಡಲು ಶಾಲಾ ಪದ್ಧತಿ ಹಾಗೂ ಶಿಕ್ಷಣ - ಇಲಾಖೆಗಳಿಂದ ಪ್ರೋತ್ಸಾಹಿಸಲ್ಪಡುತ್ತಾರೆ. ಬೋಧನಾಕ್ರಮದಲ್ಲಿ ದಕ್ಷತೆಯನ್ನು ಹೆಚ್ಚಿಸಲು ವಿಶ್ವವಿದ್ಯಾಲಯ ಹಾಗೂ

ಕಾಲೇಜುಗಳು ಬೇಸಗೆ ಶಾಲೆಗಳನ್ನೂ, ಸಂಜೆಯ ತರಗತಿಗಳನ್ನೂ ತೆರೆಯುವ ವ್ಯವಸ್ಥೆ ಮಾಡುತ್ತವೆ. ಅಲ್ಲಿನ ಅಭ್ಯಾಸ ವಿಷಯಗಳು ಔದ್ಯೋಗಿಕ ಶಿಕ್ಷಣಕ್ಕೆ ಮಾತ್ರವೇ ಸೀಮಿತವಾಗದೆ ಪ್ರಗತಿಪರವಾದ ಕಲೆಗಳನ್ನೂ ಒಳಗೊಂಡಿರುತ್ತವೆ.

ವಿಶ್ವವಿದ್ಯಾಲಯಗಳಿಗೆ ಹಾಜರಾಗಲು ಆಸಕ್ತಿಯುಳ್ಳ ಉಪಾಧ್ಯಾಯರು ಶಾಲಾ ಮಂಡಲಿ, ಶಿಕ್ಷಣ ಇಲಾಖೆ ಮತ್ತು ಫೆಡರಲ್ ಸರ್ಕಾರಗಳಿಂದ ಹಣ ಪಡೆಯುತ್ತಾರೆ. ಅಧ್ಯಾಪಕರು ತಮ್ಮ ವ್ಯಾಸಂಗವನ್ನು ಜಯಪ್ರದವಾಗಿ ಮುಗಿಸಿದರೆ, ಅಂತಹವರಿಗೆ ಉತ್ತೇಜನಾರ್ಥವಾಗಿ ಬಡ್ತಿಗಳನ್ನು ಕೊಡಲಾಗುತ್ತದೆ.

ಅಧ್ಯಾಪಕ-ಸದಸ್ಯರ ಆಸಕ್ತಿಗಳನ್ನು ಪ್ರತಿಬಿಂಬಿಸುವ ನ್ಯಾಷನಲ್ ಎಜ್ಯುಕೇಷನ್ ಅಸೋಸಿಯೇಷನ್ ನಂತಹ ಔದ್ಯೋಗಿಕ ಸಂಘಗಳಿಗೆ ಶಿಕ್ಷಕರು ಸದಸ್ಯರಾಗುತ್ತಾರೆ ಈ ಶೈಕ್ಷಣಿಕ ಸಂಸ್ಥೆಗಳು ದೇಶದಲ್ಲಿ ಶಿಕ್ಷಣ ಮಟ್ಟವನ್ನು ಸುಧಾರಿಸಲೂ, ಜನಪ್ರಿಯವನ್ನಾಗಿ (Mass-Education) ಪ್ರೋತ್ಸಾಹಿಸಲೂ ಹೆಣಗುತ್ತವೆ ಅವು ಶಿಕ್ಷಕರಿಗೆ ಉತ್ತಮ ವೇತನಗಳು, ಶ್ರೇಷ್ಠ ಅಧ್ಯಾಪಕರು, ಎಲ್ಲ ಜನಾಂಗದವರಿಗೂ ಸಮಾನಾವಕಾಶ-ಮುಂತಾದವುಗಳಿಗಾಗಿ ಶಿಫಾರ್ಸು ಮಾಡುತ್ತವೆ.

ಈ ರೀತಿ ಅಮೆರಿಕ ಸಂಯುಕ್ತ-ಸಂಸ್ಥಾನಗಳಲ್ಲಿ ಶಿಕ್ಷಕ-ಶಿಕ್ಷಣವು ಒಂದು ದೊಡ್ಡ ಸಾಹಸ-ಕಾರ್ಯವಾಗಿದೆ. ಅಮೆರಿಕದಲ್ಲಿ ಪ್ರಜಾಪ್ರಭುತ್ವದ ಆದರ್ಶಗಳಿಗನುಗುಣವಾಗಿ ಜನಾಂಗವನ್ನು ಕಟ್ಟಲು ಉತ್ತಮ ಹಾಗೂ ತರಬೇತು ಹೊಂದಿದ ಶಿಕ್ಷಕರು ಅತ್ಯಗತ್ಯವೆಂದು ಪರಿಗಣಿಸಲಾಗಿದೆ.

ಹಿಂದಿನದನ್ನು ಅನುಕರಿಸಿಯೇ ನಾವು ಬುದ್ಧಿವಂತರಾಗಬೇಕಾಗಿಲ್ಲ; ಆದರೆ ಭವಿಷ್ಯ ಜೀವನವನ್ನು ರೂಪಿಸಿಕೊಳ್ಳುವ ಬಗೆಗೆ ಚೆನ್ನಾಗಿ ಆಲೋಚಿಸಬೇಕು. ಅಂತಹ ಭವಿಷ್ಯವನ್ನು ಪರಿಭಾವಿಸುವ ನೂತನ ಅಂಶಗಳ ಅಂಗೀಕಾರವು ಅಮೆರಿಕಾ-ಶಿಕ್ಷಣದ ವೈಶಿಷ್ಟ್ಯ ಪೂರ್ಣವಾದ ಲಕ್ಷಣಗಳಲ್ಲಿ ಒಂದಾಗಿದೆ.



ಬಸವ ಬಲ್ಲಿದ ನೀನು

ಮೌಢ್ಯದಾ ಬಲೆಯಲ್ಲಿ ತೊಳಲುತಿದ್ದಿತು ನಾಡು ;
ನೂರು-ನುಡಿ, ನೂರು-ನಡೆ, ನೂರು ತೆರ ಜಾತಿಯಲಿ
ಚೂರಾಗಿ ಒಡೆದಿತ್ತು; ನೀ ಬಂದೆ ಬೆಳಕಿನೊಲು
ನಾಡಿದನು ಉದ್ಧರಿಸಿ, ಒಂದುಗೂಡಿಸಲೆಂದು.
'ದೇವನೊಬ್ಬನು' ಎಂದೆ ; ಮುಕ್ತಿ-ಮಾರ್ಗಕೆ ಪಥವ

ಅರುಹಿ ನೀ ಮುಂದಾದೆ; ಕಣ್ತೆರೆದ ನಾಡ-ಜನ
ಬರ-ಬರಲು ತೊಡಗಿತದು ನಿನ್ನ ಬೆಳಕಿನ ಹಿಂದೆ;
ಮನೆ-ಮನೆಯು ಮಾತಾಯ್ತು ನೀನು ಬಾಳಿದ ರೀತಿ.
ಜನರ ಬದುಕಿನ ಕಳೆಯು ಕಿತ್ತೆ ನೀ ಪುರುಷ-ಮಣಿ
ಬಸವ ಬಲ್ಲಿದ ನೀನು ನುಡಿಗಡಣ-ಗುಣದ ಗಣಿ.

"ಅಲ್ಲಮ"

ಹಾಡುವೆ ನಾಡಹಬ್ಬದ ಹೆಸರ

ಲೇಖಕರು : **ಎಂ.ಜಿ. ನಾಗರಾಜ**

ಬಂದಿತು
ನಾಡಿನಹಬ್ಬ, ಚೇತನ ನಲಿಯುವ ಹಬ್ಬ
ಮೂಡಿತು
ಕವಿಯೊಳು ಕಬ್ಬ. ಭಾವದ ಕಾಶಿಯ ಕಬ್ಬ.
ವೈಭವ, ವಿಜೃಂಭಣ; ಸಡಗರ, ಸಂಭ್ರಮ
ನಾಡಹಬ್ಬದಿ ನಿತ್ಯನಡೆಯುವ ನಾಣ್ಯ
ಸಂಸ್ಕೃತಿ ಸಿಂಹಕೆ ಅಭಯಾರಣ್ಯ
ನಾಡಹಬ್ಬದಿ ನಲಿಯುವ ಗೇಹ, ಉಲಿಯುವ ಭಾಷೆ, ಹಾಡುವ ಗೀತೆ
ನಾಡವಂದಿಯು ಸವಿಭಾವ ಸ್ನೇಹದಂಗಣದಿ ಸಮರಸವ ಸುಸ್ರೋತೆ.
ಮನ ನಿರ್ಮಲ, ನಡೆ ನಿರ್ಮಲ
ಅರಿವಿನ ನೆಲೆ ಉದ್ಯಾಪನ; ಸೆಲೆ ಸಂಗೋಪನ
ತೆರೆತೆರೆಯಾಗಿ, ಅಲೆಯಲೆಯಾಗಿ
ಎದೆ ನೆಲದೊಳು ಗುಣದಂಬಾರಿಯು ಆಗಮನ.
ಅಮ್ಲ ಜನಕದಿ ಮ್ಯಾಗ್ನೀಷಿಯಂ
ತಂತಿ ಉರಿವಂತೆ ಎದೆ ಮನೆಯು ಬೆಳಕಿನಂಗಣ
ನಾಡಹಬ್ಬದ ಜಣಜಣ ನವರಾತ್ರಿಯ ರಿಂಗಣ.
ದುರ್ಗೇ ಲಕ್ಷ್ಮೀ ಸರಸ್ವತೀ ಮಹತ್ ಶಕ್ತಿ ಮಹರ್ನವಮೀ ಮೆರುಗ
ಸಂಸ್ಕೃತಿಯ ಬೆಳುದಿಂಗಳಿನಲಿ ದ್ರೌಪದಿಯು ಹೊತ್ತ ಕರಗ
ಕನ್ನಡದ ಜನಕೋಟಿಯಲಿ ನವ-ಪರಂಪರೆ ಗಾಳಿದಿರುಗ

x x x x x

ಹಳೆಯ ಕಾಲದ ಗಾಳಿ ಓಡುತಿದೆ ಓಡುತಿದೆ
ದಾರಿಯುದ್ದಕೂ ಹಾಕಿದ್ದ ಜಲ್ಲಿಕಲ್ಲುಗಳಿಗೆ ಸಿಲುಕಿದರೂ, ಸವೆದರೂ
ಆದರೂ,
ಹೊಸಕವಚ ತೊಟ್ಟು ಮುಂದೆ ಓಡಲೆಳಸುತಿದೆ,

ಕಾಲಕ್ಕೆ ಅಳಿಸಿ ಹಾಕುವಾ ಛಲವುಂಟು.
ಆದರೂ ಮನುಜ ಚೇತನವು ಬದುಕಿ ಬಾಳುತಿಹುದುಂಟು
ಕಾಲಕ್ಕೆ ಉಳಿಸಿಹಾಕುವ ಕಸವುಂಟು,
ಆದರೂ ಮನುಜನದ ರಸಮಾಡಿ ಹಿಂಡಿಕೊಟ್ಟುದುದುಂಟು.
ಅಂತೇ ಎದೆಮಿಡಿತ ನೂರುವರುಷದ ಕಾಲ ಮನುಜಗೆ ನಂಟು
ಮರದ ಮೇಲಿನ ಹಣ್ಣು ಕುಳಿತು ಬೀಳುವವರಿಗೂ
ಕಾಯ್ದು ನೋಡುವ ಸಹನೆ ರುಚಿ ವೈಭವ ಆರಿಗುಂಟು?

X X X X

ಮುಂಬರುತಿಹ ಸ್ಪುತ್ನಿಕ್ಕ ನೋಡಿಸುವೆನೆನ್ನುವ
ಸಾಹಸೀ ಸಾರಥಿ.
ಯಾವ ನವ ನವಯುವಕ?
ಸುಸ್ವಾಗತ!
ಹತ್ತು ವರುಷಗಳ ಹಿಂದೆ ಹಾಕಿದ ಟಾರು ರಸ್ತೆಯು ದಾರಿ
ಈಗ ಉಟ್ಟಿದೆ ಮೈಗೆಲ್ಲ ಬರೀ ಹರಕು ಕರಿ ಸೀರೆ
ಕಣ್ಣು ಮೈಯೆಲ್ಲ ಮೇಲೇ ಇರಲು
ಕಾಂಬುದಾದರೆ ಕೆಳನೆಲದ ಈ ಕೊರಕಲು!
ನಾಡ ಅಂಗಣದಿ ನೀನೇ ಪುರುಷಸೇವಕ ಭಾವು!
ತೊಡಿಸುವಿಯೇನು
ಕಿನಿಸು ಮದ ಧೌಲುಗಳ ಗರ್ಭದ್ವಾರಕೆ ಲೂಪು?


X X X X

ಮನದರಮನೆಯ ಜಂಬೂಸವಾರಿ
(ಕೆಂಪು ರಕ್ತ ಕಣಗಳ ಸಾಲ ಮೇಲೆ ಬಿಳಿರಕ್ತ ಕಣಗಳ ಮೇಲುಸ್ತುವಾರಿ)
ದಾರಿಯುದ್ದಕೂ ನಿಂತು ನಕ್ಕು ನಲಿಯುವ ಜನಮನ!
ನೀ ಬಂದೆ ಮಧ್ಯೆ ಮನ ಯುವರಾಜ
ಎಂದಾಗುವಿ ಸಗುಣಭಾವ ಮಹಾರಾಜ?
(ಉಳಿದು ಮರೆಮಾಚು, ಮೋಸ ರಾಜಕೀಯದ ಧೌಲು)
ತವಿದು ನಿನ್ನಲ್ಲಿ ವೈಭವದ ಅಪಮೌಲ್ಯ
ಸ್ಥಾಪಿಸುವೆ ಯಾವ ಪ್ರತಿಷ್ಠಾನ?
ಅಣಿಯರದಿ ತರುವೆ ಕರುನಾಡಿಗಾವ ಬಹುಮಾನ?

X X X X

ನಾಡಹಬ್ಬದಿ
ದೇಹ ದೇಗುಲವೆಂಬ ಭಾರತಿಗೆ ಮನ ಕನ್ನಡಿಗನೀ ಪಂಚಾರತಿ

ಭಾವತೇಜಿಯೊಳು ವೈಹಾಳಿಗೆ ಕವಿಕನ್ನಡಿಗರು ಛಡಾಳಿಮತಿ.
ಮೊದಲು ನಾ ಭಾರತೀಯ; ಅನಂತರವೆ ನಾ ಕನ್ನಡಿಗ;
ಇದು ಆವಕಾಲಕೂ ಸತ್ಯ
ನಾನೆತ್ತಿ ಬರಬಹುದಾನೂರು ಜನುಮಗಳೆಲ್ಲಕೂ
ನನ್ನ ಸಂತಾನ ಬೆಳೆವುದುದ್ದಕೂ
ಇದೇ, ಇದೇ ನನ್ನ ಹೃದಯದಭೀಪ್ಸೆ.
ಹಾಗೆಂದು ಈಗ ನಾನಿರುವ ಮನೆಯ
ಮಂಗಳಕೆ ಅಂದಚಂದಕೆ
ಸುಣ್ಣಬಣ್ಣವ ಮಾಡಿ ತೋರಣವ ಕಟ್ಟದಿರುವುದಾವತೆರ?
ಮಹಮನೆಯ ಶೋಭನೆಗೆ ಕಿರುಮನೆಯು
ಕಾಂತಿಯೆಂದು ನಾ ಹಾಡುವೆ
ಕನ್ನಡದ ಶ್ರೀ ಮಂಟಪದಿ ಈ ಕರುನಾಡ ಹಬ್ಬದ ಹೆಸರ.



ಸರ್ವಜ್ಞ ಪದಗಳು

ರಚಿಸಿದವರು : **ಜಗ್ಗು ಶಿಂಗರಾಯರ್**

ಆಟಮೆಂಬುವ ಬಾಂಬಿನೇಟ ತಡೆಯಲಿಕಹುದೆ
ಆಟದೊಳೆ ಜಗವ ಸುಡುವುದಿದೆ ವಿಜ್ಞಾನ-
ದಾಟಕಾಣಯ್ಯ ಸಾರ್ವಜ್ಞ.

x x x x

ಹಿಡಿದ ಕಾರ್ಯಗಳೆಲ್ಲ ತೊಡಕಿರದೆ ಕೈಗೂಡೆ
ಮಡದಿ ಸಿರಿ ದೃಢಕಾಯವಿರಲು ದೇವರೊಳು
ದೃಢಭಕ್ತಿಯಹುದೆ ಸಾರ್ವಜ್ಞ

ಅಹಿಂಸಾಧರ್ಮ

ಭಾರತೀಯರ ಮುಂದಿನ ಸವಾಲು

ಲೇಖಕರು :

ಜಿ. ವಿ. ನಾರಾಯಣಮೂರ್ತಿ

ಆದರ್ಶ ದರ್ಶನ :

ಅಹಿಂಸಾ ಪರಮೋ ಧರ್ಮಃ
ಅಹಿಂಸಾ ಪರಮಂ ತಪಃ
ಅಹಿಂಸಾ ಪರಮಂ ಸತ್ಯಂ
ತತೋ ಧರ್ಮಃ ಪ್ರವರ್ತತೇ

(ಅಹಿಂಸೆ ಪರಮ ಧರ್ಮ, ಅಹಿಂಸೆ ಪರಮ ಸತ್ಯ; ಅಹಿಂಸೆಯಿಂದ ಎಲ್ಲ ಧರ್ಮಗಳೂ ಮುಂದುವರಿಯುತ್ತವೆ)

ಮಹಾಭಾರತದ ಅನುಶಾಸನ ಪರ್ವದಲ್ಲಿ ಉಕ್ತವಾಗಿರುವ ಮಾತಿದು; ಕುರುಪಿತಾಮಹ ಭೀಷ್ಮ ಯುಧಿಷ್ಠಿರನಿಗೆ ಬೋಧಿಸಿದುದು. ಹಿಂದೂ ಧರ್ಮದಲ್ಲಿ ಅಹಿಂಸೆಗೆ ಇರುವ ಸ್ಥಾನವನ್ನು ಇದು ವ್ಯಕ್ತಪಡಿಸುತ್ತದೆ.

ಪದ್ಮಪುರಾಣದಲ್ಲಿ ಉಲ್ಲೇಖವಾಗಿರುವ ಈ ಕೆಳಗಿನ ಮಾತು, ಹಿಂದೂ ಧರ್ಮದಲ್ಲಿ ಅಹಿಂಸೆಯ ಸ್ಥಾನವನ್ನು ರಮ್ಯವಾಗಿ ವರ್ಣಿಸುತ್ತದೆ

ಅಹಿಂಸಾ ಪ್ರಥಮಂ ಪುಷ್ಪಂ
ಪುಷ್ಪಂ ಇಂದ್ರಿಯ ನಿಗ್ರಹಃ
ಸರ್ವ ಭೂತ ದಯಾ ಪುಷ್ಪಂ
ಕ್ಷಮಾಪುಷ್ಪಂ ವಿಶೇಷತ:
ಶಾಂತಿ ಪುಷ್ಪಂ ತಪಃ ಪುಷ್ಪಂ
ಧ್ಯಾನ ಪುಷ್ಪಂ ತಥೈವ ಚ
ಸತ್ಯಂ ಅಷ್ಟ ವಿಧಂ ಪುಷ್ಪಂ
ವಿಷ್ಣೋಃ ಪ್ರೀತಿ ಕರಂ ಭವೇತ್

(ವಿಷ್ಣುವಿಗೆ ಪ್ರೀತಿಕರವಾದ ಪುಷ್ಪಗಳು ಎಂಟು ಬಗೆ: ಅವು ಅಹಿಂಸಾ, ಇಂದ್ರಿಯ ನಿಗ್ರಹ, ಸರ್ವಭೂತ ದಯಾ, ಕ್ಷಮಾ, ಶಾಂತಿ, ತಪಸ್ಸು, ಧ್ಯಾನ ಮತ್ತು ಸತ್ಯ.)

ಭಗವಂತನ ಅರ್ಚನೆಗೆ ಎಂಥ ಸೊಗಸಾದ ಪುಷ್ಪಗಳು! ಇವುಗಳಲ್ಲಿ ಮೊದಲನೆಯ ಸ್ಥಾನ ಅಹಿಂಸೆಗೆ. ಅಹಿಂಸೆಯೇ ಎಲ್ಲಕ್ಕೂ ತಳಹದಿ. ಅದಿಲ್ಲದೆ ಯಾವ ಧರ್ಮವೂ ಸಿದ್ಧಿಸದು; ಯಾವ ಬಗೆಯ ಸಾಕ್ಷಾತ್ಕಾರವೂ ಲಭಿಸದು. ಆದುದರಿಂದಲೇ 'ಅಹಿಂಸಾ ಪರಮೋ ಧರ್ಮಃ' ಎಂಬ ನುಡಿ ಜನಜನಿತವಾಗಿ ಪ್ರಸಿದ್ಧವಾಗಿದೆ.

ಛಾಂದೋಗ್ಯ ಉಪನಿಷತ್ತು ಪುರಾಣಗಳ ಕಾಲಕ್ಕಿಂತ ಪ್ರಾಚೀನವಾದುದು. ಅದರಲ್ಲಿ ಚಿತ್ರಿತವಾಗಿರುವ ಯಜ್ಞ-ಯಾಗಗಳ ಸ್ವರೂಪ ಗಮನಾರ್ಹವಾಗಿದೆ:

"ಅಥಯತ್ ತಪೋದಾನಂ ಆರ್ಜವಂ ಅಹಿಂಸಾ ಸತ್ಯವಾಚನಂ ಇತಿತಾಸ್ಯ ದಕ್ಷಿಣಾಃ"

ಜೀವಬಲಿ, ಪ್ರಾಣಿಹತ್ಯೆ ಇವು ಯಜ್ಞ-ಯಾಗಗಳ ವಿಪರೀತ ಸ್ಥಿತಿ. ನೈತಿಕ ಗುಣಗಳಾದ ತಪಸ್ಸು, ದಾನ, ಆರ್ಜವ, ಅಹಿಂಸೆ, ಸತ್ಯವಾಚನ ಇವುಗಳೇ ನೈಜ ಸ್ಥಿತಿ. ಇವುಗಳೇ ಅರ್ಪಣೆಯ ಅಂಶಗಳು.

ಪಾತಂಜಲಿ ಯೋಗಸೂತ್ರದಲ್ಲಿ ಅಹಿಂಸೆಯ ಪ್ರಭಾವವು ಹೀಗೆ ವರ್ಣಿತವಾಗಿದೆ:

"ಅಹಿಂಸಾ ಪ್ರತಿಷ್ಠಾಯಾಂ ತತ್ ಸನ್ನಿಧೌ ವೈರತ್ಯಾಗ:"

(ಅಹಿಂಸೆಯ ಪ್ರತ್ಯಕ್ಷ ಸನ್ನಿಧಿಯಲ್ಲಿ ಸಕಲ ವೈರಭಾವವೂ ಇಲ್ಲದಂತಾಗುತ್ತವೆ.)

ಅಹಿಂಸೆಯಲ್ಲಿ ಮತ್ಸರಭಾವವಿಲ್ಲ. ದ್ವೇಷ, ಪ್ರತೀಕಾರಗಳ ಸೊಲ್ಲಿಲ್ಲ. ಅದು ಪ್ರೇಮಭಾವ, ವಾತ್ಸಲ್ಯಭಾವ, ಕಾರುಣ್ಯಭಾವ.

ಜಗತ್ತಿನ ವಾಸ್ತವಿಕ ಸ್ಥಿತಿ

ಇದು ಬಾಳಿನ ಆದರ್ಶ ದರ್ಶನ. ಆದರೆ ಜಗತ್ತು ವಾಸ್ತವಿಕ ಸ್ಥಿತಿಯಲ್ಲಿ ಹಿಂಸೆ-ಅಹಿಂಸೆಗಳ ಮಿಶ್ರಣ. ಒಂದಲ್ಲ ಒಂದು ವಿಧದಲ್ಲಿ ನಾವು ತಿಳಿಯದಂತೆಯೋ, ನೈಮಿತ್ತಿಕವಾಗಿಯೋ ಹಿಂಸೆಯಲ್ಲಿ ನಾವು ತೊಡಗಬೇಕಾದ ಸಂದರ್ಭ ಬಂದೀತು. ಆಗ ಹೇಗೆ? ಅಂಥ ಹಿಂಸೆಯಲ್ಲಿ ತೊಡಗಿದಾಗ ಆದರ್ಶ ಹಾರಿಹೋಗಲಿಲ್ಲವೆ? ಅಂಥ ಪರೀಕ್ಷಾ ಸಮಯದಲ್ಲೂ ನಮ್ಮ ಜೀವನವನ್ನಾದರೂ ಅರ್ಪಿಸುವಂಥ ಧೀರತನ ಬಂದರೆ ಆದರ್ಶದ ಪಾಲನೆಯಾಗಿ, ಲೋಕಕ್ಕೊಂದು ದೃಷ್ಟಾಂತವಾಗಿ ನಿಲ್ಲಬಲ್ಲುದು. ಮಾನವನ ಇತಿಹಾಸದಲ್ಲಿ ಇಂಥ ನಿದರ್ಶನಗಳು ಇಲ್ಲದೆ ಇಲ್ಲ. ಇವು ಕೆಲವೇ ಆದರೂ ಆದರ್ಶದ ಸತ್ಯವನ್ನು ಗೋಪುರದೆತ್ತರದಿಂದ ಸಾರಿ ತೋರಿಸುತ್ತವೆ. ಇದ[ರಿಂ]ದಲೇ ಸಮಾಜ ವಿಕಾಸ; ಸಮಾಜ ಒಂದು ಹೆಜ್ಜೆ ಮೇಲೇರೀತು.

ಈ ಮಟ್ಟಕ್ಕೆ ಏರುವ ಆತ್ಮಶಕ್ತಿ ನಮ್ಮಲ್ಲಿ ಇಲ್ಲವಾದರೆ, ಕೆಟ್ಟುದನ್ನು ನಿಗ್ರಹದಲ್ಲಿಡುವ ಉದ್ದೇಶದಿಂದ ಅನಿವಾರ್ಯ ಪರಿಸ್ಥಿತಿಯೆಂಬಂತೆ ಹಿಂಸಾಕೃತ್ಯದಲ್ಲಿ ತೊಡಗಿ ಅದು ಮುಗಿದ ಮೇಲೆ ಪರಿಮಾರ್ಜನೆ ಮಾಡಿಕೊಳ್ಳಬೇಕು; ದ್ವೇಷ ಮಾತ್ಸರ್ಯ ರಹಿತರಾಗಿ, 'ವಿಗತಜ್ವರರಾಗಿ' ಯುದ್ಧ ಕಾರ್ಯದಲ್ಲಿ ತೊಡಗಿದ ಅರ್ಜುನಾದಿಗಳಿಗೆ ಆದಂತೆ. ಮಹಾಭಾರತದ ಮಾರಕ ಕಾರ್ಯದಲ್ಲಿ ತೊಡಗಿದ ಅವರಿಗೆ ದುಃಖ ಪಶ್ಚಾತ್ತಾಪವುಂಟಾಗಿ ಅದನ್ನು ಕಳೆದುಕೊಳ್ಳಲು ಅವರು ಬೇರೊಂದು ಯಜ್ಞ ಕಾರ್ಯವನ್ನು ಮಾಡಬೇಕಾಯಿತು. ಈ ವಿಷಯವನ್ನು ಕುರಿತು ವಿವೇಚಿಸುತ್ತಾ ತತ್ವಜ್ಞಾನಿ ಡಾ|| ರಾಧಾಕೃಷ್ಣನ್ ಹೀಗೆ ನುಡಿದಿದ್ದಾರೆ: "ಇತರರಿಗೆ ಹಿಂಸೆ ಮಾಡಿದಾಗ, ಅದರಲ್ಲಿ ಧರ್ಮ-ಅಧರ್ಮ ಎರಡೂ ಅಡಗಿರುತ್ತ[ವೆ]ದೆಂದು ಜ್ಞಾನಿಗಳು ಅರಿತಿರುತ್ತಾರೆ." ಇದನ್ನು ಅರ್ಥಮಾಡಿಕೊಂಡು, ಸದಾ ಆದರ್ಶವನ್ನೇ ಅರಸಿ, ಪೋಷಿಸಲು ಯತ್ನಿಸಿದರೂ, ಮಾರ್ಗ ತಪ್ಪಿ ನಡೆಯಲೇಬೇಕಾದ ಪರಿಸ್ಥಿತಿ ಉದ್ಭವಿಸಿದರೆ, ಅದನ್ನು ಪಶ್ಚಾತ್ತಾಪ ಬುದ್ಧಿಯಿಂದ ಸ್ವೀಕರಿಸಬೇಕು.

ಗಾಂಧೀಜೀ ತೋರಿಸಿದ ನಿದರ್ಶನ

ನಮ್ಮ ಕಾಲಕ್ಕೆ ಅಹಿಂಸೆಯ ಅದ್ಯಂತ ಸ್ವರೂಪದ ನಿದರ್ಶನವನ್ನು ಪ್ರತ್ಯಕ್ಷ ತೋರಿಸಿದವರು ಮಹಾತ್ಮ ಗಾಂಧೀಜೀ. ಅವರ ಬಾಳಿನಲ್ಲಿ ಜಾಗೃತವಾಗಿ ವಿಕಾಸಗೊಂಡ ಆತ್ಮಶಕ್ತಿ, ಅಹಿಂಸಾಶಕ್ತಿ ಅಥವಾ ಪ್ರೇಮಶಕ್ತಿ, ಜಗತ್ತಿಗೆ ಚಿರಂತನ ಸ್ಫೂರ್ತಿಯ ನಿದರ್ಶನ. ಕತ್ತಲು ಮುತ್ತಿದ ಲೋಕಕ್ಕೆ ದಾರಿತೋರುವ ಜ್ಯೋತಿ ಅವರು. ಬ್ರಿಟಿಷ್ ಸಾಮ್ರಾಜ್ಯ ಶಕ್ತಿಯ ವಿರುದ್ಧ ಸೆಣಸಿದ ಆ ಅಹಿಂಸಾ ವೀರ, ಸ್ವತಂತ್ರ ಭಾರತದ ಸ[ರ]ಕಾರ, ಪಾಕಿಸ್ಥಾನದ ದಾಳಿಯ ಬಗೆಗೆ-ಕಾಶ್ಮೀರದ ಮೇ[ಲಿ]ನ ಮೋಸ ನೋಡುತ್ತಿದ್ದಾಗ, ಕ್ಷುದ್ರ ಹೃದಯ ದೌರ್ಬಲ್ಯವನ್ನು ತ್ಯಜಿಸಿ, ಸ್ವಯಂ-ರಕ್ಷಣೆಯ ಯೋ[ಜನೆ]

ಕಾರ್ಯ ನಡೆಸಬೇಕೆಂದು ಸಲಹೆಯನ್ನಿತ್ತರು. ಈಶ್ವರನಲ್ಲಿ, ಮಾನವ ಪ್ರೇಮದಲ್ಲಿ ಅಚಲ ನಂಬಿಕೆ, ಅದಕ್ಕನುಗುಣವಾದ ನಡೆ ಇವುಗಳಿಂದ ಕೂಡಿದ್ದ ಅವರು ನುಡಿದ ಈ ಮಾತು ಹಿಂದೂ ಧರ್ಮದ ಸಕಲ ಪಂಥಗಳವರಿಗೂ ಎಂದೆಂದಿಗೂ ಅಹಿಂಸೆಯಲ್ಲಿ ನಂಬಿಕೆಯನ್ನು ಉಂಟು ಮಾಡುವುದರಲ್ಲಿ ಅನುಮಾನವಿದೆಯೆ ಎನಿಸುತ್ತದೆ: "ನಾಳಿನ ಜಗತ್ತು ಅಹಿಂಸೆಯ ಆಧಾರಹೊಂದಿದ ಸಮಾಜವಾದೀತು; ಆಗಲೇಬೇಕು. ಅದೊಂದು ದೂರದ ಗುರಿಯೇ ಆದೀತು, ಅವ್ಯವಹಾರ ಕನಸೇ ಎನಿಸೀತು. ಆದರೆ ಅದು ಇಂದು ಈ ಇಹದಲ್ಲಿಯೇ ಲೇಶ ಕಾಲಿನಷ್ಟು ಕರಗತವಾಗಲಾರದಂಥವೇನಲ್ಲ. ಪ್ರತಿಯೊಬ್ಬ ವ್ಯಕ್ತಿ, ಇತರರು ಮಾಡಲಿ ಎಂದು ಕಾಯದೆ, ತನ್ನಪಾದಿಗೆ ತಾನು ಭವಿಷ್ಯ ಜಗತ್ತಿನ ಧರ್ಮವಾದ ಅಹಿಂಸಾ ವಿಧಾನವನ್ನು ಆಚರಣೆಗೆ ತರಲಿ. ವ್ಯಕ್ತಿಗತವಾಗಿ ಸಾಧ್ಯವಾಗುವುದನ್ನು ಜನಾಂಗಗಳು, ರಾಷ್ಟ್ರಗಳು ಆಚರಣೆಗೆ ತರಲಾರವೆ! ಆದರೆ, ಗುರಿ ಪೂರ್ಣವಾಗಿ ಸಾಧಿಸಲ್ಪಡಲಾರದೆಂಬ ಕಾರಣ ಹೇಳಿ, ಮುಂದಿ, ಆರಂಭ ಮಾಡಲೇಕೆಂದು ಹಿಂಜರಿಯುತ್ತಾರೆ; ಈ ಮನೋವೃತ್ತಿಯೇ ಪ್ರಗತಿಯ ಇದಿರಿಗಿರುವ ದೊಡ್ಡ ಆತಂಕ. ಮನಸ್ಸನ್ನು ಮಾಡಿದರೆ ಪ್ರತಿಯೊಬ್ಬನೂ ಈ ಆತಂಕವನ್ನು ದೂರಮಾಡಿಯಾನು."

ಗಾಂಧೀಜೀ ಪ್ರತ್ಯಕ್ಷ ನಿದರ್ಶನವಾಗಿ ನಿಂತು, ಹಿಂದೂ ಧರ್ಮದ ಪ್ರತೀಕವಾಗಿ, ಲೋಕಕ್ಕೆ ನೀಡಿದ ಈ ಅನಾದಿ ಕಾಲದ ಜೀವವಾಹಿನಿಯ ಸಂದೇಶವನ್ನು ಭಾರತೀಯರು ಮುಂದುವರಿಸುವರೆ? ಇದು ಮಹಾ ಸವಾಲು.



ಸರ್ವಜ್ಞ ಪದಗಳು

ರಚಿಸಿದವರು: **ಜಗ್ಗು ಲಿಂಗರಾಯ**

ಬಾಳೆ ತೆಂಗಿಗೆ ಫಲವು ಚೇಳು ಹಾವಿಗೆ ದಯೆಯು
ಸೂಳೆಗೂ ಸರಳತೆಯು ಜನಿಸಲಾಗೆನದಿ
ಕಾಳೆರಚಿ ಬೆಳೆಸು ಸಾರ್ವಜ್ಞ.

X X X X

ತುಟಿಯು ಮೀರಿದ ಹಲ್ಲು ದಿಟವ ಮೆಟ್ಟುವ ಸೆಟೆಯು
ಹಟಮಾರಿ ಹೆಣ್ಣು ಇವು ಮೂರನಿದಿರಿಸುವ
ಭಟರುಂಟೆ ಹೇಳು ಸಾರ್ವಜ್ಞ.

ವಿಷ್ಣುಚಿತ್ತರ ಶತಕಸಾಹಿತ್ಯ

ಆರ್. ಅಂಬುಜಮ್ಮ

(ಮುಂದುವರೆದುದು)

ಇದಾದನಂತರ ಮುಂದಿನ ದಶಕದಲ್ಲಿ ಯಶೋದೆಯು ಬಾಲಕೃಷ್ಣನನ್ನು ಎತ್ತಿಕೊಂಡು ಬೆಳದಿಂಗಳಲ್ಲಿ ಆಡಿಸುತ್ತಿರುವ ಒಂದು ಸುಂದರ ದೃಶ್ಯವನ್ನು ವಿಷ್ಣುಚಿತ್ತರು ತೋರಿರುವರು.

ಯಶೋದೆಯು ಆಕಾಶದಲ್ಲಿ ತೇಲುತ್ತಿರುವ ಚಂದ್ರನನ್ನು ಸಂಬೋಧಿಸಿ ಮೇಘಗಳ ತೆರೆಯ ಹಿಂದೆ ಹೋಗದಂತೆಯೂ ಮತ್ತು ತನ್ನ ಮಗನೆಡೆಗೆ ಬರುವಂತೆಯೂ ಆಜ್ಞಾಪಿಸುವಳು. "ಮನೋಹರನಾದ ಚಂದ್ರನೇ, ನನ್ನ ಮಗನಾದ ಗೋವಿಂದನು ತನ್ನ ಉಚ್ಚಿಯ ಆಭರಣವು ನೇತಾಡುತ್ತಿರಲು, ಕಿರುಗೆಜ್ಜೆಗಳು ಶಬ್ದಮಾಡುತ್ತಿರಲು ಅಂಗಳಕ್ಕೆ ಮಂಡಿಯೂರಿ ನಡೆದುಹೋಗಿ ಮಣ್ಣಿನಲ್ಲಿ ಆಡುತ್ತಿರುವನು. ಈ ಸೊಬಗಿನ ದೃಶ್ಯವನ್ನು ನೀನು ನೋಡಿದೆಯಾದರೆ, ಆಗಲೇ ನೀನು ಕಣ್ಣುಗಳನ್ನು ಪಡೆದುದರ ಫಲವು ಸಿದ್ಧಿಸುವುದು" ಎಂದು ಹೇಳುವಳು. ಬಾಲಕೃಷ್ಣನು ತನ್ನ ಪುಟ್ಟ ಹಸ್ತಗಳಿಂದ ಚಂದ್ರನನ್ನು ತನ್ನೆಡೆಗೆ ಬರುವಂತೆ ಸನ್ನೆಮಾಡಿ ಕರೆಯುತ್ತಿರುವನು. "ಅಂಜನ ವರ್ಣನಾದ ಇವನೊಡನೆ ಆಡಲು ಇಚ್ಛೆಯುಳ್ಳವನಾದರೆ, ಮೇಘಗಳ ತೆರೆಯಲ್ಲಿ ಮರೆಯಾಗಬೇಡ" ಎಂದು ಚಂದ್ರನಿಗೆ ಹಿತವಚನಗಳನ್ನು ಹೇಳುವಳು. ಚಂದ್ರನನ್ನು ಸನ್ನೆಮಾಡಿ ಕರೆಯುವುದರಲ್ಲಿ ಮಗುವಿನ ಹಸ್ತಗಳು ಶ್ರಮಗೊಳ್ಳಬಹುದೆಂದು ಎಣಿಸಿ ಶೀಘ್ರದಲ್ಲಿ ಬರುವಂತೆ ಹೇಳುವಳು. ತನ್ನ ಮಗನ ಅಸಮಾನವಾದ ಸೌಂದರ್ಯಕ್ಕಾಗಿ ಹೆಮ್ಮೆಯನ್ನು ಸೂಚಿಸುತ್ತಾ ಚಂದ್ರನನ್ನು ಕುರಿತು "ನಿನ್ನ ಆಕಾರವನ್ನು ನೀನು ಪೂರ್ಣವಾಗಿ ಮಾಡಿಕೊಂಡರೂ ಸುತ್ತಲೂ ಕಾಂತಿಯನ್ನು ಪಸರಿಸಿ, ಎಷ್ಟು ಪ್ರಯತ್ನಿಸಿದರೂ ನಿನ್ನ ಸೌಂದರ್ಯವು ನನ್ನ ಮಗನ ಮುಖಕಮಲದ ಸೊಬಗಿಗೆ ಸಮನಾಗಲಾರದು" ಎನ್ನುವಳು. ಶ್ರೀ ಕೃಷ್ಣನಾದರೋ ಬಿಡದೆ ಅವನನ್ನೇ ಕೈಚಾಚಿ ತೋರುತ್ತಿರುವನು. "ಮಕ್ಕಳಿಲ್ಲದ ಬಂಜೆಯಲ್ಲದಿದ್ದರೆ, ಛಲಮಾಡದೆ ನನ್ನ ಮಗನೆಡೆಗೆ ಬಾ", ಎಂದು ಕರೆಯುವಳು. ಕೊನೆಗೆ ಶ್ರೀ ಕೃಷ್ಣನು ಚಂದ್ರನನ್ನು ತನ್ನ ಮುದ್ದು ಮಾತುಗಳಿಂದ ಕರೆಯಲು ಆರಂಭಿಸುವನು. ನಿದ್ರೆಯ ಸಮಯವು ಸಮೀಪಿಸಿದರೂ ಸಹ ನಿದ್ರಿಸದೆ ಆಕಳಿಕೆಯನ್ನು ತೋರುತ್ತಾ ಚಂದ್ರನ ಬರವನ್ನೇ ನೋಡುತ್ತಿರುವನು ಸಕಾಲದಲ್ಲಿ ನಿದ್ರಿಸದಿದ್ದ ಆ ಮಗುವಿಗೆ ಅಜೀರ್ಣವಾಗಬಹುದೆಂದು ಹೆದರಿ, ಚಂದ್ರನನ್ನು ಕುರಿತು, "ನೀನು ಶೀಘ್ರದಲ್ಲಿ ಓಡಿಬಾ" ಎಂದು ಕರೆಯುವಳು. ಚಂದ್ರನು, ಶ್ರೀ ಕೃಷ್ಣನನ್ನು

ೇವಲ ಬಾಲಕನೆಂದು ತಿಳಿದು ಒಂದು ವೇಳೆ ಲೆಕ್ಕಿಸದಿ
ಬಹುದೆಂದು ಊಹಿಸಿ, ಹಿಂದೆ ಶ್ರೀ ಕೃಷ್ಣನು ಆಲದೆ
ಯಮೇಲೆ ಶಿಶುವಿನ ರೂಪದಲ್ಲಿ ಮಲಗಿದ ಸಂದರ್ಭ
ನ್ನೂ ಬಾಲಕನ ರೂಪದಲ್ಲಿ ಮಹಾಬಲಿ ಎಡೆಯಲ್ಲಿ
ಯಾಚನೆಯನ್ನು ಮಾಡಿದ ಘಟನೆಯನ್ನೂ ಚಂದ್ರನ
ನಪಿಗೆ ತರುವಳು. ಕೊನೆಗೆ ನವನೀತ ಚೋರನಾದ
ಷ್ಣನು ನಿನ್ನನ್ನು ತನ್ನ ಚಕ್ರದಿಂದ ಸುಟ್ಟುಬಿಡುವನು.
ಡಮಾಡದೆ ಓಡಿಬಾ"ಎಂದು ಎಚ್ಚರಿಕೆಯನ್ನು ಕೊಡು
ಳು.

ಮುಂದೆ ಯಶೋದೆಯು ಬಾಲಕೃಷ್ಣನನ್ನು
ಾರಿಯಾಡುವಂತೆ ಪ್ರೇರೇಪಿಸುತ್ತಿರುವ ದೃಶ್ಯವುತೋರ
ಟ್ಟಿರುವುದು. ಈ ದಶಕದಲ್ಲಿ ಶ್ರೀ ಕೃಷ್ಣನ ಪರತ್ವದ
ತ್ತು ವಿಭವಾವತಾರಗಳ ವರ್ಣನೆಯು ಮಾಡಲ್ಪಟ್ಟಿ
ವುದು. ಜೀವರಾಶಿಗಳ ಉದ್ಧಾರಾರ್ಥವಾಗಿ ಲೋಕ
ನ್ನು ಸೃಷ್ಟಿಸಿ, ಪುನಃ ಪ್ರಳಯಕಾಲದಲ್ಲಿ ಅವುಗ
ನ್ನು ತನ್ನ ಜಠರದಲ್ಲೇ ಇಟ್ಟು ರಕ್ಷಿಸಿದನು ಮತ್ತು
ೇಕ ಕಲ್ಪಗಳವರೆಗೆ ಶಿಶುವಿನ ರೂಪದಲ್ಲಿ ಆಲದೆಲೆಯ
ೇಲೆ ಮಲಗಿ ಯೋಗ-ನಿದ್ರೆಯನ್ನು ಮಾಡಿದನು.
ದಗಳ ಸಾರಭೂತನು ತನ್ನ ನಾಭಿಕಮಲದಲ್ಲಿ ಉದ್ಭ
ದ ಚತುರ್ಮುಖನಿಗೆ ನೇರವಾಗಿ ವೇದೋದ್ಧಾರ
ಾಡಿದನು.

ದುಷ್ಟಶಿಕ್ಷಣ ಮತ್ತು ಶಿಷ್ಟಪರಿಪಾಲನಕ್ಕಾಗಿ
ಲೋಕದಲ್ಲಿ ಅನೇಕಾವರ್ತಿ ಅವತರಿಸಿದನು. ನೃಸಿಂ
ಾಗಿ ಹಿರಣ್ಯಕಶಿಪುವನ್ನು ಕೊಂದು, ಪ್ರಹ್ಲಾದನನ್ನು
ಸಿದನು. ವಾಮನನಾಗಿ ಅವತರಿಸಿ ಬಲಿಚಕ
ಯಿಂದ ತ್ರೈಲೋಕ್ಯವನ್ನೂ ಮೂರಡಿಗಳಿಂದ
ದು ತೆಗೆದುಕೊಂಡನು. ಕೃಷ್ಣಾವತಾರದಲ್ಲಿ,
ದ್ರನು ರೋಷಗೊಂಡು ಕಲ್ಲಿನ ಮಳೆಯನ್ನು ಸುರಿಸಿ
ಗೋವರ್ಧನಗಿರಿಯನ್ನು ಎತ್ತಿಹಿಡಿದು ಗೊಲ್ಲ
ನ್ನು ಮತ್ತು ಪಶುಗಳನ್ನೂ ರಕ್ಷಿಸಿದನು. ಶಕಟಾ
, ಪೂತನಾ, ಧೇನುಕಾಸುರ ಮುಂತಾದ ರಾಕ್ಷಸ
ಲ್ಲಾ ಸಂಹರಿಸಿದನು. ಕಾಳಿಯ ಮರ್ಧನವನ್ನು
ಡಿದ ನೀಲಮೇಘಶ್ಯಾಮನು ಕುವಲಯಾಪೀಡ
ಆನೆಯ ದಂತಗಳನ್ನು ಮುರಿದು ಅದನ್ನು ಸಂಹರಿ
ಸಿದನು. ಗೊಲ್ಲರ ಮನೆಗಳಲ್ಲಿ ಹಾಲು, ಬೆಣ್ಣೆ ಮತ್ತು ತುಪ್ಪವನ್ನು ಕದ್ದು ತಿಂದುದಕ್ಕಾಗಿ ಯಶೋದೆಯು ಒರಲಿನೊಡನೆ ಸೇರಿಸಿ ಕಟ್ಟಿಹಾಕಿರಲು ಒರಲನ್ನು ಎಳೆದುಕೊಂಡು ಹೋಗಿ ಮರುತ ವೃಕ್ಷಗಳೆರಡರ ಮಧ್ಯದಲ್ಲಿ ನುಗ್ಗಿ ಅವುಗಳನ್ನು ಮುರಿದು ಕೆಡಹಿದನು. ಇಂತಹ ಸರ್ವೇಶ್ವರನನ್ನು ಮಗುವಿನ ರೂಪದಲ್ಲಿ ಹೊಂದಿರುವ ಯಶೋದೆಯು, ಮಂದಹಾಸವನ್ನು ಬೀರುತ್ತಾ ತನಗಾಗಿ ಒಂದಾವರ್ತಿ ದೂರಿಯಾಡಬೇಕೆಂದು ಬೇಡುವಳು. "ಚಿಗುರಿನಂತೆ ಮೃದುವಾದ ಕಾಲ್ಬೆರಳುಗಳಲ್ಲಿ ಉಂಗುರಗಳೂ, ಕೆಂದಾವರೆಯಂತೆ ಮನೋಹರವಾದ ಪಾದಗಳಲ್ಲಿ ಕಿರುಗೆಜ್ಜೆಗಳೂ, ಉಡಿಯಲ್ಲಿ ಸ್ವರ್ಣದ ಉಡಿದಾರವೂ, ಕೈಬೆರಳುಗಳಲ್ಲಿ ಉಂಗುರಗಳೂ ತೋಳ್ಬಳೆಗಳೂ ಶೋಭಿಸುತ್ತಿರಲು, ವಕ್ಷಸ್ಥಲದಲ್ಲಿ ವೈಜಯಂತಿ ಮಾಲೆಯೂ ಕಿವಿಗಳಲ್ಲಿ ಮಕರಕುಂಡಲಗಳೂ ಮತ್ತು ನೆತ್ತಿಯಲ್ಲಿ ಉಚ್ಛಿಯಾಭರಣವೂ ತೂಗಾಡುತ್ತಿರಲು, ದೂರಿಯಾಡು ಎಂದು ಬೇಡುವಳು.

ಇದಾದನಂತರ ತಾಯಿಯು ಮಗನನ್ನು ಚಪ್ಪಾಳೆ ಹೊಡೆದು ಆಡಿಸುತ್ತಿರುವ ದೃಶ್ಯವು ಚಿತ್ರಿಸಲ್ಪಟ್ಟಿರುವುದು ಮಗನನ್ನು ಕುರಿತು, "ಉಡಿಯಲ್ಲಿರುವ ಮಾಣಿಕ್ಯದ ಗೆಜ್ಜೆಗಳು ಧ್ವನಿಗೊಡುತ್ತಿರಲು ಮತ್ತು ಹವಳವನ್ನು ಹೋಲುವ ಬಾಯಿಯಲ್ಲಿ ಮುತ್ತಿನಂತಿರುವ ಹಲ್ಲುಗಳು ಶೋಭಿಸುತ್ತಿರಲು (ಹಸನ್ಮುಖನಾಗಿ) ಚಪ್ಪಾಳೆಯನ್ನು ಹೊಡಿ" ಎಂದು ಕೇಳುವಳು. ಕೃಷ್ಣನು ತನ್ನ ತೊಡೆಯ ಮೇಲಿನಿಂದ ಕೆಳಗಿಳಿದುಹೋಗಿ, ನಂದಗೋಪನ ತೊಡೆಯಮೇಲೆ ಹರಿ ಕುಳಿತು ಚಪ್ಪಾಳೆ ಹೊಡೆಯುವ ದೃಶ್ಯವನ್ನು ಕಾಣಲು ಆಶಿಸುವಳು. ಹಿಂದಿನ ದಶಕಗಳಲ್ಲಿ ಹೇಳಿರುವಂತೆಯೇ ಇಲ್ಲಿಯೂ ಸಹ ಪರಮಾತ್ಮನ ವಿಭವಾವತಾರದ ಲೀಲೆಗಳೂ ಮತ್ತು ಮಹತ್ಕಾರ್ಯಗಳೂ ವಿವರಿಸಲ್ಪಟ್ಟಿರುವುವು.

ಬಾಲಕೃಷ್ಣನು ತಾಯಿಯೊಡನೆ ಸರಸವಾಡುವ ಸಲುವಾಗಿ ಮಣ್ಣನ್ನೂ ಕೆಸರನ್ನೂ ತಂದು ಅವಳು ಧರಿಸಿರುವ ವಸ್ತ್ರಗಳ ಮೇಲೆ ಸವರುವನು ತಾಯಿಯ ದೃಷ್ಟಿಗೆ ಬೀಳದಂತೆ ಒಳಹೊಕ್ಕು ಬೆಣ್ಣೆ ಮತ್ತು ಮೊಸರನ್ನು ಭುಜಿಸುವನು.

ಗೋಕುಲದಲ್ಲಿ ಅಲ್ಲಲ್ಲಿ ಸಂಚರಿಸುತ್ತಿರುವನು ವಿಷ್ಣು ಚಿತ್ತರು, ಹೀಗೆ ಲೀಲೆಯಾಡುವ ಕೃಷ್ಣನು ಬ್ರಹ್ಮನ ಉತ್ಪತ್ತಿಸ್ಥಾನವಾದ ನಾಭಿಕಮಲವನ್ನುಳ್ಳ ಪರಮಾತ್ಮನಲ್ಲದೆ ಬೇರೆಯಲ್ಲ ಎಂದು ತಿಳಿಸುವರು. ಹಿಂದೆ ರಾಮಾವತಾರದಲ್ಲಿ ಅಹಂಕಾರದಿಂದ ಕೂಡಿ ತನ್ನ ಪ್ರಾರ್ಥನೆಗೆ ಕಿವಿಗೊಡದಿದ್ದ ಕಡಲಿನ ಮೇಲೆ ಬಿಲ್ಲನ್ನು ಹೂಡಿ ಸಮುದ್ರ ರಾಜನನ್ನು ವಶಪಡಿಸಿಕೊಂಡನು. ವಾನರ ಸಮೂಹಗಳ ಸಹಾಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕಾಪುರಿಯಲ್ಲಿದ್ದ ರಾಕ್ಷಸನನ್ನು ನಾಶಗೊಳಿಸಿದನು. ಪ್ರಹ್ಲಾದನಿಗಾಗಿ ನೃಸಿಂಹಾವತಾರವನ್ನೆತ್ತಿ ದುರುಳನಾದ ಹಿರಣ್ಯಕಶಿಪುವಿನ ಎದೆಯನ್ನು ಸೀಳಿದನು. ದೇವತೆಗಳಿಗಾಗಿ ಮಂದ್ರಪರ್ವತಕ್ಕೆ ವಾಸುಕಿಯನ್ನು ಹಗ್ಗವನ್ನಾಗಿ ಸುತ್ತಿ ಸಮುದ್ರವನ್ನು ಕಡೆದನು. ಯಶೋದೆಯು ಇಂತಹ ಅದ್ಭುತ ಚೇಷ್ಟೆಗಳನ್ನು ಮಾಡುವ ತನ್ನ ಮಗನನ್ನು ಅವನ ಹಸ್ತಗಳಿಂದ ಚಪ್ಪಾಳೆಯನ್ನು ಹೊಡೆದು ಆಡಬೇಕಾಗಿ ಕೇಳುವಳು.

ಇಲ್ಲಿಯವರೆಗೆ ತಾಯಿಯ ತೊಂಕುಳಲ್ಲಿಯೂ ಮತ್ತು ತೊಡೆಯ ಮೇಲೂ ಇದ್ದು ವಿವಿಧ ಶೈಶವಲೀಲೆಗಳನ್ನು ತೋರುತ್ತಿದ್ದ ಬಾಲಕೃಷ್ಣನು ಈಗ ತಾಯಿಯ ಮಡಿಲನ್ನು ಬಿಟ್ಟು ನೆಲದ ಮೇಲೆ ತಪ್ಪು ಹೆಜ್ಜೆಗಳನ್ನಿಡುತ್ತಾ ನಡೆಯುತ್ತಿರುವುದು ಕಂಡುಬರುವುದು. ತಾಯಿಯು ಅವನನ್ನು ಹೆಜ್ಜೆಯಿಟ್ಟು ನಡೆಯಲು ಪ್ರೇರೇಪಿಸುತ್ತಿರುವಳು.

ಬಾಲಕನು ಕಾಲಿನ ಕಿರುಗೆಜ್ಜೆಗಳು ಮತ್ತು ಉಡಿಯಲ್ಲಿನ ಗೆಜ್ಜೆಗಳೂ ಧ್ವನಿಗೊಡುತ್ತಿರಲು, ನಡಿಗೆಯ ಆಯಾಸದಿಂದ ಬೆವರಿನ ಹನಿಗಳು ಮುಖದ ಮೇಲೆ ಕಾಣುತ್ತಿರಲು, ತಪ್ಪು ಹೆಜ್ಜೆಯಾದರೂ ಗಂಭೀರವಾದ ನಡಿಗೆಯಿಂದ ನಡೆಯುತ್ತಿರುವ ದೃಶ್ಯವನ್ನು ಒಂದು ಮದಗಜವು ಕಬ್ಬಿಣದ ಸರಪಣಿ ಮತ್ತು ಕೊರಳಿನ ಮಣಿಗಳ ಧ್ವನಿಯೊಡನೆ ಮದಜಲವನ್ನು ಸ್ರವಿಸುತ್ತಾ ನಡೆಯುತ್ತಿರುವ ದೃಶ್ಯಕ್ಕೆ ಹೋಲಿಸಿರುವರು.

ಶ್ರೀ ಕೃಷ್ಣನ ಆಭರಣ ವಿಶೇಷಗಳನ್ನು ವರ್ಣ ವೆಡೆಯಲ್ಲಿ, ಅವನ ವಕ್ಷಸ್ಥಲದಲ್ಲಿ ಹಾರಗಳು ಕಾಳಮೇ ಘದ ಮೇಲೆ ಮಿಂಚುಹರಿದಂತೆ ಕಾಣುತ್ತಿದ್ದುವೆಂ ಹೇಳುವರು. ತಪ್ಪು ಹೆಜ್ಜೆಗಳನ್ನಿಡುತ್ತಾ ಆನಂದಾ ರೇಕದಿಂದ ಗಟ್ಟಿಯಾಗಿ ನಗುವನು. ಆಗ ಬಾಯಿಯ ಊರುವ ನೀರು ತುಂತುರುತುಂತುರಾಗಿ ಹೊರಬೀ ವುದು. ಬಾಲಕೃಷ್ಣನ ಈ ರೀತಿ ನಗುವುದನ್ನು ವಿಷ ಚಿತ್ತರು. "ಕಬ್ಬಿನ ರಸದ ಕೊಡದ ಬಾಯಿಯನ್ನು ದಂತೆ". ಎಂದು ವರ್ಣಿಸಿರುವರು. ಓಡುತ್ತಿರುವ ರಾಮನನ್ನು ಬಾಲಕೃಷ್ಣನು ತನ್ನ ತಪ್ಪು ಹೆಜ್ಜೆಗಳ ಹಿಂಬಾಲಿಸುತ್ತಿರುವ ದೃಶ್ಯವು ಬೆಳ್ಳಿಯ ಗುಡ್ಡ ಒಂದ ಕರಿಯ ಗುಡ್ಡವು ಹಿಂಬಾಲಿಸಿ ಹೋಗುವಂತಿದ್ದಿ ಶಂಖ ಚಕ್ರಾಂಕಿತ ಪಾದಪದ್ಮಗಳನ್ನುಳ್ಳ ಬಾಲಕೃ ಹೆಜ್ಜೆಯ ಗುರುತುಗಳು ಅವನು ಕಾಲಿಟ್ಟ ಜಾ ಲ್ಲೆಲ್ಲಾ ಅಂದವಾಗಿ ಬರೆದಂತೆ ಕಾಣುವುವು.

ಒಮ್ಮೆ ಮೂರು ಲೋಕಗಳನ್ನೇ ಅಳೆದು ತೆ ಕೊಂಡ ಪಾದಗಳಿಗೆ ಈಗ ಭೂಮಿಯ ಮೇಲೆ ನಡೆ ವುದರಿಂದ ನೋಯುವುದೇನೋ ಎಂದು ಹೆ ಯಶೋದೆಯು ನೆಲದ ಮೇಲೆ ಹಾಸಿಗೆಯೋ ಯಲ್ಲ ಮೃದುವಾದ ಪುಷ್ಪಗಳನ್ನು ಹರವಿ, ತನ್ನ ನನ್ನು ಅವುಗಳ ಮೇಲೆಯೇ ಹೆಜ್ಜೆಯಿಟ್ಟು ನಡೆಯ ಕಾಗಿ ಬೇಡುವಳು.

ತಪ್ಪು ಹೆಜ್ಜೆಗಳನ್ನಿಡುತ್ತಿದ್ದ ಕೃಷ್ಣನು ಕ್ರಮೇ ನಡಿಗೆಯನ್ನು ಕಲಿತು ಓಡಿ ಆಡುವನು. ತಾಯಿಯು ಮಗನನ್ನು ಆಡಿಸುತ್ತಾ ದೂರದಿಂದ ಬಂದು ತನ್ನನ್ನು ತಬ್ಬಿಕೊಳ್ಳಬೇಕಾಗಿ ಹೇಳುವ ಓಡುವಾಗ ಧ್ವನಿಗೊಡುವ ಕಿರುಗೆಜ್ಜೆಗಳು ಮತ್ತು ಯಾಭರಣ ಮುಂತಾದುವುಗಳಿಂದ ಅಲಂಕೃತನ ಓಡಿಬರುತ್ತಿರುವ ಬಾಲಕೃಷ್ಣನು ಮಿಂಚಿನೊಡಗೂ ಮೇಘವನ್ನು ಹೋಲುವನು. ಅವನ ಮುಂಗುರು ಕೇಶರಾಶಿಗಳು ಹವಳದಂತಿರುವ ತುಟಿಗಳೆಡೆಯ ತೂಗಾಡುತ್ತಿರುವುದು, ಕೆಂದಾವರೆಗೆ ಭ್ರಮರಗ ಮುತ್ತುವಂತೆ ತೋರುವುದು. ಈ ದಶಕದಲ್ಲಿ

ಕೃಷ್ಣನು ಬಾಲ್ಯದಲ್ಲಿ ಗೋಕುಲದಲ್ಲಿಯೂ ಮತ್ತು ಯೌವನದಲ್ಲಿ ರಾಜಕೀಯರಂಗದಲ್ಲಿಯೂ ನಡೆಸಿದ ಶೌರ್ಯದ ಕಾರ್ಯಗಳಲ್ಲಿ ಕೆಲವನ್ನು ಸೂಚಿಸಿರುವರು. ಬಾಲ್ಯದಲ್ಲಿ ಕಾಳಿಯ ಮಡುವನ್ನು ಹೊಕ್ಕು ಅಲ್ಲಿ ವಾಸಿಸುತ್ತಿದ್ದ ವಿಷಸರ್ಪವನ್ನು ಎದುರಿಸಿ ಓಡಿಸಿದನು. ಕುಬ್ಜೆಯಿಂದ ಚಂದನವನ್ನು ಬೇಡಿ ತೆಗೆದುಕೊಂಡು, ಅವಳ ಗೂನನ್ನು ಹೋಗಲಾಡಿಸಿದನು ಗೊಲ್ಲರಿಗಾಗಿ ಮಲ್ಲಯುದ್ಧವನ್ನು ಮಾಡುವನು

ಯೌವನದಲ್ಲಿ, ಪಂಚಪಾಂಡವರ ದೂತನಾಗಿ ಶಾಂತಿ ಸಂಧಾನಕ್ಕಾಗಿ ಕೌರವರೆಡೆಗೆ ಹೋದನು. ಆದರೆ ಈ ಸಂಧಾನವು ವಿಫಲವಾದುದರಿಂದ ಭಾರತ ಯುದ್ಧವನ್ನು ಸಿದ್ಧಗೊಳಿಸಿದನು ಮತ್ತು ಭಾರತ ಯುದ್ಧದ ವ್ಯಾಜದಿಂದ ದುಷ್ಟರನ್ನು ಶಿಕ್ಷಿಸಿ ಭೂಭಾರವನ್ನು ಇಳಿಸುವ ಸಲುವಾಗಿ ಅರ್ಜುನನ ಸಾರಥಿಯಾದನು ವಾಮನನಾಗಿ ಅವತರಿಸಿ ಮಹಾಬಲಿಯಿಂದ ದೇವತೆಗಳ ರಾಜ್ಯವನ್ನು ಉಪಾಯದಿಂದ ತೆಗೆದುಕೊಂಡನು. ತನ್ನ ಎದೆಯ ರಕ್ತವನ್ನು ಭಿಕ್ಷೆಯನ್ನಾಗಿ ಈಶ್ವರನ ಕೈಯಲ್ಲಿದ್ದ ಬ್ರಹ್ಮ ಕಪಾಲಕ್ಕೆ ಸುರಿದು ಅವನ ಶಾಪವನ್ನು ಹೋಗಲಾಡಿಸಿದನು. ಒಂದಾನೊಂದು ಕಾಲದಲ್ಲಿ ವೇದಗಳು ಮರೆಯಾಗಲು ಲೋಕದಲ್ಲಿ ಹರಡಿದ ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ಸಲುವಾಗಿ ಹಂಸದ ರೂಪವನ್ನು ತಾಳಿ ವೇದೋದ್ಧಾರವನ್ನು ಮಾಡಿದನು. ಇಚ್ಛಿಸುವವರ ದೃಷ್ಟಿಗೆ ಗೋಚರಿಸುವ ನಾರಾಯಣನು.

ಇಂತಹ ಪರಮಾತ್ಮನನ್ನು ಯಶೋದೆಯು ಆಡಿಸುತ್ತಾ ತನ್ನನ್ನು ಓಡಿಬಂದು ತಬ್ಬಿಕೊಳ್ಳುವಂತೆ ನಾನಾ ರೀತಿಯಲ್ಲಿ ಹೇಳುವಳು.

ಮೇಲೆ ಹೇಳಿದ ರೀತಿಗಳಲ್ಲಿ ಆಟವನ್ನಾಡುತ್ತಾ ಶ್ರೀ ಕೃಷ್ಣನು ಯಶೋದೆಯನ್ನು ಹಿಂದಿನಿಂದ ಬಂದು ತಬ್ಬಿಕೊಳ್ಳುವನು. ತನ್ನ ಈ ಸುಖಾನುಭವವನ್ನು ಯಶೋಧೆಯು ವಿವಿಧ ರೀತಿಯಲ್ಲಿ ವರ್ಣಿಸುವಳು. ಈ ದಶಕದಲ್ಲಿಯೂ ಸಹ ಶ್ರೀ ಕೃಷ್ಣನು ಆಭರಣಗಳಿಂದ ಅಲಂಕೃತನಾಗಿರುವ ವಿವರ ಮತ್ತು ಅವನು ಭಾರತ ಯುದ್ಧದಲ್ಲಿ ನಡೆಸಿದ ಶೌರ್ಯದ ಕಾರ್ಯಗಳು, ವಾಮನಾವತಾರದಲ್ಲಿ ನಡೆಸಿದ ಅದ್ಭುತ ಚರ್ಯೆ ಮುಂತಾದುವುಗಳು ವರ್ಣಿಸಲ್ಪಟ್ಟಿರುವುವು. "ಶ್ರೀ ಕೃಷ್ಣನು ವನದಲ್ಲಿ ಗುಡ್ಡದ ಮೇಲೆ ಏರಿ ನಿಂತು ಮುರಳಿಯನ್ನೂದುವನು. ಆಗ ಅಲ್ಲಿ ಬ್ರಹ್ಮರ್ಷಿಗಳೆಲ್ಲರೂ ಬಂದು ನಮಿಸುವರು ಮತ್ತು ದೇವತೆಗಳು ಸ್ತುತಿಸುವರು" ಎಂದು ಮುಂತಾಗಿ ಕೊಂಡಾಡುವರು ಹಿಂದೆ ಸತ್ಯಭಾಮೆಯ ಮೊರೆಯನ್ನು ಲಾಲಿಸಿ ದೇವಲೋಕದಿಂದ ಪಾರಿಜಾತ ವೃಕ್ಷವನ್ನು ತಂದು ಅವಳ ಅಂಗಳದಲ್ಲಿ ನೆಟ್ಟ ಕಥೆಯನ್ನು ಸೂಚಿಸಿರುವರು.

ಮೇಲೆ ಹೇಳಿದ ರೀತಿಗಳಲ್ಲಿ ವಿಷ್ಣುಚಿತ್ತರು ಶ್ರೀ ಕೃಷ್ಣನ ಶೈಶವದ ಲೀಲೆಗಳನ್ನು ವಿವಿಧರೀತಿಯಲ್ಲಿ ವರ್ಣಿಸಿ ಈ ಒಂದನೆಯ ಶತಕವನ್ನು ಮುಗಿಸುವರು.



ಪೂರ್ವದೇಶದ ಕಥೆ

ಮನುಜನೊಬ್ಬ ಮನೆಯ ಬಿಟ್ಟು, ನೆರೆಯ ಇಬ್ಬರಲ್ಲಿ ಹೋದ ;
ಕನಕ ಧಾನ್ಯದರಡು ಚೀಲ ತನಗೆ ಇಡಲು ಅವರಿಗಿತ್ತ,
ಒಬ್ಬನದನು ನೆಲಮಾಳಿಗೆ ಯಾಳದಲ್ಲಿ ಅಡಗಿಸಿಟ್ಟ ;
ಒಬ್ಬನಿನ್ನು ತನ್ನ ಹೊಲಕೆ ಹೋಗಿ ಅಲ್ಲಿ ಅದ ಚೆಲ್ಲಿದ.
ಆ ಮನುಷ್ಯ ಬಂದು ಕಡೆಗೆ ಮೊದಲಿನವನ ಚೀಲ ಕೇಳೆ,
“ ಇದೋ ತೆಗೆದುಕೋ, ನೀನಿಟ್ಟುದು ಸಂರಕ್ಷಿತ” ಎಂದು ಪೇಳೆ,
ಮೇಲೆ ನೋಡೆ ಕೆಟ್ಟುದಿಲ್ಲ; ಎಚ್ಚರದಿಂದೊಳಗೆ ನೋಡೆ
ಕಂಡುದೇನು ಅವನು ಈಗ ? ಧಾನ್ಯವೇನು ಇಲ್ಲವಲ್ಲ:
ಅದರೊಳರ್ಧ ತೋರುತಿಹುದು ಹರಿದುಹೋಗಿ ಶಿಥಿಲವಾಗಿ
ಉಳಿದುದರ್ಧ ಹೊಂದಿಯಿಹುದು ಹಸಿರುಬಣ್ಣ ಹುಳುಗಳನ್ನು
ನಾಶವಾದ ರಾಶಿನೋಡಿ ಕೋಪಪಡಲ್ಲೆ ಹಿಂದಿರುಗಿದ;
ಆಗ ಕೇಳೆ ಇನ್ನೊಬ್ಬನ: “ ನನ್ನ ಧಾನ್ಯ-ಚೀಲವೆಲ್ಲಿ? ”
ಅವ ಹೇಳಿದ: “ ನನ್ನೊಂದಿಗೆ ಬಂದು ನೋಡು ಅದರ ವೃದ್ಧಿ”
ಮತ್ತೆ ಅವನ ಹೊಲಕೆ ಕೊಂಡು ತೊನೆವ ತೆನೆಗಳನ್ನು ತೋರೆ,
ಆಗಳವನು ಸಂತಸವಾಗೆ ನಕ್ಕು ನುಡಿದ: “ ಇದುವೆ ಒಬ್ಬ
ಒಳನೋಟವ ಪಡೆದು ಏನು ಇಲ್ಲದವನ ಕೂಡಿಸಿಹೆನು,
ಮಾತಿನರ್ಥ ಗಣಿಸಿದನವ, ನೀನಾದರೊ ಸಾರಬೀರ್ದೆ;
ಇಂತು ನಿನಗು ನನಗು ಕೂಡ ಲಾಭ ಬರುವ ತೆರದಿ ಬೆಳೆದೆ;
ಈ ಬೆಳೆಯೊಳು ‘ನೀನು ನನಗೆ ಎರಡು ಚೀಲ ಧಾನ್ಯ ತುಂಬು,
ಏನು ಉಳಿವುದೆಲ್ಲ ನಿನಗೆ ಪೂರ್ಣವಿರಲು ಹಕ್ಕು ಇಹುದು.’

The Eastern Tale ಕವನದ ಭಾವಾನುವಾದ
(Poet-unknown.)

ದೇವಲೀಲೆ ಅನುಪಮ

ಲೇಖಕರು :

ಅಬ್ದುಲ್ ಖಯೂಂ

ದೇವರು ನಮಗೆ ಪ್ರತ್ಯಕ್ಷವಾಗಿ ಕಾಣುವುದಿಲ್ಲ. ರೆಮರೆಯ ಹಿಂದೆಯೇ ನಿಂತು ತನ್ನ ಲೀಲೆಗಳನ್ನು ಪ್ರದರ್ಶಿಸುತ್ತಾ ಜಗದ ಜನರನ್ನು ದಂಗುಗೊಳಿಸಿದ್ದಾನೆ. ಪೂರ್ಣ ರೂಪದಲ್ಲಿ ಅವನನ್ನು ಯಾರೂ ಕಂಡಿಲ್ಲ. ನೋಡಲು ಮನುಷ್ಯನಿಗೆ ಶಕ್ತಿಯೂ ಇಲ್ಲ. ಸೂರ್ಯ ನಲ್ಲಿ ಅವನತ್ತ ನೋಡಿದರೆ ಸಾಕು ಕಣ್ಣುಗಳಲ್ಲಿ ನೀರೂರಿ ಬಾಧೆ ಪಡಬೇಕಾಗುತ್ತೆ. ಬಿರುಗಾಳಿಯ ಹೊಡೆತ ಗುಡುಗು ಮಿಂಚಿನ ಆರ್ಭಟ ಅಕಟಕಟಾ! ನಿನ್ನ ಸಹ ವಾಸ ಸಾಕೆನ್ನಿಸುತ್ತದೆ ನಮಗೆ: ಸರ್ವ ಸೃಷ್ಟಿ ಯಲ್ಲಿಯೂ ಅವನ ಶಕ್ತಿ ಹರಿದು ಹಂಚಿ ಹೋಗಿದೆ. ಆದ್ದರಿಂದಲೇ ಅವನೆಮಗೆ ಪೂರ್ಣ ರೂಪಿನಲ್ಲಿ ಕಾಣಿ ಸುವುದಿಲ್ಲ: ಕಾಣಿಸದ ಮಾತ್ರಕ್ಕೆ ದೇವರಿಲ್ಲವೆಂದು ಹೇಳುವ ಹಾಗಿಲ್ಲ, ದೇವರಿಲ್ಲವೆಂದವನು ತಂದೆಯಿಲ್ಲದ ತಬ್ಬಲಿಯಿದ್ದಂತೆ.

ಕೋಗಿಲೆ ಕಂಠ ಮಧುರ ।
ಸುರ ಮಧು ಸ್ವರ ಮಧುರ ।
ಮಧುರ ಮಧು ಸುರಪ್ರೇಮ ।
ದೇವಲೀಲೆ ಅನುಪಮ ॥

ಅವನ ಸೃಷ್ಟಿಯಲ್ಲಿ ಬಗೆ ಬಗೆಯ ಪ್ರಾಣಿಗಳಿವೆ. ಅವುಗಳಲ್ಲಿ ಕೋಗಿಲೆ ಒಂದು. ಇದರ ಮಧುರ ಕಂಠದ ಸವಿಯನ್ನು ಸವಿಯದವರಿಲ್ಲ. ಫಲಪುಷ್ಪ-ವೃಕ್ಷಗಳ ಮೇಲೆ ಕುಳಿತು ಹಾಡಲು ಪ್ರಾರಂಭಿಸಿದರೆ, ಇದ್ದ ಕ್ಕಿದ್ದಂತೆಯೇ ನಮ್ಮ ಕರಣಗಳು ಅದರ ಕಂಠದ ಮಾಧುರ್ಯವನ್ನು ಹರಣಮಾಡಿ ಆನಂದವನ್ನು ಅನುಭವಿಸುತ್ತೇವೆ. ಮಧುರ ಸ್ವರದ ತ್ರಾ ನಾರು? ಕೋಗಿಲೆ ಕಂಠದಲ್ಲಿ ಮಾಧುರ್ಯ ಹೇಗೆ ಬಂದಿರಬೇಕು? ಎಲ್ಲಿಂದ ಬಂತು ಎಂದು ನಾನಾ ತರಹವಾಗಿ ವಿಮರ್ಶಿಸಿ, ಸ್ವರದಲ್ಲೇ ಇಷ್ಟು ಮಾಧುರ್ಯವಿರಬೇಕಾದರೆ ಸೃಷ್ಟಿ ಕರ್ತನ ರೂಪರೇಖೆಗಳೆಂತಿರಬೇಕೆಂದು ಊಹಿಸಿ ಅವನ ಲೀಲೆ ಮಹಿಮೆಯನ್ನು ಕೊಂಡಾಡುವೆವು. ಅಂದೇ ನಮಗೆ ಕಾಣದ ಅಪೂರ್ವ ಶಕ್ತಿಯ ಅರಿವಾಗುವುದು. ಚೆಲ್ವ ಗುಲಾಬಿಯನ್ನು ಕಂಡ ರಮಣಿಯು ಪಾಡೇನು? ಎಷ್ಟು ಸುಂದರವಾಗಿದೆ ಈ ಹೂವು! ಬಣ್ಣ ವಾಸನೆ ಎಷ್ಟು ಆಕರ್ಷಣೀಯವಾಗಿದೆ. ಕರ್ತನ ಮಹಿಮೆಯನ್ನು ಕೊಂಡಾಡಿ, ಹೂವನ್ನು ಗಿಡದಿಂದ ಬಿಡಿಸಿ ಭಕ್ತಿ ಪ್ರೇಮದಿಂದ ಅದನ್ನು ತನ್ನ ಜಡೆಯಲ್ಲಿ ಮುಡಿದುಕೊಳ್ಳುವರು. ದೇವ ರಮಣಿಯ ಫಣಿ ಏರಿ ನಕ್ಕು ನಲಿಯುವನು ಅವನ ಕೃತಿ ಜಗದ ಜನರ ಸ್ತುತಿಯನ್ನು ಕೇಳಿಸಿ ಒಂದಲ್ಲ ಒಂದು ರೀತಿಯಲ್ಲಿ ದೇವನಿದ್ದಾನೆ ಎಂಬ ತತ್ವಕ್ಕೆ ತಲೆಬಾಗಿ ನಾನಾ ರೀತಿಯಲ್ಲಿ ಮಹಿಮಾತೀತನನ್ನು ಪೂಜಿಸಿ ಅವನ ಕೃಪೆ ಕಟಾಕ್ಷಕ್ಕೆ ಪಾತ್ರರಾಗುತ್ತಾರೆ.

ಕೋಗಿಲೆ ಕಂಠದ ಮಧುರತೆ, ರಂಗು ರಂಗಿನ ಪುಷ್ಪಗಳ ಚೆಲುವು ಮಕರಂದ, ಕಂಡು ಬೆರಗಾಗುತ್ತೇವೆ.

ಇವುಗಳ ಸೃಷ್ಟಿಕರ್ತ ಚೆನ್ನಿಗ ಎಷ್ಟು ಸುಂದರನಾಗಿರಬೇಕು? ತುಳಸೀದಾಸರ ಪತ್ನಿ ಅತ್ಯಂತ ಸುಂದರಿ. ಆ ಸುಂದರಿ ತನ್ನ ಪತಿ ದೈವ ಭಕ್ತನಾಗುವಂತೆ ಪರಿವರ್ತಿಸಲು ಅಳವಡಿಸಿಕೊಂಡ ರೀತಿ ತುಂಬಾ ಗಂಭೀರವಾಗಿತ್ತು. ನನ್ನ ಸೌಂದರ್ಯವನ್ನು ಕಂಡು, ಏಕೆ ಮರುಳಾಗಿ ಲೌಕಿಕ ಸುಖ ಭೋಗಗಳಿಗೆ ತುತ್ತಾಗುವಿರಿ. ಅವನ ಕಲಾಕೃತಿ, ನನ್ನಲ್ಲೆ ಇಷ್ಟು ಸೌಂದರ್ಯವಿರಲು, ಪರಮಾತ್ಮನೆಷ್ಟು ಸುಂದರನಾಗಿರಬೇಕು. ನನ್ನನ್ನು ಪ್ರೀತಿಸುವ ಬದಲು ಸುಂದರ ಮೂರ್ತಿ ಪರಮಾತ್ಮನನ್ನು ಪ್ರೀತಿಸಿ ನಿಮ್ಮ ಜೀವನ ಸಾರ್ಥಕವಾಗುವುದು "ಎಂತಹ ಸುಂದರ ರಮಣಿ" "ಎಂತಹ ಮಾರ್ಗದರ್ಶನ" ಹೆಂಡತಿಯ ಅಮೃತ ನುಡಿ, ತುಳಸಿದಾಸರನ್ನು ಆಧ್ಯಾತ್ಮಿಕ ಚುಕ್ಕಿಯನ್ನಾಗಿ ಪರಿವರ್ತಿಸಿ ಧೃವತಾರೆಯಂತೆ ಸತತ ಗಗನದಲ್ಲಿ ಬೆಳಗಲು ಅಣಿಮಾಡಿತು.

ಕಾಮ ಮತ್ತು ಪ್ರೇಮ ಈ ಜಗವನ್ನು ಆಕ್ರಮಿಸಿಕೊಂಡಿವೆ. ಕಾಮ ಕ್ಷಣಿಕವಾದದ್ದು. ಆದರೆ ಪ್ರೇಮ ಅನಂತ, ಅಮರ. ಆದರೆ ಇಂದು ಜಗತ್ತಿನಲ್ಲಿ ಕಾಮದ ಕಿಡಿ ನೂರ್ಮಡಿಸಿ ಮನುಜ ಸುಂದರ ಜೀವಿ ಕಾಮರೂಪಿ ಕಂದರದಲ್ಲಿ ಬಿದ್ದು ಬೇತಾಳನಾಗಿದ್ದಾನೆ. ಕಾಮವಿರಬೇಕು, ಆದರೆ ಇತಿಮಿತಿಗಳ ಎಲ್ಲೆ ಕಟ್ಟಿನಲ್ಲೇ ಸೀಮಿತನಾಗಿರಬೇಕು, ಸೀಮಿತನಾಗಿರದೆ ಅಗ್ನಿಯ ಜ್ವಾಲೆಯಂತೆ ಹರಡಿ ಅತ್ಯುತ್ತಮವಾದ ಶೀಲ ಸಂಪತ್ತನ್ನು ಭಸ್ಮಗೊಳಿಸುತ್ತಾ, ಜಗತ್ತಿನ ಜನರನ್ನು ಸರಿಯಾದ ಮಾರ್ಗಕ್ಕೊಯ್ಯದೆ ಜ್ಞಾನ ಜ್ಯೋತಿ ದೀಪ್ತಿಯನ್ನಾರಿಸುತ್ತಾ ಕತ್ತಲೆ ಮಯ ಜೀವನದತ್ತ ಒಯ್ಯುತ್ತಿದೆ

ಪ್ರೇಮಕ್ಕೆ-ಎಲ್ಲೆ ಕಟ್ಟಿರಬಾರದು. ಪ್ರೇಮವೊಂದು ಮಧುರ ಮಧು. ನಿರ್ಮಲ ಪ್ರೇಮ! ಈ ಪ್ರೇಮದ ಮುಂದೆ ದೇವರು ಕೂಡ ನಿಲ್ಲಲಾರ. ಅವನೂ ಕೂಡ ಮನುಷ್ಯನ ಬುಟ್ಟಿಗೆ ಬೀಳದಿರನು. ಮಹಾ ಬಲಶಾಲಿ ಪರಮಾತ್ಮನು ಪ್ರೇಮಿಯ ಪ್ರೇಮಕ್ಕೆ ಬಲಿಯಾಗುತ್ತಾನೆ ಭಕ್ತನ ಭಕ್ತಿ ಪ್ರೇಮಕ್ಕೆ ಬಲಿಯಾಗಿ ಅವನ ಸುತ್ತಲೂ ಹುಚ್ಚನಂತೆ ಕುಣಿದಾಡುತ್ತಾನೆ. ಈ ಮರ್ಮವನ್ನರಿತ ಮಹಾತ್ಮರು, ಜ್ಞಾನಿಗಳು ಮತ್ತು ಭಕ್ತರು ದೇವರ ಪ್ರೇಮಕ್ಕೆ ಪಾತ್ರರಾ[illegible] ಪರಮಾನಂದವನ್ನು ಅನುಭವಿಸುತ್ತಾರೆ. ಲೌಕಿಕ ವ್ಯ[illegible] ಹಾರದಲ್ಲೂ ಪ್ರೇಮದಿಂದಲೇ ಸಮಸ್ತ ಕ್ಷೇತ್ರಗಳಲ್ಲಿ ಜಯವನ್ನು ಪಡೆಯಬಹುದು. ಮಗುವನ್ನು ಪ್ರೀ[illegible]ದರೆ ಮಗು ನಮ್ಮನ್ನು ಪ್ರೀತಿಸುತ್ತದೆ. ಜನರನ್ನು ಪ್ರೀತಿಸಿದರೆ ಜನ ನಮ್ಮನ್ನು ಪ್ರೀತಿಸುತ್ತಾರೆ. ಸರ್ವ[illegible]ವನ್ನು ನಮಗಾಗಿ ತ್ಯಾಗಮಾಡಲು ಸಿದ್ಧರಾಗುತ್ತಾರೆ.

ತಾಯಿ ಮತ್ತು ಮಗು, ಪ್ರೇಮಿ ಪ್ರೇಯ[illegible] ನಾಯಕ ಮತ್ತು ಜನ, ಭಕ್ತ ಮತ್ತು ದೇವ. ಇ[illegible] ಮಧ್ಯೆ ಕಲ್ಪಿತವಾಗುವ ಪ್ರೇಮವೂ ಹಿರಿದಾದುದ[illegible] ಪ್ರೇಮ ಪೈಸೆಗೆ ಸಂತೆಯಲ್ಲಿ ಮಾರಾಟವಾಗುವ ವಸ್ತು[illegible]ವಲ್ಲ. ಪ್ರೇಮ ಇಡೀ ವಿಶ್ವವನ್ನೇ ಆವರಿಸಿಕೊಂಡ[illegible] ಪ್ರೇಮದ ಅಚ್ಚಿನ ಮೇಲೆ ವಿಶ್ವದ ಚಕ್ರವು ಚಲಿಸುತ್ತ[illegible] ತಿಳಿದೊ ತಿಳಿಯದೆಯೋ ಪರಸ್ಪರ ಪ್ರೀತಿಸುತ್ತೇ[illegible] ಗುರು ಶಿಷ್ಯನನ್ನು, ಮಾತೆ ಮಗುವನ್ನು, ಕರು [illegible]ಳನ್ನು. ಇದು ಲೌಕಿಕ ಪ್ರೇಮಕ್ಕೆ ಸೀಮಿತವಾ[illegible] ಸಾಲದು. ಅದು ಅಲೌಕಿಕ ಪ್ರೇಮವಾಗಿ ಪರಿವ[illegible]ಲ್ಪಟ್ಟು ಕಣ್ಣಿಗೆ ಕಾಣದ ಮಹಾಶಕ್ತಿ ಪರಮಾತ್ಮನನ್ನು ಪ್ರೀತಿಸುವಂತಾಗಬೇಕು.

ಮನುಷ್ಯನಿಗೆ ಸಾಂಸಾರಿಕ ಜೀವನ ಅತಿ ಮುಖ್ಯ[illegible] ಸಂಸಾರಿ ದುಃಖಿ, ಸನ್ಯಾಸಿ ಸುಖಿ ಅಂತ ಹಿರಿಯ[illegible] ನಾಣ್ನುಡಿ. ಸನ್ಯಾಸಿ ಇಹಲೋಕದಿಂದ ದೂರವಿದ್ದು[illegible] ಪರಲೋಕ ಮತ್ತು ಪರಮಾತ್ಮನತ್ತ ಸರಿಯುವ[illegible] ಸಾಂಸಾರಿಕ ಜೀವನ ನೀರಿನಲ್ಲೇ ಜನಿಸಿ ನೀರಿಗಂಟ[illegible]ಳದ ಕಮಲದಂತಿರಬೇಕು. ಇದು ಕಷ್ಟ-ಸಾಧ್ಯವಾಗ[illegible] ಸಮಸ್ಯೆಯಲ್ಲ. ಸಂಸಾರಿಯ ಮಾರ್ಗ ಸನ್ಯಾಸಿ[illegible] ಮಾರ್ಗಕ್ಕಿಂತಲೂ ಹಿರಿದಾದುದು, ಮತ್ತು ಮಹತ್ತ[illegible]ವಾದುದು. ಇಹಪರಗಳೆರಡಕ್ಕೂ ಅಂಟಿಕೊಂ[illegible] ನಡೆಯುತ್ತಿರುವ ಸನ್ಯಾಸಿಗಳ ಮಾರ್ಗವು ಮತ್ತ[illegible] ಹಿರಿದಾದುದು, ಅವರು ಲೌಕಿಕ ಅಲೌಕಿಕ ಜ್ಯೋ[illegible]ಗಳು, ಲೌಕಿಕ ವ್ಯವಹಾರಗಳಿಂದ ಜಗದ ಅಂಧಕಾ[illegible]ವನ್ನು ತೊಡೆಯಲು ಮಾನವರನ್ನು ನಿಜ ಮಾನ[illegible]ರನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ. ಅಲೌಕಿ[illegible] ಜ್ಯೋತಿಯ ಬೆಳಕಿನಿಂದ ದಿವ್ಯ ಮಾರ್ಗವನ್ನು ಹಿಡಿ[illegible]

ದೇವನ ಚರಣ ಕಮಲದಲ್ಲಿ ಐಕ್ಯರಾಗುತ್ತಾರೆ, ಮಧುರ ಮಧು ಸುರ ಪ್ರೇಮವನ್ನು ಪಾನಮಾಡಿ ಸಚ್ಚಿದಾನಂದನ ಕೃಪೆಗೆ ಪಾತ್ರರಾಗಿ ಹುಟ್ಟು ಸಾವುಗಳಿಂದ ಬಿಡುಗಡೆ ಪಡೆದು ಮೋಕ್ಷ ಮಾರ್ಗದತ್ತ ನಡೆಯುವರು. ಅಂತಹವರ ಮಾರ್ಗದರ್ಶನ ಪಡೆದು ನಡೆಯುವುದು ಪ್ರತಿಯೊಬ್ಬ ಮಾನವನ ಆದ್ಯ ಕರ್ತವ್ಯ.

ಪ್ರೇಮದ ಕಿಡಿಯಾಗಿ ।
ಮನುಜನಮನ ಸೇರುವೆ ।
ನರಳಿಸಿ ಮನ ಅರಳಿಸಿ ।
ಮುಕ್ತಿಯ ಪಥ ತೋರುವೆ ॥



ರಣ-ಕ್ರೀಡೆ

ಭಾರತಾಂಬೆಯ ಭಾಗ್ಯ ಪುತ್ರರೆ ಭರದಿ ಗಡಿಯನು ಕಾಯಿರಿ।
ಹಿಮಗಿರಿಯ ಕಂದರದಿ ವೈರಿಯ ಸತತವೂ ಸದೆಬಡೆಯಿರಿ॥
ಕುಟಿಲ ತಂತ್ರದಿ ಜಟಿಲ ಯಂತ್ರದಿ ಚಣಚಣಕು ಸಮನಿಸುತಲಿ।
ದಿಟವ ಸಾಧಿಪರಂತೆ ತೋರುವ ಕಟುಕ–ಕುಟಿಲರ ನೆದುರಿಸಿ॥
ವೀರ ಮಾತೆಯ ಶೂರತನಯರೆ, ಅತುಳ ಶೌರ್ಯವ ತೋರಿಸಿ।
ಬಾರಿಬಾರಿಗು ತೂರಿಬರುತಿಹ ಕಪಟಿಗಳ ಹೊಡೆದೋಡಿಸಿ॥
ಜಗ್ಗದಲೆ ಝುಡಿಯುತ್ತ ಶತ್ರುವ ಮುರಳಿಸಿರಿ ನೀವೊಡನೆಯೆ।
ನುಗ್ಗಿ ಬಡಿಯರಿ ಮತ್ತೆಯಾಲೋಚಿಸದ ತೆರೆದೊಳಗಂಗಳ॥
ಗಡಿಯ ರಕ್ಷಕರಿಂದ ನಮ್ಮರಾಷ್ಟ್ರವುಳಿವುದು ಸತ್ಯವು।
ಅಡಿಯ ಹಿಂದಕೆ, ಇಡದ ರೀತಿಯೊಳಾಡಿರಿ "ರಣ-ಕ್ರೀಡೆ"ಯ॥

—ಸಿ. ಮಹಲಿಂಗಯ್ಯ

ಈ ಶೀರ್ಷಿಕೆಯನ್ನು ನೋಡಿದ ಕೂಡಲೆ, ಕುತೂಹಲ ಕೆರಳುವುದು. ಮಾಸ್ತಿ ಎಂಬುದು ಊರಲ್ಲ, ಮಾಸ್ತಿ ಎಂಬ ಮಾತು ಮಹಾಸತಿಯ ತದ್ಭವ, "ಮಹಾಸತಿ" ಎಂಬುದು ನಿಜಕ್ಕೂ ಅಪೂರ್ವ. ಹಿಂದಿನ ಕಾಲದಲ್ಲಿ ಅಂದರೆ ರಾಜಾರಾಮಮೋಹನರಾಯರು ಸತಿ (ಸಹಗಮನ) ಪದ್ಧತಿಯನ್ನು ನಿಲ್ಲಿಸುವುದಕ್ಕೆ ಮುಂಚೆ, ಪತಿ ಮೃತಿಹೊಂದಿದರೆ ಪತಿಯೊಡನೆ ಪತ್ನಿಯೂ, ಧೈರ್ಯ ಸ್ಥೈರ್ಯಗಳಿಂದ ಚಿತೆಯನ್ನೇರುತ್ತಿದ್ದಳು. ಈ ಸಹಗಮನ ಪದ್ಧತಿ ನಮಗೆ ಅನಾಗರಿಕವಾದ ಆಚಾರ ಪದ್ಧತಿ ಎಂದು ಕಾಣಬಹುದು. ಆದರೆ ಆ ಹೆಣ್ಣಿನ ಧೈರ್ಯ ತ್ಯಾಗ, ಮುಂತಾದ ಹಿರಿಯ ಗುಣಗಳು ಮೆಚ್ಚಲು ಅರ್ಹವಾದುವು.

ಮಾಸ್ತಿಗಲ್

ಲೇಖಕಿ

ಜೆ. ಶಾರದಾರಾಜಶೇಖರ್

ಒಂದೊಂದು ಕಾಲದಲ್ಲಿ ಒಂದೊಂದು ವಿಚಾರಕ್ಕೆ ಆಚಾರಕ್ಕೆ ತತ್ವಕ್ಕೆ ಬೆಲೆಯುಂಟು. ಜನರ ಮನೋಧರ್ಮಗಳು ಕಾಲಕಾಲಕ್ಕೆ ಬದಲಾವಣೆ ಹೊಂದುತ್ತ ಹೋಗುತ್ತವೆ. ಒಂದು ಕಾಲದ ಧರ್ಮ ಆಚಾರ, ತತ್ವ ಇನ್ನೊಂದು ಕಾಲಕ್ಕೆ ಒಪ್ಪುವುದಿಲ್ಲ. ಆದರೆ ಆಗ ಅಂದರೆ ಕ್ರಿಸ್ತಶಕ 6-7ನೆ ಶತಮಾನದಿಂದ--13-14ನೆ ಶತಮಾನದವರೆಗೂ ತನ್ನು ಸರ್ವಸ್ವವನ್ನು ತ್ಯಾಗ ಮಾಡುವುದೇ ಪರಮ ಧರ್ಮವಾಗಿತ್ತು. ಸ್ವಾಮಿಭಕ್ತಿಗಾಗಿ ಅಗ್ನಿಪ್ರವೇಶ ಮಾಡಿದ ಉದಾಹರಣೆಗಳು ಇವೆ. ಅಂಥವರ ಜ್ಞಾಪಕಾರ್ಥಕವಾಗಿ ವೀರಗಲ್ಲುಗಳನ್ನು ನೆಡಿಸುತ್ತಿದ್ದರು. ಈ ಮ ಹಾ ಸ ತಿ ಕಲ್ ಅಥವಾ ಮಾಸ್ತಿಗಲ್‌ಗಳು ಪತಿಭಕ್ತಿಯನ್ನು ಸಾರುವ ಸಲುವಾಗಿ ನೆಟ್ಟಕಲ್ಲುಗಳು. ಪತಿಭಕ್ತಿ ಎಷ್ಟು ಅಮರವಾದದು ದೈವದತ್ತವಾದುದು ಎಂಬುದನ್ನು ಸಾರುವ ಸಲುವಾಗಿ ಸತಿಯಾಗಿ, ಅದರಲ್ಲೂ ಮಹಾಸತಿ ಎನಿಸಿ ಚಿತೆಯನ್ನೇರುತ್ತಿದ್ದರು. ಅವರ ಈ ಮನೋಧಾರ್ಢ್ಯ ಅದೆಷ್ಟು ಹಿರಿದು! ಅಂತಹ ಸ್ತ್ರೀಯರನ್ನು ಸತಿ ಎಂದು ಬಹು ಪವಿತ್ರ ಭಾವನೆಯಿಂದ, ಹಾಗು ಅತ್ಯಂತ ಗೌರವದಿಂದ ಕರೆಯುತ್ತಿದ್ದರು. ಹಾಗೂ ಅಂಥ ಚಿತೆಯನ್ನೇರುವ ಸತಿಯು ಪೂಜೆ ಮಾಡಿದರೆ ಸದ್ಗತಿ ಎಂಬ ನಂಬಿಕೆ ಸಹ ನಮ್ಮ ಭಾರತದ ಮಹಿಳೆಯರಿಗಿತ್ತು. ಅಂಥ ಸತಿಯ ಜ್ಞಾಪಕಾರ್ಥಕ್ಕಾಗಿ ಗುಡಿಗಳು ನಿರ್ಮಾಣವಾದವು. ಇಂದಿಗೂ ಅಲ್ಲಲ್ಲಿ "ಮಾಸ್ತಿ ಗುಡಿ" ಗಳನ್ನು ಕಾಣಬಹುದು. ಹಾಗೂ ಅಂಥ ಮಹಾಸತಿಯರ ನೆನಪಿನ ಕಲ್ಲುಗಳನ್ನು ನೆಡುತ್ತಿದ್ದರು. ಆ ಮಹಾಸತಿ ಕಲ್ಲಿನಲ್ಲಿ ಸತಿಯ ಮೂರ್ತಿ ಇರುತ್ತದೆ. ಅಲ್ಲಿ ಸತಿಯು ಪದ್ಮಾಸನ ಹಾಕಿಕೊಂಡು ಕುಳಿತಿರುತ್ತಾಳೆ. ಆಕೆಯ ಕೂದಲು ಜ್ವಾಲೆಯಂತೆ ಮೇಲಕ್ಕೆದ್ದಿರುತ್ತದೆ. ಬಲಗೈ ಬೆರಳುಗಳು ಮೇಲಕ್ಕೆತ್ತಿ ಹಿಡಿದಿರುವ ಉದಾಹರಣೆಗಳೂ ಉಂಟು. ಕೆಲವು ಕಡೆಯ ಸತಿಯು ಹೆಬ್ಬೆಟ್ಟು ತರ್ಜನಿಗಳಲ್ಲಿ ನಿಂಬೆಯ ಹಣ್ಣನ್ನು ಹಿಡಿದಿರುತ್ತಾಳೆ. ಹಲವು ಕಲ್ಲುಗಳಲ್ಲಿ ಸತಿಪತಿಗಳಿಬ್ಬರೂ–ವೀರ, ಮಹಾಸತಿ, ವಿಮಾನದಲ್ಲಿ ಕೂತಿರುವ ಹಾಗೂ, ಚಾಮರ ಸೇವೆ ಮಾಡುತ್ತ ದೇವತೆಗಳು ಅವರನ್ನು ಸುರಲೋಕಕ್ಕೆ ಒಯ್ಯುತ್ತಿರುವ ಹಾಗೂ ಚಿತ್ರಗಳಿರುತ್ತವೆ.

ಈಗಲೂ ಶಿವಮೊಗ್ಗೆ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಮಾಲಂದೂರೆಂಬ ಊರೊಂದಿದೆ. ಅಲ್ಲಿ "ಮಾಸ್ತಿಹಕ್ಕಲ್" ಎಂಬ ವಿಸ್ತಾರವಾದ ನಿವೇಶನವೊಂದಿದೆ. ಹಿಂದಿನ ಕಾಲದಲ್ಲಿ ಮಾಸ್ತಿಕಲ್ಲ-ಗಳನ್ನು ಇಲ್ಲೇ ನೆಡುತ್ತಿದ್ದರೇನೋ "ಸ್ವಸ್ತಿ ಶ್ರೀಮತು ವೀರ ಹರಿಹರರಾಯ

ಥ್ವೀರಾಜ್ಯವನಾಳಲಿ ಶಾ|| ಶಕವರ್ಷ 1038ಷಯು ವತ್ಸರ ಚ|| ಬಹುಳ ದಶವಿಾ ಗುರುವಾರಲಿ ಲೆಯನೊಡ್ಡರ ಬೇಡ ಬೀರ ಜೀಲಿ ಜೀಯರ ಬೆಸ ನ್ನಿರದಲಿ ಅಮರರೊಳು ಪೋಗೆ ಬೊಮ್ಮಕ್ಕನು ಹಾಸತಿಯಾಗಿ ದೇವಲೋಕ ಪ್ರಾಪ್ತರಾದರು".

ಈ ಮೇಲಿನ ಶಾಸನ ಮಾಸ್ತಿಹಕ್ಕಲ್ಲಿನಲ್ಲಿದೆ.

ನಮಗೆ ಮಹಾಸತಿ ಕಲ್ಲುಗಳು, ಗೊಡ್ಡು ಸಂಪ್ರ ಾಯವಾಗಿ ತೋರಬಹುದು. ಆದರೆ ಸಾವಧಾನದಿಂದ ೋಚಿಸಿ ನೋಡಿದರೆ, ದಾಂಪತ್ಯ ಜೀವನ, ಒಂದು ೀವನಕ್ಕೆ ಮಾತ್ರ ಮುಗಿಯದು. ಜನ್ಮಜನ್ಮಾಂತರದ ಾಂಧವ್ಯ. ಈ ಜನ್ಮದಲ್ಲಿ ನಾವು ಸತಿಪತಿಗಳಾಗಿ ಾಳ್ವೆ ನಡೆಸಿದೆವು. ಈ ಲೋಕದಲ್ಲಿ, ಪರಲೋಕ ಲ್ಲಿಯೂ ಜೊತೆಯಲ್ಲಿಯೇ ಇರೋಣ ಎನ್ನುವ ಭಾವ ಇತ್ತೇನೋ; ಅವರ ಅಮರ ಪ್ರೇಮಕ್ಕೆ ಸಾಕ್ಷಿಯಾಗಿ ನಿಂತಿರುವ ಈ ಮಹಾಸತಿಕಲ್‌ಗಳು ಸಾಮಾನ್ಯವೇ? ದಾಂಪತ್ಯ ಸುಖ ಕ್ಷಣಿಕವಲ್ಲ ಅಮರವಾದುದಲ್ಲವೇ? ಮಹಿಳೆ ಕೇವಲ ಶೃಂಗಾರದ ಬಣ್ಣದ ಬೀಸಣಿಗೆಯಲ್ಲ. ಪುರುಷರನ್ನು ತನ್ನ ಸೌಂದರ್ಯದಿಂದ ತನ್ನೆಡೆಗೆ ಆಕರ್ಷಿಸು ವವಳು ಅಲ್ಲ. ಅವಳು ತ್ಯಾಗ ಧರ್ಮ ಸಂಯಮಗಳ ಪ್ರತೀಕ, ಅವಳ ತ್ಯಾಗದ ಹಿರಿಮೆ ಅರುಹಲು ಆ ಮಹಾ ಸತಿ ಕಲ್ಲುಗಳೇ ಸಾಕ್ಷಿಯಾಗಿ ನಿಂತಿರುವಾಗ ಬೇರಿನ್ನಾವ ಸಾಕ್ಷಿ ಪುರಾವೆಗಳು ಬೇಕು. ಮಹಾ ಪತಿವ್ರತೆಯರು ದೇವಲೋಕದಲ್ಲಿಯೂ ಸಹ ಪೂಜನೀಯರು, ಎಂಬ ತತ್ವ ಅರಿತಿದ್ದ ಮಹಾಸತಿಯರ ಜನ್ಮ, ಅಮರ, ಅವರ ಕೀರ್ತಿ ಸೂರ್ಯ ಚಂದ್ರರಿರುವವರೆಗೂ ಇರುವುದಲ್ಲವೇ! ಭಾರತ ಪುಣ್ಯಭೂಮಿ; ಇಂಥ ಮಹಾಸತಿಯರನ್ನು ಪಡೆದ ಭಾರತದ ಕೀರ್ತಿ ಅಜರಾಮರವಾಗಿ ಬೆಳಗಲಿ.



ಆ ಜೀವನ ಪಾವನ

ಎಲ್ಲೆಲ್ಲವೂ ಅಸೂಯೆಗೆ ಬೆಲೆ
ಎಲ್ಲಿರದೊ ಸ್ವಾರ್ಥಕೆ ನೆಲೆ
ಎಲ್ಲಿಹುದೋ ಗುಣದಾಗರ
ಆ ಜೀವನ ಪಾವನ......... (1)

ಶ್ರೇಷ್ಠಧ್ಯೇಯ ಸಾಧನಮನ
ಅದಕಾಗಿ ಸರ್ವ ಸಮರ್ಪಣ
ಎಡರು ಗೆಲ್ವ ಕಲಿತನ
ಆ ಜೀವನ ಪಾವನ (2)

ಸರ್ವರಿಗೂ ಸರಿಸಮಾನ
ಅದು ಮಹಾತ್ಮರ ಜೀವನ
ಅಮೃತ ಪಾನ ಸಮಾನ
ಅದಕೆ ನಮೋ ನಮನ.... .... (3)

ಭ್ರಮೆಯೆಲ್ಲದರ ನಿರಸನ
ಅಲ್ಲೆ ಜ್ಞಾನ ಸೋಪಾನ
ಹಿಂಗಿ ಹೋಗೆ ಹಿಂಸೆಯೆಲ್ಲ
ಅದೇ ಅಹಿಂಸೆಯ ಸದನ .... (4)

ಸತ್ಯ ಸೌಂದರ್ಯ ಶಿವ
ತ್ರಿವೇಣಿಯ ಸಂಗಮ
ಅದು ಮಹಾತ್ಮರ ಜೀವನ
ಅದಕೆ ನಮೋನಮನ........... (5)

ಎಂ. ಎಸ್. ರಾಮಲಿಂಗಪ್ಪ

ಮೋಕ್ಷ-ಸಾಂಗತ್ಯ

ಸ್ವಾತಂತ್ರ್ಯ ವೆಲ್ಲಿಹುದು ಓನನಗೆ ನಟರಾಜ?
ಸ್ವಾತಂತ್ರ್ಯ ವಿರುವಂತೆ ನಟಿಸುವೆ.
ಸ್ವಾತಂತ್ರ್ಯ ಉಂಟೇನು ಬೆಂದ ಮಾನವನೆನಗೆ ?
ಸ್ವಾತಂತ್ರ್ಯ-ವಿತ್ತು ಕರುಣಿಸಕಟ ॥ ೧ ॥
ಸತಿಸುತರು ಬಾಂಧವರು ಬಂಧು ಸೋದರರೆಲ್ಲ
ಗತಿ ಕೆಡುವ ತನಕ ಕಾಡಿಸಿದರು
ಪತಿತನಾದೆನು ಇವರೊಡನೆ ಮತಿಗೆಡುತ ನಾನು
ಗತಿಯು ತೋರೆನಗೆ ಸಿದ್ಧಲಿಂಗ. ॥ ೨ ॥
ಆರು ಹಿತವರು ಇಲ್ಲ ಮೂರು ಮಂದಿಗಳೊಳಗೆ
ನಾರಿ ಯಾದರೋ ಮಾಯೆಬರಿದೆ
ಧಾರುಣಿಯು ಏರಿದರೋ ಜಾರುವುದರಿತ್ವರಿತ
ಆರು ಹಿತರಿಲ್ಲ ನಿನ್ನ ಹೊರತು. ॥ ೩ ॥
ಬಲು ಬೆಂದೆನು ಪಂಚೇಂದ್ರಿಯ ಮುಕ್ಕರಣದಲಿ
ಕುಲವೆಂಯು ಮದವಷ್ಟೈಶ್ವರ್ಯದಲಿ
ಒಲಿಸುವ ಪರಿಯೆಂದಿರುವೆ ಪಾತಕಿ ಎನಗಂ
ಕಲಿಸುತೆ ಸಿಜ ಪೂಜಾವಿಧಿಯಾ ॥ ೪ ॥
ಅರಿಷಡ್ವರ್ಗದ ಪಾಶಕೆ ಸಿಲುಕುತೆ ಬೆಂದೆನು
ಗುರು ಸನ್ನಿಧಿ ಸಿಲುಕದೆ ನೊಂದೆನು
ದೊರಕಿಸು ಚಿರಸುಖ ಶಾಂತಿಯ ನೆನಗಕಟಕಟಾ
ಅರಿಯೆನು ಹೊರಳುವ ಮಾರ್ಗವನಾ ॥ ೫ ॥
ನಿಗಮಾಂಶ ಪರಿಯಂತ ಕಲಿತು ವಿದ್ಯೆಗಳನಾ
ಗಗನ ಯಾತ್ರೆಯ ಮಾಡಿ ಹುಡುಕಿದೆ
ಖಗನ ರೀತಿಯನನುಸರಿಸಿ ನಿನ್ನೆಯ ಪಥನಾ
ಸಿಗಲಿಲ್ಲ ನಿನ್ನ ನೆಲೆ ಗುರುವೇ. ॥ ೬ ॥
ಬಿಕ್ಷೆಬೇಡುವೆ ಸಿನ್ನ ಹೇ ಪರಶಿವನೆ ಕಾಯ್ವೈ
ಲಕ್ಷ ವೇಷವ ಪೊತ್ತೆ ನುದರಿಕೆ
ಚಕ್ಷುವಿರುವವಗಾಶ್ಚರ್ಯ ಚಿತ್ರ ತೋರಿ ನಿಜ
ಮೋಕ್ಷ ಬಿಕ್ಷೆಯನು ದಯಪಾಲಿಸೈ ॥ ೭ ॥

— ಜಿ. ಎನ್. ದಿವಾಕರಾಚಾರ್

ಸ್ವಾಭಿಮಾನಿನಿ

'ರಾಮಣ್ಣಾ...... ....'

ಓ......ಹೌದು! ಆ ಧ್ವನಿಯ ಜಾಡನ್ನು, ಅದರ ಹಿನ್ನೆಲೆಯನ್ನು ನಾನು ಊಹಿಸಬಲ್ಲೆ ಕುಳಿತಲ್ಲಿಯೇ...... ಇದೇನೂ ಮೊದಲ ಬಾರಿಯದಲ್ಲ. ಇಂತಹ ಕೂಗುಗಳು ಅದೆಷ್ಟೋ. ತನ್ನಿಚ್ಛೆಯನ್ನರಿತೂ ಈ ಕೂಗು ತನ್ನನ್ನು ಪದೇ ಪದೇ ಕಾಣಿಸುತ್ತಿರುತ್ತದೆ. ಆದರೆ ಆ ಕೂಗಿಗೆ 'ಓ' ಗೊಡದಿರಲಂತೂ ಸಾಧ್ಯವೇ ಇಲ್ಲ. ನನಗಿಷ್ಟವಿರಲಿ, ಇಲ್ಲದೇ ಹೋಗಲಿ ಅದನ್ನು ಕೇಳದ ಹೊರತು ಸುಮ್ಮನಿರಲು ಆಗೇ ಆಗದು. ಎಷ್ಟಾದರೂ ಆಕೆ ತಾಯಿ ಬಾಳುವೆಯ ಮಧ್ಯದಲ್ಲಿಯೇ ಬಯಲು ಮಾಡಿಕೊಂಡ ವಿಧವೆ. ಯಾರ ಆಸರೆಯೂ ಇಲ್ಲದೆ ತನ್ನೆರಡು ಕರುಳಿನ ಚೂರುಗಳಿಗಾಗಿ ಹಗಲಿರುಳೂ ಕೊರಗುತ್ತಿರುವ ದುರ್ದೈವಿ ಜೀವಿ. ನಮ್ಮ ಜೀವನದ ಆಗುಹೋಗುಗಳ ಏಕ ಮಾತ್ರ ಸೂತ್ರಧಾರಿಣಿ ಎಂದರೆ ಆಕೆಯೇ.

ನನಗೆ ತಿಳಿಯದೇ ಆ ಕೂಗಿನ ಅಂತರಾರ್ಥ? ಆದರೆ! ಆದರೇನು ಮಾಡಲಿ? ಅದೇಕೋ ಆಕೆಯ ಇಂಗಿತದಂತೆ ಅವಳ ಮಾತನ್ನು ನಡೆಸಲು ನನಗೆ ಸಾಧ್ಯವೇ ಇಲ್ಲ. ನನ್ನ ಮನ ಒಪ್ಪೇ ಒಪ್ಪದು. ಇದು ಆಕೆಗೂ ಗೊತ್ತಾಗಿದೆ, ನಿರ್ದಿಷ್ಟವಾಗಿ. ಆದರೆ ಆಕೆ ತನ್ನ ಛಲವನ್ನು ಇನ್ನೂ ಬಿಟ್ಟಿಲ್ಲವೆಂದೇ ಕಾಣುತ್ತದೆ.

ತಂಗಿ ಶಾಂತಿಯನ್ನಂತೂ ಕೇಳುವುದೇ ಬೇಡ. ನನ್ನಿಚ್ಛೆಯ ಭದ್ರವಾದ ಬುನಾದಿಯನ್ನು ಹಾಕಿದವಳೆಂದರೆ ಆಕೆಯೇ. ಅದಕ್ಕೆಂದೇ ನನಗೆ ಈ ಬಿಡಿಸಿಕೊಳ್ಳಲಾರದಂತಹ ವೇದನೆ. ಶಾಂತಿ ಎಲ್ಲರಂತಹ ಹುಡುಗಿಯಾಗಿದ್ದಿದ್ದರೆ ನಾನಿಷ್ಟು ಯೋಚಿಸಬೇಕಾದ ಅಗತ್ಯವಿರಲಿಲ್ಲವೇನೋ......ಕೇವಲ ಮೆಟ್ರಿಕ್ ಮುಗಿಸಿದ ಆಕೆಯ ಜ್ಞಾನದಾಹ ಕಂಡು ನಾನದೆಷ್ಟು ಬಾರಿ ಅಚ್ಚರಿಪಟ್ಟಿಲ್ಲ? ಜನ್ಮತಃ ಸ್ವಾಭಿಮಾನಿನಿಯಾದ ಆಕೆಯ ದಿಟ್ಟತನದ ಮಾತುಗಳು ಧೃಡ ವಿಶ್ವಾಸ, ಕಂಡು ನಾನೆಷ್ಟು ಬಾರಿ ಹೆಮ್ಮೆಪಟ್ಟಿಲ್ಲ? ಹೆಮ್ಮೆಪಟ್ಟಿರುವಂತೆಯೇ ವ್ಯಥೆ-ಪಡದೆಯೂ ಇಲ್ಲ. ಸುಖವಾಗಿ ಉಂಡುಟ್ಟು ನಲಿಯಬೇಕಾದ ಕಾಲದಲ್ಲಿ ಆಕೆ ತನ್ನ ವೇತನದಿಂದ ಮನೆಯ ಸಂಸಾರವನ್ನು ಹೆಚ್ಚು ಏರು ಪೇರುಗಳಿಲ್ಲದೆ ತೂಗಿಸಿಕೊಂಡು ಹೋಗುತ್ತಿರುವ ಆಕೆಯನ್ನು ಕಂಡು ನಾನೆಷ್ಟು ನೊಂದಿದ್ದೇನೆ ಗೊತ್ತೇ?...........ಮುಂದೆ ಕಲಿಯಬೇಕೆಂಬ ಇಚ್ಛೆ ಇದ್ದರೂ ಹತ್ತಿಕ್ಕಿಕೊಂಡು ನನ್ನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟು ನನ್ನ ಏಳಿಗೆಗಾಗಿಯೇ ಚಿಂತಿಸುತ್ತಿರುವ ಆಕೆಯನ್ನು ನಾನು ಹೇಗೆ ಮರೆಯಲಿ? ಯಾವ ರೀತಿಯಲ್ಲಿ ಅವಳು ಸುಖವಾಗಿರುವಂತೆ ಮಾಡಲಿ

ಲೇಖಕಿ :

ಶ್ರೀಮತಿ ಸುಲೋಚನ ನಾಗರಾಜ್

ಹೌದಲ್ಲವೇ?.....ಹಿಂದೊಮ್ಮೆ ನಾನು ಮನೆಯ ಅಸಹಾಯಕ ಪರಿಸ್ಥಿತಿಗೆ ಧೃತಿಗೆಟ್ಟು ಕುಳಿತಿದ್ದಾಗ ಆಕೆಯ ದಿಟ್ಟತನದ ಮಾತು, ಧೃಡ ಹೃದಯ ನನ್ನನ್ನು ಎಚ್ಚರಿಸಲಿಲ್ಲವೇ?.........ಇಷ್ಟಕ್ಕೆಲ್ಲಾ ಹೆದರಿ ತಲೆಕೆಡಿಸಿಕೊಂಡು ಕುಳಿತುಕೊಳ್ಳುತ್ತೀಯಲ್ಲಣ್ಣಾ! ಹೆಣ್ಣಾದ ನಾನೇ ಧೈರ್ಯವಾಗಿದ್ದೇನೆ. ನೀನು ಹೇಗಿರಬೇಡ. ಅಮ್ಮನಿಗಂತೂ ಬುದ್ಧಿ ಇಲ್ಲಾಂದ್ರೆ ನಿನಗೂ ಬೇಡವೇ? .....ನಿನ್ನ ವಿದ್ಯಾಭ್ಯಾಸ ಮುಗಿಯುವವರೆಗೂ ನನಗಾಗಿ ಒಂದು ದಿನವೂ ನೀನು ಯೋಚಿಸಕೂಡದು. ಮನೆಯನ್ನು ನಾನು ಹೇಗೋ ತೂಗಿಸಿಕೊಂಡು ಹೋಗುತ್ತೇನೆ, ಅದರ ಬಗ್ಗೆ ನಿನ್ನ ಯೋಚನೆ ಅನವಶ್ಯಕ ನನಗಾಗಿ, ಹೆಣ್ಣಾದ ನನ್ನ ಬಾಳಿಗಾಗಿ ಮನುಷ್ಯತ್ವವಿಲ್ಲ

ದಿರುವವರ ಕಾಲು ಹಿಡಿದು ಬಾಳುವುದನ್ನು ನಾನೆಷ್ಟು ಮಾತ್ರಕ್ಕೂ ಒಪ್ಪಲಾರೆ. ನನ್ನ ಮೇಲ್ಮೆಗಾಗಿ ಸ್ವಾಭಿಮಾನವನ್ನೇ ಬಲಿಗೊಟ್ಟು, ಬಾಳಲು ನಾನು ಸಿದ್ಧಳಿಲ್ಲ. ಅದೂ ಒಂದು ಬಾಳೇನು ? ಮನುಷ್ಯತ್ವಕ್ಕೆ ದೂರವಾದ ಆ ಬಾಳಿಗಿಂತ ಗಂಜಿ ಕುಡಿಯುತ್ತಾ ಬಂದ ಕಷ್ಟ ಸುಖವನ್ನು ಹಂಚಿಕೊಳ್ಳೋಣ. ನನ್ನಲ್ಲಿ ನಿನಗೆ ನಂಬಿಕೆಯಂತೂ ಇದ್ದೇ ಇದೆ. ನನ್ನ ಬಗ್ಗೆ ನೀನು ಸಂಶಯವನ್ನೂ ಇಟ್ಟುಕೊಳ್ಳಬೇಡ. ನಾನೆಂದಿಗೂ ನಿನ್ನ ಮುಖಕ್ಕೆ ಮಸಿ ಹಚ್ಚುವಂತಹ ಕೆಲಸ ಮಾಡಲಾರೆ. ಈಗಿನ ನಿನ್ನ ಏಕಮಾತ್ರ ಗುರಿ ಎಂದರೆ ನಿಷ್ಠೆಯಿಟ್ಟು ವಿದ್ಯಾಭ್ಯಾಸ ಮುಗಿಯುವುದೊಂದೇ, ಅಮ್ಮನ ತಿಳಿವಳಿಕೆ ಸಾಲದ ಮಾತಿಗೆ ನೀನು ನೊಂದುಕೊಳ್ಳಬೇಡ. ನನಗಾಸುಖಕ್ಕಿಂತ ಇಂತಹ ಸ್ವಾಭಿಮಾನವುಳ್ಳ ಆತ್ಮಗೌರವದುಂಬಿದ ಗಂಜಿಯೂಟವೇ ಶ್ರೇಷ್ಠ"–ಎಂತಹ ದಿಟ್ಟತನದ ನುಡಿಗಳವು ?..........

ಬರೀ ಮಾತುಗಳಲ್ಲಷ್ಟೇ ಅಲ್ಲ. ಕೃತಿಯಲ್ಲೂ ಆಕೆ ತೋರಿಸಿದ್ದಾಳೆ. ಸಾಕಷ್ಟು ವಿವೇಚನೆ ಇಲ್ಲದೆ ತಾಯಿ ತನ್ನನ್ನು ಟೀಕಿಸುವುದನ್ನು ನನ್ನ ಕಿವಿಗೆ ಬೀಳದಂತೆ ತಡೆಯಲು ಆಕೆ ಶತ ಪ್ರಯತ್ನ ಮಾಡುತ್ತಾಳೆ. ಆದರೆ ತಾಯಿ ಟೀಕಿಸುವುದು ಪೀಡಿಸುವುದು ನಮ್ಮಿಬ್ಬರ ಹಿತಕ್ಕಾಗಿಯೇ ಎಂಬುದನ್ನು ನಾವು ಮರೆತಿಲ್ಲವಾದರೂ ವ್ಯಕ್ತಿತ್ವವನ್ನೇ ಬಲಿಗೊಟ್ಟು ಬಾಳಲು ನಾವೀರ್ವರೂ ಸಿದ್ಧರಾಗಿಲ್ಲ. ಆಕೆ ನಮ್ಮಿಬ್ಬರ ಧೈರ್ಯದ ಉತ್ಕೃಷ್ಟತೆಯನ್ನು ಅರ್ಥಮಾಡಿಕೊಳ್ಳಲೇ ಇರಳು. ಆಕೆ ತಿಳಿದುಕೊಳ್ಳುವುದೆಂದರೂ ನನ್ನ ಮಕ್ಕಳು ವಿಧೇಯರಲ್ಲವೆಂದೇ ......ಎಂತಹ, ದುರದೃಷ್ಟ; ಇಂತಹ ಸಂದರ್ಭಗಳಲ್ಲಿ ನಮ್ಮೆಲ್ಲಾರಿಗೂ ತಾಯಿಯನ್ನು ಹೇಗೆ ಸಮಾಧಾನಪಡಿಸಬೇಕೆಂಬುದೇ ತಿಳಿಯದಾಗುತ್ತದೆ. ಶಾಂತಿಯಂತೂ ಆ ಮಟ್ಟಿಗೆ, ಆ ಶಾಂತಿಯ ಪ್ರತಿ ಮೂರ್ತಿಯೇ ಆಗುತ್ತಾಳೆ. ಬುದ್ಧಿಯಿಲ್ಲದ ಹೆಂಗಸರಲ್ಲಿ ಮೊದಲ ಸ್ಥಾನ ನಿನಗೇನೆಮ್ಮಾ ಮೀಸಲು. ಕಂಡವರ ಹತ್ತಿರ ಸಾವಿರ ಅನ್ನಿಸಿಕೊಂಡು ಮಾನ ಮರ್ಯಾದೆಗಳನ್ನು ಗಾಳಿಗೆ ತೂರಿ. ಕಾಲು ನೋಯಿಸಿಕೊಂಡು ಅಲೆದಾಡಿ 'ಆ. ಸಹಾಯ' ಪಡೆಯದೆ ಇದ್ದರೆ ಯಾವ ದೇವರು ಅಳುತ್ತಾನಮ್ಮಾ ? ಅಂತಹ ಬಾಳ್ವೆಯಲ್ಲಿ ಗೌರವವಿರುತ್ತದೇನಮ್ಮಾ ? ಅನುಭವಿಸಬೇಕಾದ ನಾವೇ ಧೈರ್ಯದಿಂದಿರುವಾಗ ನಿನಗೇಕಮ್ಮಾ ಯೋಚನೆ ? ನಾವು ಮನುಷ್ಯರು, ಅನ್ನೋದನ್ನು ಮರೆತು ಸ್ವಾಭಿಮಾನಕ್ಕೆ ಬೆಂಕಿ ಇಟ್ಟುಕೊಂಡು ಬಾಳೋದು ಒಂದು ಬಾಳೇನಮ್ಮಾ ! ಖಂಡಿತ ನನ್ನಿಂದ ಇದು ಸಾಧ್ಯವಿಲ್ಲಮ್ಮಾ ! ಇದರಿಂದ ನೀನು ನನ್ನ ಮಗಳು ಉದ್ಧಟಳೆಂದು ತಿಳಿದುಕೊಂಡರೂ ಸರಿ. ಈ ಮಟ್ಟಿಗೆ ನಿನ್ನ ಮಾತಿಗೆ ನಮ್ಮಿಬ್ಬರ ಒಪ್ಪಿಗೆಯಿಲ್ಲ." ನಾನು ದಿಗ್ಭ್ರಮೆಪಡುತ್ತೇನೆ ಅವಳ ಮಾತುಕೇಳಿ ಒಂದು ಕ್ಷಣ ಮತ್ತೊಂದು ಕ್ಷಣ ಇಷ್ಟು ಕಟುವಾಗಿ ಉತ್ತರಿಸಿದಳಲ್ಲಾ ತಾಯಿಗೆ ! ಎಂದು ನನಗೆ ಅಸಮಾಧಾನವಾಗುತ್ತದೆ......ಆದರೇನು ? ಒಳಗೆ ನನ್ನ ಮನಸ್ಸು ಹೇಳುತ್ತದೆ ಕೂಗಿ ಕೂಗಿ......'ಆಕೆಯ ಧೃಡತೆ ನನಗಿಲ್ಲ' ಎಂದು.

ನಿಜ ! ನಾನೇನು ಮಾಡಲಿ ? ಹಿಂದೆ ತಂದೆಗೆ ಪಾರ್ಶವಾಯು ಬಡಿದು ಅನಿರೀಕ್ಷಿತವಾಗಿ ಸಾಯುವ ಅಂತಿಮ ಘಳಿಗೆಯಲ್ಲಿ, ನನ್ನನ್ನು ಕರೆದು ಎಚ್ಚರಿಸಿದ ಬಗೆ ಇಂದಿಗೂ ನನ್ನ ಕಿವಿಯಲ್ಲಿ ಮೊರೆಯುತ್ತಿದೆ. 'ರಾಮಣ್ಣಾ ಅನಿರೀಕ್ಷಿತವಾಗಿ ನಿನ್ನ ಮೇಲೆ ಬಿದ್ದ ಹೊಣೆಗಾರಿಕೆಯನ್ನು ಕಂಡು ನನ್ನ ಕರುಳು ಕಿವಿಚುತ್ತದೆ. ಚೆನ್ನಾಗಿದ್ದಾಗ, ತಂದೆಯಾಗಿ ನಾನು ನನ್ನ ಕರ್ತವ್ಯವನ್ನು ಎಷ್ಟರಮಟ್ಟಿಗೆ ಪಾಲಿಸಿದೆನೋ ನನಗೆ ತಿಳಿಯದು. ಆದರೆ ಇಷ್ಟು ಬೇಗ ನಿಮ್ಮನೆಲ್ಲ ಒಂದೇ ಬಾರಿಗೆ ಬಿಟ್ಟು ಹೋಗುವೆನೆಂದೆಣಿಸಿರಲಿಲ್ಲ. ಇಷ್ಟು ಮಾತ್ರ. ನಿಜ ನೀನು ಮತ್ತು ಶಾಂತಿ, ಬಾಳುವುದನ್ನು ನೋಡುವ ಆಸೆಯಿತ್ತು. ಆದರೆ ವಿಧಿ !......ತಾಯಿಯ ಭಾರ, ತಂಗಿಯ ಹೊಣೆ ಎರಡೂ ನಿನ್ನನ್ನು ಕೂಡಿದ್ದು. ಹಾಗೆಂದು ನೀನು ಸುಖದಿಂದ ವಂಚಿತನಾಗದಿರು ನಿನ್ನ ಮುಂದಿನ ಭವಿಷ್ಯ ಏನಾಗುವುದೋ ನಾನರಿಯೆ. ಆದರೆ ನಿನ್ನ ಹೆತ್ತತಾಯಿ ಬೆನ್ನಿಗೆ ಬಿದ್ದತಂಗಿ, ಅವರಿಬ್ಬರ ಬಾಳುವೆಯಲ್ಲಿ ನಿನ್ನಾದೂ ಪಾಲಿದೆಯೆಂದು ನೆನಪಿರಲಿ.

ಹೌದು ತಂದೆಯಿದ್ದಷ್ಟು ಕಾಲ ಒಂದೇ ಒಂದು ದಿನ ನಾನು ಏನನ್ನೂ, ಯಾರನ್ನೂ ಕುರಿತು ಚಿಂತಿಸಿದವನಲ್ಲ ಆದರೆ ನಾನು ತಂದೆಯ ಬಗ್ಗೆ ತಿಳಿದಿದ್ದುದಿಷ್ಟು. ತಂದೆ

...ಂಬಾ ಮುಂಗೋಪಿ. ತಾನು ಸಂಸಾರಸ್ಥ ಮಕ್ಕ ...ಂದಿಗೆ. ತಾನು ಅಗ್ನಿ ಸಾಕ್ಷಾತ್ತಾಗಿ ನೆರೆದವ... ದುರು ತಾಳಿ ಬಿಗಿದ ಜೀವವೊಂದಿಗೆ ಎಂಬುದರ ಹೊಣೆ, ತನಿಗಿತ್ತೋ ಇಲ್ಲವೋ ಎಂಬ ಸಂದೇಹ ನನ್ನನ್ನ ...ನೇಕ ಬಾರಿ ಕಾಡಿಸುತ್ತಿತ್ತು ಆಗ. ಆತನ ವರ್ತನೆ ...ಿಂದ. ಆದರೆ ಎಷ್ಟಾದರು ಆತ ನನ್ನ ತಂದೆ ಆತನ ...ತ್ತಮಾಂಸಗಳನ್ನು ಹಂಚಿಕೊಂಡು ಬಂದ ಜೀವಿ ನಾನು ...ನ್ನನ್ನೇಕೆ ಆತ ಸೃಷ್ಟಿ ಬೇಕಾಗಿತ್ತು ! ನಾನೇನು ಆತ ...ನ್ನು ನಿನ್ನ ರಕ್ತಮಾಂಸ ಹಂಚಿಕೊಟ್ಟು ನನ್ನನ್ನು ಧರೆ ...ಳಿಸು ಎಂದು ಕೇಳಿದ್ದೇನೆ ?—ಎನ್ನುವ ಉದ್ಧಟತನ ...ನಗಿಲ್ಲ. ಆದರೆ ನಾನು ಬಲ್ಲೆ. ನನಗೆ ಚೆನ್ನಾಗಿ ನೆನ ...ದೆ. ಆತನೊಂದಿಗೆ ತಾಯಿ ಹೊಂದಿಕೊಂಡು ಬಾಳು ...ದ್ದ ರೀತಿ ! ಹೃದಯಕ್ಕೆ ಮಾರ್ಮಿಕವಾಗಿ ತಗಲು ...ದ್ದ ಏಟುಗಳು ! ದನವೆಂದು ತಿಳಿದು ಬೀಳುತ್ತಿದ್ದ ...ಟುಗಳು !! ಸಹಿಸುತ್ತಿದ್ದ ಉಪವಾಸಗಳು ಎಲ್ಲವೂ..... ...ಲ್ಲವನ್ನೂ ಗುಟ್ಟಾಗಿ ನುಂಗಿಕೊಂಡು ಈ ಸಮಾಜ ...ದುರು ತಾನೂ ಒಬ್ಬ ಸುಖಜೀವಿ (?) ಎಂಬುದನ್ನು ...ೋರಿಸಿಕೊಳ್ಳುತ್ತಿದ್ದುದನ್ನು ನಿಂತ ಭೂಮಿಯೇ ಎದ್ದು ...ಡುತ್ತಿರುವ ಆ ಹಿಂಸೆ, ಬಡತನಗಳ ನಡುವೆಯೂ ...ಕೆಯು ತದೇಕ ಧ್ಯಾನದಿಂದ ಚಿಂತಿಸುತ್ತಿದ್ದುದು ತನ್ನ ...ಮಕ್ಕಳ ಹಿತ ಚಿಂತನೆಯನ್ನು ಎಂತಲೇ ಆಕೆಯ ಬರಡು ...ರೀರ. ಬಂಗಾರದಂತಹ ಹೃದಯ ವಿಶ್ವಾಸ ದೂರದಾಸೆ ...ಳನ್ನು ಹೊತ್ತು ನಿಂತಿತ್ತೇನೋ !......ಇಷ್ಟಾದರೂ ...ಯಾರಿಗಾದರೂ ನನ್ನ ಬಗ್ಗೆ ಕಳವಳವೇ ? ...ಇಲ್ಲ, ...ನಗೆ ಜನ್ಮಕೊಟ್ಟ, ನಾನು ವೈಚಿತ್ರ ತುಂಬಿರುವ ...ನ್ನಂತ ಸಹಸ್ರಾರು ಮಂದಿ ಅಸಹಾಯಕರಿರುವ ಈ ...ಪ್ರಪಂಚವನ್ನು ಕಾಣಲು ಅರ್ಥಕಾರಣನಾದ ತಂದೆಗೆ ...ನಾನು ಋಣಿ ಅಷ್ಟೆ. ಕೃತಘ್ನನಲ್ಲ ಏಕೆಂದರೆ ಕಾಲ ...ಗೇ ಇರುವುದೇನು ! ರಾತ್ರಿ ಹರಿದು ಮುಂಜಾನೆ ಬೆಳ ...ಯುವುದಿಲ್ಲವೇನು ?—ಕಷ್ಟ ಕಾರ್ಪಣ್ಯಗಳನ್ನು ಅನುಭವಿ ...ಲೇ ಶಾಪ ಹೊತ್ತು ಬಂದಂತೆ ಇರುವ ತಾಯಿಯನ್ನು ...ನಾನು ಸುಖದಿಂದಿರಿಸಲು ! ದುರ್ದೈವಿ ನನ್ನ ತಂಗಿಯ ...ಹೊಣೆ ಹೊರಲಾರದ ಹೇಡಿ ಸ್ವಾರ್ಥಿ ನಾನೇನು ? ...ರಲಿ ಇದೆಲ್ಲಾ ಇನ್ನೂ ಮುಂದಿನದು.

ಹಿಡೇ ಹಿಡೇ ತಾಯಿ ಎಚ್ಚರಿಸುತ್ತಿದ್ದರೂ ನಮ್ಮ ಗಳ ಸಲುವಾಗಿಯೇ ಎಂದು ನನಗೆ ಚೆನ್ನಾಗಿ ಗೊತ್ತು. ಆದರೂ ಆಕೆಯ ಅಭಿಪ್ರಾಯ ಮಾತ್ರ ನನ್ನ ... ಗೊಳ್ಳದುದು. ನಮ್ಮ ಚಿಕ್ಕಪ್ಪ ಬಲು ಶ್ರೀಮಂತರು. ಆ ಶ್ರೀಮಂತಿಕೆ ಬಂದ ಮಾರ್ಗ ಯಾವುದೆಂದು ಬಹು ಮಟ್ಟಿಗೆ ಆ ಊರಿನವರಿಗೆಲ್ಲಾ ಗೊತ್ತು. ಆ ಶ್ರೀಮಂತಿ ಕೆಯನ್ನು ಭೋಗಿಸಲು ಒಂದೇ ಒಂದು ನರಹುಳುವೂ ಇಲ್ಲದ ಆತನ ಭವ್ಯ ಭವನ, ದುರಹಂಕಾರದ ತಾಣವೇ ನಿಜ. ಕೊಳೆತು ಹುಳಿತುಹೋಗುವಷ್ಟು ಆಸ್ತಿ ಪಾಸ್ತಿ ಗಳಿದ್ದರೂ 'ದೇಹಿ' ಎಂದವನಿಗೆ ಕೈಯೆತ್ತಿ ಒಂದು ಚಿಕ್ಕಾಸು ಕೊಡಬೇಕೆಂದರೆ ಆತನಿಗೆ ಅಂದು ಹೊಟ್ಟೆ ಶೂಲೆಯೇ ಬರುತ್ತದೆ. ಆದರೆ ತಾಯಿಯ ನಂಬಿಕೆ, ತನ್ನ ಮೈದುನ ತನ್ನಣ್ಣನ ಮಕ್ಕಳಿಗೆ 'ಇಲ್ಲ'ವೆನ್ನಲಾರ ನೆಂದೇ. ಎಂತಲೇ ಆಕೆಯ ಆಗ್ರಹದಂತೆ ಹತ್ತಾರು ಬಾರಿ ಆತನ ಮನೆಗೆ ಅಲೆದದ್ದಾಯಿತು. ಆತ ಹೇಳಿದ, 'ಆಗಬಾ ಈಗಬಾ'ಗಳನ್ನೆಲ್ಲಾ ಮುಗಿಸಿದ್ದಾಯಿತು. ಹತ್ತಾರು ಬಾರಿ ಅಲೆದು ಆಳುತ್ತ ದೇಹವನ್ನು ಗೇಣುದ್ದ ಮಾಡಿಕೊಂಡು ತಿರುಗಿದರ ಮಹತ್ತಾದ ಪ್ರತಿಫಲವೇನ್ನು ಗೊತ್ತೇ ! ಭವ್ಯವೆನ್ನುವಿರೇನು ? ಉಹೂ....ಇಲ್ಲ. ತಿಂಗಳ ಕಾಲೇಜು ಫೀಸಿಗೂ ಸಾಲದ ಐದು ರೂಪಾಯಿ! ನನ್ನ ತಾಳ್ಮೆಗೂ ಒಂದು ಮಿತಿ ಬೇಡವೇ ? ದಾನಾರ್ಥ ವಾಗಿ ಕೈಯ್ಯೊಡ್ಡಿದ ನನಗೆ ಆತನ ಮೇಲೆ ಸಿಟ್ಟಾಗಲು ಹಕ್ಕಿಲ್ಲವೆಂದು ಬಲ್ಲೆ. ಆದರೆ ನನ್ನ ಹೃದಯ ಒಪ್ಪಲಿಲ್ಲ. "ಕ್ಷಮಿಸಿ ನನಗಿದರ ಆಗತ್ಯವಿಲ್ಲ" ಎಂದು ನಿರ್ವಿಕಾರವಾಗಿ ವಾಪಸ್ ಒಗೆದು ಬಂದೆ. ಆದರೆ ಸುದ್ದಿ ತಿಳಿದ, ತಾಯಿಯ ಆಗಿನ ನುಡಿ, ಆಕೆ ಒಂಬತ್ತು ತಿಂಗಳು ನನ್ನನ್ನೂ ತನ್ನ ಬಸಿರಲ್ಲಿ ಕಾಪಿಟ್ಟು, ತನ್ನ ರಕ್ತ ಮಾಂಸದ ಪಾಲು ಕೊಟ್ಟು , ಹೆತ್ತವಳೆಂಬುದನ್ನೂ ಮರೆಯುವಂತೆ ಮಾಡಿತು. ಆಕೆ ಹೇಳಿದ್ದಾದರೂ ಎಂತಹುದು ?" ನಿನ್ನ ಚಿಕ್ಕಪ್ಪನಿಗೆ ಆಗ ಯಾವ ಸಂದರ್ಭವೋ ಏನೋ..... ಮತ್ತೊಮ್ಮೆ ಯತ್ನಿಸು. ಎಷ್ಟಾದರೂ ಏನೆಂದರೂ ಆತ ನಿನ್ನ ಚಿಕ್ಕಪ್ಪನೇ ಅಲ್ಲವೇ ?" ಹೇಳಿ ನೀವೇ ಹೇಳಿ ನಾನೂ ಮನುಷ್ಯನಲ್ಲವೇ ? ...ನನಗೂ ಸ್ವಾಭಿಮಾನ ಬೇಡವೇ ? ನನ್ನ ತಾಳ್ಮೆಗೂ ಒಂದು ಪರಿಮಿತಿಯಿಲ್ಲವೇ ? ......ನನ್ನದು ಹಾಗಿರಲಿ. ತಂಗಿ ಶಾಂತಿಯಂತೂ ಆಗ

ಉಗ್ರ ಮೂರ್ತಿಯೇ ಸರಿ ಕಡ್ಡಿ ತುಂಡು ಮಾಡಿದಂತೆ ನುಡಿವ ಆಕೆಯ ವಾಗ್ಬಾಣಗಳನ್ನು ನಾನೆಂದೂ ಮರೆಯುವಂತಿಲ್ಲ. "ಅಮ್ಮಾ. ಉಣ್ಣಲು ಉಡಲು ಬಡತನ ಬಂದರೆ ಮಾನ ಮರ್ಯಾದೆಗೂ ದರಿದ್ರ ಬರಬೇಕೇನು ನನ್ನ ಮದುವೆ, ಅಣ್ಣನ ಓದು, ನಡೆಯದಿದ್ದರೂ ಚಿಂತೆಯಿಲ್ಲ. ನಾನು ನಿನ ಮಗನೆಂದುಕೋ ನಿನಗಿರುವ ಇಬ್ಬರು ಮಕ್ಕಳೂ ಗಂಡುಗಳೇ ಎಂದುಕೋ ಕೈಲಾಗದಿದ್ದರೆ, ಯಾವ ಉಪಾಯವೂ ಕಾಣದೆ ಹೋದರೆ, ಕೊನೇ ಗಳಿಗೆಯವರಿವಿಗೂ ಹೀಗೆಯೇ ಇದ್ದು ಪ್ರಾಣ ಬಿಡೋಣ. ಅಷ್ಟು ಹೊರತು ಚಿಕ್ಕಪ್ಪನ, ಮನುಷ್ಯತ್ವದ ಗಂಧವೇ ಇಲ್ಲದವನ ಚಿಕ್ಕಾಸೂ......ಆತನ ತೃಣಮಾತ್ರದ ಸಹಾನುಭೂತಿಯೂ ನಮಗೆ ಬೇಡ. ಬಡತನವೀ ನಮ್ಮದಾಗಲಿ ಚಿಂತೆಯಿಲ್ಲ. ಇದರಲ್ಲಾವ ಅವಮಾನ ಅಂಜಿಕೆ, ದಾಕ್ಷಿಣ್ಯವೂ ಇರದು. ಬಾಯಲ್ಲಿ ಬೆಣ್ಣೆ ಯಂತಹ ಮಾತನಾಡುವವರೆಲ್ಲರೂ ಚಿಕ್ಕಾಸು ಕೊಡುವಾಗ ಕಣ್ಣೀರಿಳಿಸುತ್ತಾರೆ. ಇದೇ ಕೊನೆ. ಇನೆಂದಾದರೂ ಈ ರೀತಿಯ ಸಹಾಯ ಯೋಚಿಸಲು ಅಣ್ಣನನ್ನು ಪೀಡಿಸಿದ್ದೇ ಆದರೆ ನನ್ನ ನಿನ್ನ ಋಣಾನುಬಂಧ ಮುಗಿಯಿತೆಂದು ತಿಳಿ. ನಾನೆಲ್ಲಾದರೂ ಕೆರೆಭಾವಿ ನೋಡಿಕೊಳ್ಳುತ್ತೇನೆ." ಶಾಂತಿಯನ್ನು ಅಷ್ಟಕ್ಕೆ ನಾನು ತಡೆಯದಿದ್ದಿದ್ದರೆ ಮತ್ತೇನು ಅನಾಹುತವಾಗುತ್ತಿತ್ತೋ? ಅಷ್ಟಕ್ಕೇ ತಾಯಿ ಹಣೆ ಹಣೆ ಬಡಿದುಕೊಳ್ಳಹತ್ತಿದರು, "ಮಗನಂತೂ ಕೈ ಬಿಟ್ಟ ಮಗಳೂ ಈ ರೀತಿ ನನಗೆದುರಾಗುವಳೆಂದು ನಾನೆಣಿಸಿರಲಿಲ್ಲ. ಇನ್ನೂ ಈ ಹಾಳು ಕಣ್ಣಿನಿಂದ ಏನೇನು ನೋಡಬೇಕಾಗಿದೆಯೋ?........"

ನನಗಂತೂ ದಿಕ್ಕೇ ತೋಚುತ್ತಿಲ್ಲ. ಯಾಕೆ ಇಷ್ಟು ವೇದನೆ? ಬಡತನ ಮನುಷ್ಯನನ್ನು ಬಡಿದು ಕೊಲ್ಲಬೇಕೇ? ಎಂತೆಂತಹ ಹೀನ ಕಾರ್ಯಗಳನ್ನು ಮಾಡಿಸುವುದಲ್ಲ! ತಾಯಿಗಾದರೂ ಏಕಿಷ್ಟು ದೂರಾಲೋಚನೆಯ ಅಭಾವ? ಗಂಡನನ್ನು ಕಟ್ಟಿಕೊಂಡಂದಿನಿಂದಲೂ ಪಟ್ಟಿರುವ ಸುಖವೆಷ್ಟೆಂಬುದನ್ನು ನಾನು ಬಲ್ಲೆನಲ್ಲ! ಅವಳ ಒಂದೇ ಒಂದು 'ಜೀವದ ಬಯಕೆ', ಅವಳ ಕಣ್ಣುಗಳ ಆಸೆ?......ನಮ್ಮಿಬ್ಬರ ಸುಖಜೀವನ, ನೆಮ್ಮದಿಯ ಬಾಳೆಂಬುದನ್ನು ನಾನು ಅರಿತಿರುವೆ. ಆದರೆ ನನ್ನದೊಂದು ಪ್ರಶ್ನೆ. ಮಕ್ಕಳ ಮೋಹದಲ್ಲಿ ಅವ[illegible] ಸರಿಯಾದ ಮಾರ್ಗದಲ್ಲಿ ನಡೆಯುವ ರೀತಿ ಯಾವು[illegible] ಎಂಬ ಪರಾಪರ ವಿವೇಚನೆಯನ್ನೂ ಕಳೆದುಕೊಳ್ಳಬೇಕ[illegible] ....ಅಷ್ಟನ್ನು ವಿವೇಚಿಸಲಾರದ ಅವಿವೇಕಿಯೆ ನ[illegible] ತಾಯಿ!.....ಅಲ್ಲ. ಆದರೂ ಅದು ಅವಳ ದುರಾದೃಷ[illegible] ಹಿಂದಿನಿಂದ ಕಾರ್ಪಣ್ಯವನ್ನೇ ಅನುಭವಿಸಿ ಬಂದವರ[illegible] ನಾವು ಆಕೆಯ ಮನಸ್ಸು ಒಮ್ಮೊಮ್ಮೆ ಕಡಿವಾಣವಿ[illegible] ಕುದುರೆಯಂತೆ ಓಡುತ್ತದೆ. ಬಾಯಿ ಹತೋಟಿ ಮಿ[illegible] ತ್ತದೆ. ರಕ್ತಬಲ ಕಡಿಮೆಯಾಗುತ್ತಿರುವ ಕಾರಣ ಚ[illegible] ಚಂಚಲವಾಗುತ್ತದೆ. ಒಮ್ಮೆ ಇದ್ದ ಮನ ಮತ್ತೊಮ[illegible] ಇರದು. ಆಕೆಯ ಈ ಸ್ಥಿತಿಯನ್ನು ಸಹಿಸಿಕೊಳ್ಳ[illegible] ಅಪಾರ ತಾಳ್ಮೆ ನಮ್ಮದಾಗಬೇಕು ಅಷ್ಟೆ. ಆದರೆ [illegible] ಕಾರ್ಯದಲ್ಲಿ ನಾನೆಷ್ಟರ ಮಟ್ಟಿಗೆ ಸಫಲನಾಗುವೆನೆ[illegible] ಅರಿಯೆ. ಏಕೆಂದರೆ ನಾನು ಮಾನವ! ರಾಗದ್ವೆ[illegible] ಮುಂತಾದವುಗಳ ತಾಣ ನನ್ನ ಮನೆ! ಆದರೆ ಆ [illegible] ನಿಸ್ಪೃಹ ಪ್ರಯತ್ನವನ್ನು ಮಾಡುವ ಮನಸ್ಸಿಗೇ[illegible] ಕೊರತೆ ಇಲ್ಲ.

ಇಂತೆಯೇ ಸಾಗಿದೆ ನನ್ನ ಜೀವನ. ಹೆ[illegible] ವಿದ್ಯಾಭ್ಯಾಸಕ್ಕಾಗಿ ಪರವೂರಿಗೆ ಬಂದಂದಿನಿಂದಲೂ [illegible] ಮನದ ಅವ್ಯವಸ್ಥೆ ಅಧಿಕವೇ ಆಗಿದೆಯೆನ್ನಬೇ[illegible] ಓದುವುದಕ್ಕೆ ಸಾಕಷ್ಟು ಸುವ್ಯವಸ್ಥಿತ ಮನಸಿಲ್ಲ. [illegible] ದವನ ಮುಂದೆ ಧರ್ಮೋಪದೇಶದಂತೆ ಸಾಗಿದೆ [illegible] ಓದು. ಆದರೆ ಹಾಗೆಂದು ಇದನ್ನು ಕೈಬಿಡುವಂತೆಯ[illegible] ಇಲ್ಲ. ನನಗಾಯಿಂದಿಲ್ಲದಿದ್ದರೂ ದುರ್ದೈವಿ ಶಾಂತಿಗ[illegible] ಯಾದರೂ ಓದನ್ನು ಮುಗಿಸಿ ಹಿಡಿದು, ಶಾಂತಿ[illegible] ಮುಂದಿನ ಜೀವನವನ್ನು ಹಸನು ಮಾಡಬೇಕು. [illegible] ನನ್ನ ಕರ್ತವ್ಯವೆಂದೂ ನಾನು ಹೇಳುತ್ತಿದ್ದೇನೆ. ಮನೆ[illegible] ಅಶಾಂತ ವಾತಾವರಣ, ತಾಯಿಯ ಮೋಹಾಂಧ[illegible] ಮೌಢ್ಯಗಳ ನಡುವೆಯೂ ನನ್ನನ್ನು ಪ್ರೋತ್ಸಾಹ[illegible] ಹುರಿದುಂಬಿಸಿ, ನನ್ನ ಆಳ್ವಿದೆಯನ್ನು ಧೃಡಮಾ[illegible] ನಾನೂ ಮಾನವನೆಂಬುದನ್ನು, ನನ್ನ ಮನುಷ್ಯತ್ವ[illegible] ಗುಟ್ಟನ್ನು ಅರಿವಾಗಿಸಿಕೊಟ್ಟು ಸ್ವಾಭಿಮಾನವೇ ನ[illegible] ವೈಕವಚವಾಗರುವಂತೆ ದಾರಿತೋರಿಸಿಕೊಟ್ಟ ಆ ನ[illegible] ತಂಗಿ ಶಾಂತಿಗೆ ಕೃತಜ್ಞತೆಯನ್ನು ಹೇಗೆ ಅರ್ಪಿಸಿದ[illegible] ಅಲ್ಪವೇ!...........

ವಿನೋದಾತ್ಮಕವಾದ ಒಂದು ಕಾಲ್ಪನಿಕ-ಭೇಟಿ....

ವಿಜ್ಞಾನಿ, ಕವಿ-ಸಾಹಿತಿಯನ್ನು ಸಂಧಿಸಿದಾಗ!

ಲೇಖಕರು :

ನಾ. ಮ. ಗಂ.

ಮನೆಯ ಸಂಸಾರ ತಾಪತ್ರಯಗಳಿಂದ ದೂರ ಹೊರಟು ಹೋಗಿ ಕೆಲವು ಕಾಲ ಏಕಾಂತವಾಗಿದ್ದು ಪ್ರಕೃತಿ ಸೌಂದರ್ಯವನ್ನು ಸವಿದು ಬರಬೇಕೆಂಬ ಆಸೆಯಿಂದ ಹೊರ-ಹೊರಟ-ಕವಿ-ಸಾಹಿತ ಸಮುದ್ರ ತೀರದಲ್ಲಿಯೇ ಸಾಗುತ್ತಾ, ಸಾಗುತ್ತಾ ಊರಿನಿಂದ ತುಂಬ ದೂರ ಬಂದ. ಜನ ಜಂಗುಳಿಯಿಂದ ದೂರಾಗಿ, ಸಮುದ್ರದ ದಂಡೆಯಲ್ಲಿ ಕುಳಿತ. ಇನ್ನೇನೂ ಉದಯವಾಗಲಿರುವ ಪೂರ್ಣಚಂದ್ರನ ಸೊಬಗನ್ನು ಕಲ್ಪಿಸಿಕೊಳ್ಳುತ್ತಾ ಹಿಂದಿನ ಕವಿಗಳ ಚಂದ್ರೋದಯ ವರ್ಣನೆಗಳನ್ನು ಸ್ಮರಿಸಿಕೊಳ್ಳುತ್ತಾ ಕುಳಿತ ಆ ಸಾಹಿತಿ ಕಲ್ಪನಾ ಲೋಕದಲ್ಲಿ ವಿಹರಿಸುತ್ತಾ, ಕಳೆದ ಕಾಲವನ್ನು ಗಮನಿಸಲಿಲ್ಲ; ಪಕ್ಕದಲ್ಲಿದ್ದ ಕಾಫಿ-ಕಡಲೆ ಪುರಿಯ ಚೀಲವನ್ನು ಗಮನಿಸಲಿಲ್ಲ. ಕವಿ-ಸಾಹಿತಿ ಆ ಆನಂದದಲ್ಲಿ ಮೈಮರೆತಿದ್ದಾಗ, ಆ ನಿರ್ಜನ ಪ್ರದೇಶದಲ್ಲೂ ಇದ್ದಕ್ಕಿದ್ದಂತೆ ಭಾರಿ ಆಸ್ಫೋಟವಾಯಿತು. ಸುತ್ತ ನೋಡಿದ. ದೂರದಲ್ಲಿ ಸಮುದ್ರದಲೆಗಳ ನಡುವೆ ಏನೋ ಉರಿಕಾಣಿಸಿತು. ಸ್ವಲ್ಪ ಹೊತ್ತಿನಲ್ಲಿ ಒಬ್ಬ ದಡದ ಕಡೆಗೆ ಈಜುತ್ತಾ ಬಂದ. ನೋಟಕ್ಕೆ ಅವನೊಬ್ಬ ವಿಜ್ಞಾನಿ-ಗಗನ ಸಂಚಾರಿ ಎನ್ನುವುದು ಗೋಚರವಾಗಿತ್ತು. ವಿಜ್ಞಾನಿ ಕವಿಯ ಪಕ್ಕದಲ್ಲಿ ಬಂದು ಕುಳಿತುಕೊಂಡನು.

ಸಹೃದಯಿ ಕವಿ ಆದರದಿಂದ ಸತ್ಕರಿಸುತ್ತಾ ಹೇಳಿದ. 'ಬನ್ನಿ, ಕುಳಿತುಕೊಳ್ಳಿ ಬಹಳ ದಣಿದಹಾಗಿದೆ' ಪಕ್ಕದಲ್ಲಿದ್ದ ಚೀಲದಿಂದ ಕಡಲೆಪುರಿಯ ಪಟ್ಟಣವನ್ನು ಬಿಚ್ಚಿಟ್ಟು 'ತೆಗೆದುಕೊಳ್ಳಿ' ಎಂದ. ಥರ್ಮಾಸ್‌ಫ್ಲಾಸ್ಕಿನಲ್ಲಿ ತಂದಿದ್ದ ಬಿಸಿ-ಬಿಸಿ ಕಾಫಿಯಲ್ಲಿ ಆತನಿಗೂ ಸ್ವಲ್ಪ ಕೊಟ್ಟ. ಮಾತು ಬೆಳೆಯಿತು.

ವಿಜ್ಞಾನಿ – ನೀವು ತೋರಿಸಿದ ಈ ಕರುಣೆಗೆ ನಾನು ಋಣಿ. ಇಲ್ಲಿ ನಾನು ಇಷ್ಟನ್ನೂ, ನಿರೀಕ್ಷಿಸಿರಲಿಲ್ಲ.

ಕವಿ – ಮನುಷ್ಯನಿಗೆ ಮನುಷ್ಯ ಸಹಾಯ ಮಾಡದೆ ಇನ್ನಾರು ಮಾಡಿಯಾರು? ಎಷ್ಟೋ ಪ್ರಯಾಣಗಳಲ್ಲಿ ನಾನೂ ಇತರರ ಕೃಪೆಗೆ ಪಾತ್ರನಾಗಿದ್ದೇನೆ.

ವಿಜ್ಞಾನಿ – ನೀವು ಈ ಸಮಯದಲ್ಲಿ, ಇಲ್ಲಿ, ಹೀಗೆ ಇರುವುದನ್ನು ಕಂಡು ಆಶ್ಚರ್ಯವಾಗಿದೆ.

ಕವಿ – ನಾವು ಇಲ್ಲಿಗೆ ಬಂದುದೂ ಅನಿರೀಕ್ಷಿತವೇ ಅದು ಸರಿ, ನೀವು ಎಲ್ಲಿಂದ ಬರುತ್ತಿದ್ದೀರಿ. ಇದ್ದಕ್ಕಿದ್ದಂತೆ ಸಮುದ್ರ ಮಧ್ಯೆ ಎದ್ದು ಬಂದಿರಿ.

ವಿಜ್ಞಾನಿ – ನಾನು ಚಂದ್ರಲೋಕದಿಂದ ಬರುತ್ತಿದ್ದೇನೆ. ಅಲ್ಲಿನ ವಿಚಾರಗಳನ್ನು ತಿಳಿದುಕೊಂಡು.

ಕವಿ – ಆ ಪ್ರದೇಶವಂತೂ ತುಂಬಾ ಮನೋಜ್ಞ

ವಾದದ್ದು. ನಾನೂ ಅಲ್ಲೆಲ್ಲಾ ವಿಹಾರ ನಡೆಸಿ ಬಂದೆ. ನಿಮ್ಮ ಅಭಿಪ್ರಾಯ ಏನು?

ವಿಜ್ಞಾನಿ – ನಾನು ನಿಮ್ಮನ್ನು ಸಂಧಿಸಿದುದು ಬಹಳ ಒಳ್ಳೆಯದಾಯಿತು. ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಎಂಥ ಆಕಸ್ಮಿಕ ಇದು !

ಕವಿ – ಕಾಲದ ಆಕಸ್ಮಿಕಗಳಲ್ಲಿ ಒಂದೊಂದು ಸಲ ಲೆಕ್ಕಾಚಾರಕ್ಕಿಂತ ಸೊಗಸಿನ ಹೊಂದಾಣಿಕೆಗಳಾಗುತ್ತವೆ.

ವಿಜ್ಞಾನಿ – ಹಾಗೆ ತಾನೆ ವಿಜ್ಞಾನ ಬೆಳೆದಿರುವುದು. ಆದರೂ ಮನುಷ್ಯ ವೈಜ್ಞಾನಿಕ ಜೀವನವನ್ನು ಬಾಳಬೇಕು ; ಶಿಸ್ತಿನ ಸಿಪಾಯಿಯಾಗಬೇಕು

ಕವಿ – ಹಾಗೆ ಬಾಳುವುದಾದರೆ ಮನುಷ್ಯ ಒಂದು ಯಂತ್ರವೇನು ?

ವಿಜ್ಞಾನಿ – ಅಲ್ಲವೆ ಮತ್ತೆ ಮಾನವ ಒಂದು ಅತ್ಯಂತ ಸಂಕ್ಲಿಷ್ಟ ಯಂತ್ರ.

ಕವಿ – ನಿಮ್ಮ ದೃಷ್ಟಿಯಲ್ಲಿ ಹಾಗಿರಬಹುದು ಆದರೆ ನನ್ನ ದೃಷ್ಟಿಯಲ್ಲಿ ಹಾಗಲ್ಲ.

ವಿಜ್ಞಾನಿ – ದೃಷ್ಟಿ ಭೇದ ಒಪ್ಪತಕ್ಕದ್ದೇ ! ಅದರಿಂದ ಎಷ್ಟೋ ಲಾಭ ಇದೆ. ಈಗ ನೋಡಿ ನೀವೂ ಚಂದ್ರದರ್ಶನ ಮಾಡಿ ಬಂದಿದ್ದೀರಿ ನಾನೂ ಮಾಡಿ ಬಂದಿದ್ದೇನೆ. ಇಬ್ಬರೂ ಒಟ್ಟಾಗಿ ವಿಚಾರ ವಿಮರ್ಶೆ ಮಾಡಿದರೆ ಜ್ಞಾನ ವೃದ್ಧಿಯಾಗುತ್ತದೆ

ಕವಿ – ಹೌದು, ಸಹೃದಯ ಟೀಕೆ-ವಿಮರ್ಶೆಗಳು ನಿಜವಾದ ಅರಿವಿಗೆ ಸಾಧನ.

ವಿಜ್ಞಾನಿ – ನೀವು ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಹೇಳಿ, ದಾರಿ ತೋರಿಸಬೇಕು.

ಕವಿ – ನನ್ನ ಬುದ್ಧಿಶಕ್ತಿಗೆ ತೋಚಿದಂತೆ, ಹೇಳುತ್ತೇನೆ. ಅವುಗಳನ್ನು ಸಮಯೋಚಿತವಾಗಿ ತಿಳಿಯಬೇಕು. ನನ್ನ ಮಾತುಗಳೆಲ್ಲ ಸತ್ಯ ಎಂದು ನೀವು ನಂಬ ಬೇಕಾಗಿಲ್ಲ.

ವಿಜ್ಞಾನಿ – ಒಬ್ಬೊಬ್ಬರ ಅನುಭವ ಒಂದೊಂದು ರೀತಿ ಇರಲಿ. ನಿಮ್ಮ ಚಂದ್ರಲೋಕ-ಪ್ರವಾಸ ಆನಂದಪ್ರದವಾಗಿತ್ತೆ ?

ಕವಿ – ನಿಜಕ್ಕೂ.

ವಿಜ್ಞಾನಿ – ನಿಮಗೆ ಈ ವಿಚಾರ ಕೈಗೊಂಡಾಗ, ಯಾವ ಭಯವೂ ತೋರಲಿಲ್ಲವೆ ?

ಕವಿ – ನನ್ನ ಗುರಿಯೇ ಅದಾಗಿತ್ತು. ಒಬ್ಬರ ಬಲವಂತಕ್ಕೆ ನಾನು ಕಾರ್ಯಶೀಲನಾಗುವುದಿಲ್ಲ. ನಾನು ಸತ್ತರೂ ಅಲ್ಲಿಗೇ ಹೋಗುತ್ತೇನೆಂಬ ದೃಢ ನಿಶ್ಚಯ ನನಗೆ. ಇನ್ನು ಭಯವೇಕೆ ? ನಿಮಗೆ ಭಯವಾಯ್ತೇನು ?

ವಿಜ್ಞಾನಿ – ಪ್ರಯಾಣ ಪ್ರಾರಂಭವಾದ ಕೆಲವು ಗಂಟೆಗಳ ಮೇಲೆ, 'ರಾಕೆಟ್' ವಿಮಾನದ ವೇಗ ಮಿತಿಯನ್ನು ತಲುಪಿದಾಗ ಸ್ವಲ್ಪ ಬುದ್ಧಿ ಭ್ರಮಣೆಯಾದಂತೆ ಆಯಿತು. ಅಷ್ಟೆ ಇನ್ನೇನೂ ಹೆಚ್ಚಿನ ಭಯವಾಗಲಿಲ್ಲ. ನೀವು ಯಾವ ವಿಮಾನದಲ್ಲಿ ಹತ್ತಿದಿರಿ ? ಅದಕ್ಕೆ ಎಷ್ಟು ರೆಕ್ಕೆ-ಯಂತ್ರಗಳು.

ಕವಿ – ನನ್ನದು ಕಲ್ಪನಾ ವಿಮಾನ. ಸಹಸ್ರ ಗರಿಗಳು ಮೂಡಿದಂತೆ ಹಾರಿತು ಅದು. ಒಮ್ಮೊಮ್ಮೆ ಸುತ್ತಮುತ್ತಲಿನ ಸಹಜ ಶಬ್ದಗಳಿಂದ, ದೃಶ್ಯಗಳಿಂದ ಕಲ್ಪನಾ ಯಾನಕ್ಕೆ ಭಂಗವುಂಟಾಗುತ್ತಿದ್ದರೂ ನಾನು ಮನಸ್ಸನ್ನು ಬಿಗಿಹಿಡಿದ. ಪ್ರಯತ್ನಿಸಿ ಗುರಿಯನ್ನು ಸಾಧಿಸಿದ. ಒಮ್ಮೆ ಚಂದ್ರಲೋಕದಲ್ಲಿ ಇಳಿದಾಗ ಇನ್ನೇನು ?

ವಿಜ್ಞಾನಿ – ಹೌದು ವಿಜ್ಞಾನಿಗೆ ಆ ಆತ್ಮವಿಶ್ವಾಸ ಇರಬೇಕು. ಅಲ್ಲಿದ್ದಷ್ಟು ಕಾಲ ದೇಹದ-ಮನಸಿನ ಸ್ಥಿತಿ ಹೇಗಿತ್ತು ?

ಕವಿ – ಕಲ್ಪನಾ ಲೋಕದಲ್ಲಿ ಕಾಲಿಡುವವರೆಗೆ

ವೈಭಾರ ಕಾಣಿಸುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ತಲೆಯಲ್ಲಿ ಚಕ್ರ ಸುಳಿಸುಳಿ ಸುತ್ತಿದಂತಾಯಿತು. ಮುಂದೇನಾಯಿತೋ ತಿಳಿಯದು. ಸ್ವಲ್ಪೇ ಹೊತ್ತಿನಲ್ಲಿ ನೀಲಿಯ ಆಕಾಶದಲ್ಲಿ ಮುತ್ತಿನ ಚೆಂಡಿನಂತೆ ತೇಲುವ ಚಂದ್ರಲೋಕವನ್ನು ಕಂಡೆ. ಆ ಪ್ರಶಾಂತ ವಾತಾವರಣವನ್ನು ಕಂಡು, ಮೈ ಹಗುರವಾಗುವುದು ಹಾಗಿರಲಿ, ಮನಸ್ಸೂ ಹಗುರವಾಯಿತು.

ಜ್ಞಾನಿ – ನನಗಾದರೋ ಕೇವಲ ಮೈ ಹಗುರವಾಯಿತು. ಆದರೆ ಮನಸಿನ ಬಗ್ಗೆ ನಾನು ವಿಚಾರ ಮಾಡಲಿಲ್ಲ. ಈ ಬಾರಿ ಹೋದಾಗ ಆ ಬಗ್ಗೆ ಮಾಹಿತಿಯನ್ನು ಪಡೆಯಬೇಕು. ಅಂದರೆ ನಾನು ಇಳಿದ ವೇಗಕ್ಕೂ ನೀವು ಇಳಿದ ವೇಗಕ್ಕೂ ವ್ಯತ್ಯಾಸ ಇರಬೇಕು. ನಾನು ಶಬ್ದವನ್ನು ಮೀರಿದ ಆದರೆ ಬೆಳಕಿನ ವೇಗವನ್ನು ಮೀರದ ವೇಗದಲ್ಲಿ ಇಳಿದೆ. ನೀವು ?

ವಿ – ನಾನು ಎಲ್ಲ ವೇಗವನ್ನೂ ಮೀರಿದ ಮನೋವೇಗದಲ್ಲಿ ಇಳಿದೆ.

ಜ್ಞಾನಿ – ಹಾಗಾದರೆ ಈ ದಿಶೆಯಲ್ಲಿ ನೀವು ನನ್ನನ್ನು ಮೀರಿಸಿದಿರಿ. ಅದು ಸರಿ ಅಲ್ಲಿ ನೀವು ಯಾವ ಯಾವ ಭಾಗಗಳನ್ನು ಸಂದರ್ಶಿಸಿದಿರಿ ?

ವಿ – ಚಂದ್ರನ ಪೂರ್ಣಕ್ಷೇತ್ರದಲ್ಲಿ ಅಮಾವಾಸ್ಯೆಯಂದೂ ಪೂರ್ಣ ಹುಣ್ಣಿಮೆಯನ್ನು ಕಂಡಿದ್ದೇನೆ.

ಜ್ಞಾನಿ – ಹೌದು-ನೀವು ಸೂರ್ಯನು ಕಾಣದ ಮತ್ತೊಂದು ಪಾರ್ಶ್ವವನ್ನೂ ಕಂಡಿರಾ ?

ವಿ – ಹೌದು ರವಿ ಕಾಣದ್ದನ್ನೂ ಕಂಡವರ ವಂಶ ನನ್ನದು. ಚಂದ್ರಲೋಕ ಮಾತ್ರವಲ್ಲ ಬೇರೆ ಬೇರೆ ಹದಿನಾಲ್ಕು ಲೋಕಗಳನ್ನು ಸುತ್ತಾಡಿ ಬಂದಿದ್ದೇನೆ. ಹುಟ್ಟಿನಿಂದ ಅದಕ್ಕಾಗಿಯೇ ಶ್ರಮಿಸುತ್ತಿದ್ದೇನೆ.

ವಿಜ್ಞಾನಿ – ಹಾಗಾದರೆ ನಿಮ್ಮ ಗುರಿ. ಸಾಧನೆ ಶ್ಲಾಘ್ಯ ಈ ಭೂಲೋಕದಿಂದ ಚಂದ್ರನ ಪೂರ್ಣ ಭಾಗವನ್ನು ಕಾಣಲು ಸಾಧ್ಯವಿಲ್ಲದಿದ್ದರೂ, ಅಲ್ಲಿ ಹೋಗಿ ಮುಂಭಾಗ-ಹಿಂಭಾಗಗಳೆರಡನ್ನೂ ಕಂಡು ಬಂದೆ. ಆ ಹೆಮ್ಮೆ ನನ್ನದು. ಅಲ್ಲಿ ನೀವು ಏನು ವಿಶೇಷ ಕಂಡಿರಿ ?

ಕವಿ – ಕಲ್ಪನೆಯಲ್ಲಿ ದೂರ ಇದ್ದು ನೋಡಿದ್ದನ್ನು ಹೇಳುತ್ತೇನೆ. ರಾಹು ಎಂಬುವನು ಚಂದ್ರನ ಮೇಲೆ ದಂಡೆತ್ತಿ ಬಂದನು, ಆಗ ಚಂದ್ರ ಥರಥರ ನಡುಗುವುದಕ್ಕೆ ಮೊದಲಿಟ್ಟ !

ವಿಜ್ಞಾನಿ – ಅವನಾರು ರಾಹು ? ಅವನ ರೂಪ ಎಂಥದು ?

ಕವಿ – ಮುಖವೇನೋ ಇದೆ; ಆದರೆ ಮುಂಡ ಇಲ್ಲದ ವಿಚಿತ್ರ ದೇಹ.

ವಿಜ್ಞಾನಿ – ಯಾವುದೋ ಹಿಂದಿನ ಪ್ರಾಣಿ ವಿಶೇಷದ ಉಳಿಕೆ ಇರಬೇಕು. ವಿಜ್ಞಾನ ಶಾಸ್ತ್ರದ ಪ್ರಕಾರ ಒಂದಾನೊಂದು ಕಾಲದಲ್ಲಿ ಅಲ್ಲೂ ಪ್ರಾಣಿಗಳು ಜೀವಿಸುತ್ತಿದ್ದಿರಬೇಕು. ಅಷ್ಟೇ ಅಲ್ಲ ಮಾನವರೂ ಜೀವಿಸಿದ್ದಿರಬಹುದೋ ಏನೋ

ಕವಿ – ಬಹುದೋ ಗಿಹುದೋ ಏನು ? ಎಷ್ಟೋ ಜನ ಈ ಲೋಕದಿಂದ ಅಲ್ಲಿ ವಲಸೆ ಹೋಗಿ ದಂಡಯಾತ್ರೆ ಹೋಗಿ, ನೆಲಸಿ-ಹಿಂದಿರುಗಿದ್ದಾರೆ ಅಂತ ಕೇಳಿದ್ದೇವೆ.

ವಿಜ್ಞಾನಿ – ಸಾಕ್ಷಿಯೇನಾದರೂ ಉಂಟೋ ?

ಕವಿ – ರಾಮಾಯಣದ ಕತೆಯಲ್ಲಿ ಕೇಳಿದ್ದೇವೆ. ಭಾರತದ ಇತಿಹಾಸದಲ್ಲಿ ಇದೆ.

ವಿಜ್ಞಾನಿ – ಭಾರತದ ಇತಿಹಾಸ (History) ದಲ್ಲಿ ಇರುವುದಾದರೆ ಅದು ಸತ್ಯದ ಮಾತೇ ಸರಿ. ಆದರೆ ನಾನು ನೋಡಿದಂತೆ ಯಾವ ಪ್ರಾಣಿಯೂ ಕಾಣಲಿಲ್ಲ. ನೀವೇನಾದರೂ ಪ್ರಾಣಿಗಳನ್ನು–ಕಂಡಿರೇನು? ದೂರದರ್ಶಕದಿಂದ ವೀಕ್ಷಿಸಿಯೂ ನನಗೇನೂ ಕಾಣಿಸಲಿಲ್ಲ.

ಕವಿ – ನಾನೇನೋ ಅದೇ ಚಂದ್ರನಲ್ಲಿ ಕಮಲದ ಹೂ, ಮೊಲ, ಜಿಂಕೆ ಇವುಗಳನ್ನು ಕಂಡೆ.

ವಿಜ್ಞಾನಿ – ಹಾಂ, ಹೌದೆ?

ಕವಿ – ಅಷ್ಟೇ ಅಲ್ಲ, ಒಂದು ಕಡೆಯಿಂದ ನೋಡಿದಾಗ ಅವು ಕಾಣಿಸಿದವು. ಇನ್ನೊಂದು ಕಡೆನೋಡಿದಾಗ ಒಬ್ಬ ಕಟ್ಟಿಗೆಯ ಹೊರೆಯನ್ನು ಹೊತ್ತು ಹೋಗುತ್ತಿದ್ದಹಾಗೂ; ಒಬ್ಬ ಅಡುಗೂಲಜ್ಜಿ ಕೋಲೂರಿ ನಿಂತ ಹಾಗೂ ಕಾಣಿಸಿತು.

ವಿಜ್ಞಾನಿ – ಹಾಗಾದರೆ ನಿಮ್ಮ ಪ್ರವಾಸ ಮೆಚ್ಚತಕ್ಕದ್ದು. ನನಗಿಂತ ಹೆಚ್ಚಿನ ಸಾಕ್ಷ್ಯಗಳನ್ನು ತಂದಿದ್ದೀರಿ.

ಕವಿ – ತಿಳಿಯಬೇಕಾದುದರಲ್ಲಿ ನೂರರಲ್ಲಿ ಒಂದಂಶ ತಿಳಿದಿಲ್ಲ. ಅಷ್ಟರಲ್ಲಿಯೇ ಕಲ್ಪನಾ ಭಂಗವಾಗಿ ಭೂಲೋಕಕ್ಕೆ ಹಿಂದಿರುಗಬೇಕಾಯಿತು.

ವಿಜ್ಞಾನಿ – ನನಗೂ ಇಳಿಯಲು ಮನಸ್ಸಿರಲಿಲ್ಲ. ಆಮ್ಲಜನಕದ ಅಭಾವದಿಂದ ಇಳಿಯಬೇಕಾಯಿತು. ಕಪ್ಪು ಸಮುದ್ರದ ಬಳಿ ಬಂದಾಗ ಇಳಿಯಲು ನಿಶ್ಚಯಿಸಿದೆ. ಕೆಂಪು ಸಮುದ್ರದ ಬಳಿ ಇಳಿಯಲು ಪ್ರಾರಂಭಿಸಿದೆ, ಬಂದು ಬಿದ್ದೆ.

ಕವಿ – ಮೃತ್ಯು ಸರೋವರದಲ್ಲಿ ಇಳಿದು ಅಮೃತ ಸರೋವರದಲ್ಲಿ ಎದ್ದು ಬಂದಂತೆ ಆಯಿತು

ವಿಜ್ಞಾನಿ – ನಿಮ್ಮ ಇಳಿಯುವಿಕೆಯ ಕ್ರಮವನ್ನು ತಿಳಿಸುತ್ತೀರಾ?

ಕವಿ – ನಾನು ಚಂದ್ರನಲ್ಲಿ ಇಳಿದೆನಲ್ಲ. ಚಂದ್ರನ ಜೊತೆಯಲ್ಲಿಯೇ ಸುತ್ತಿಬಂದೆ. ಚಂ[illegible] ಚೂಡ–ಶಿವನ ತಲೆಯ ಬಳಿಗೆ ಬಂದಾ[illegible] ಚಂದ್ರನಿಂದ ಶಿವನ ತಲೆಗೆ ಹಾರಿದೆ. [illegible] ಗಂಗೆಯೊಡನೆ ತೇಲಿ, ಭೂಲೋಕವನ್ನು ಸೇರಿ, ಕಡಲನ್ನು ಸೇರಿದೆ. ಅದರ ಸೌಂ[illegible]ರ್ಯವನ್ನು ನೋಡುತ್ತಾ ನಿಂತೆ.

ವಿಜ್ಞಾನಿ – ದೇವರ ದಯೆಯಿಂದ ನಾನು ಸಮು[illegible] ತೀರದಲ್ಲಿಯೇ ಬಿದ್ದೆ. ಈಜಿ ದಡವನ್ನು ಸೇರಿದೆ. ನಿಮ್ಮ ಭೇಟಿಯಾಯಿತ[illegible] ತುಂಬಾ ಸಂತೋಷ.

ಕವಿ – ಒಳ್ಳೆಯದು. ಇಂದಿನಿಂದ ನಾವು ಸ್ನೇ[illegible]ತರು.

ವಿಜ್ಞಾನಿ – ಹಾಗಾದರೆ ಇನ್ನೊಮ್ಮೆ ಇಬ್ಬರೂ ಒಟ್ಟಾ[illegible] ಚಂದ್ರಲೋಕಕ್ಕೆ ಹೋಗಿಬರೋಣವೆ?

ಕವಿ – ಇಬ್ಬರೂ ಒಂದಲ್ಲ ಒಂದು ದಿನ ಅಲ್ಲಿ[illegible] ಹೋಗುತ್ತೇವೆ. ಚಿಂತಿಸಬೇಡಿ

ವಿಜ್ಞಾನಿ – ಆ ದಿನ ಬೇಗ ಬರಲಿ!

ಕವಿ – ಕವಿಯ ಊಹೆ, ವಿಜ್ಞಾನದ ವಿಮರ್ಶೆ[illegible] ಗಂಗಾ – ಯಮುನಾ ಸಂಗಮವಾ[illegible] ಶ್ರದ್ಧೆ ಗುಪ್ತಗಾಮಿನಿ–ಸರಸ್ವತಿಯಾದ[illegible] ಕೈಹಿಡಿದ ಎಲ್ಲ ಕೆಲಸ ಹಣ್ಣು!

ವಿಜ್ಞಾನಿ – ಒಂದಾಗಿ ಬಾಳೋಣ !

ಕಾದಂಬರಿಯ ಬೆಳವಣಿಗೆ

ಹಂಪ. ನಾಗರಾಜಯ್ಯ

ಕಾದಂಬರಿ ಎಂಬ ಪದಕ್ಕೆ ಅರ್ಥವಿವರಣೆಯೊಂದನ್ನು ಕೊಡಲೇಬೇಕೆಂದು ನನ್ನನ್ನು ಒತ್ತಾಯಪಡಿಸುವುದಾದರೆ ಅದನ್ನು 'ಚೆನ್ನಾಗಿ ಹೇಳಿದ ಒಂದು ಒಳ್ಳೆಯ ಕಥೆ, ಎಂಬ ಐದು ಪದಗಳಲ್ಲಿ ಸೂತ್ರೀಕರಿಸ ಲಿಚ್ಛಿಸುತ್ತೇನೆ-ಎಂಬುದಾಗಿ ಫೆಲ್ಪ್ಸ ಎಂಬ ಲೇಖಕ ಹೇಳಿದ್ದಾನೆ. ಆದರೆ ಅಂಥ ಅಚ್ಚುಕಟ್ಟಾದ ಸರ್ವಾಂಗ ಸುಂದರ ಕಾಬಂದರಿಗಳು ಸಿಗುವುದು ಅದೆಷ್ಟು ದುರ್ಲಭ! ಮಾನವನ ದಿನಚರಿಯನ್ನು, ಅವನ ನೋವು ನಲಿವುಗಳನ್ನು, ಬಿಸಿಲು ಬೆಳುದಿಂಗಳನ್ನು ಕಲಾತ್ಮಕವಾಗಿ ವಿವರಿಸುವ ಕಥೆಯೇ ಕಾದಂಬರಿ. ಅಮಾನುಷ ಹಾಗೂ ಲೋಕತೀತ ಅಂಶಗಳನ್ನು ಒಳಗೊಂಡ ಕಥೆಗಳು ಕಾದಂಬರಿಗಳಲ್ಲ. ಕಾದಂಬರಿಯಲ್ಲಿ ಕಥೆಯೇ ಪ್ರಧಾನ. ಇದನ್ನು ಓದುವವನಲ್ಲಿ ಅಥವಾ ಕೇಳುವವನಲ್ಲಿ ಕ್ಷಣ ಕ್ಷಣಕ್ಕೂ ಕುತೂಹಲಾಸಕ್ತಿಗಳು ಕೆರಳಬೇಕು, ಅಭಿರುಚಿ ಅರಳಬೇಕು, ಉತ್ಸಾಹ ಹೆಚ್ಚಬೇಕು.

ಕಾದಂಬರಿಯಲ್ಲಿ ವಸ್ತುವಿನ ಜೋಡಣೆ, ರಚನಾಸೌಷ್ಠವ ಉತ್ತಮವಾಗಿದ್ದರೆ ಅದು ಕಲಾತ್ಮಕ ದೃಷ್ಟಿಯಿಂದ ಹೆಚ್ಚು ಬೆಲೆಯುಳ್ಳದಾಗುತ್ತದೆ. ಕಾದಂಬರಿ ಮತ್ತು ನಾಟಕಗಳಲ್ಲಿ ಸಾಮಿಪ್ಯ ಸಾದೃಶ್ಯಗಳು ಸಮಾನವಾಗಿವೆ. ನಾಟಕ ಮತ್ತು ಕಾದಂಬರಿಗಳು ಸಾಹಿತ್ಯದ ಪ್ರಮುಖ ಪ್ರಭೇದಗಳು. ಆದರೆ ನಾಟಕಕಾರನಿಗಿಂತಲೂ ಕಾದಂಬರಿಕಾರನಿಗೆ ಮಿಗಿಲಾದ ಸ್ವಾತಂತ್ರ್ಯವುಂಟು. ಅಂದರೆ ಆದರ ಪಾತ್ರಗಳಲ್ಲಿ, ಸಂನಿವೇಶದ ಹಿನ್ನೆಲೆಯಲ್ಲಿ, ಯಾವುದೇ ಇತರ ಸಂಬಂಧಪಟ್ಟ ವಿವರಣೆಯಲ್ಲಿ ಕಾದಂಬರಿಕಾರ ಹಸ್ತಕ್ಷೇಪ ಮಾಡಲು ಸಾಧ್ಯವಿದೆ, ಅನುಕೂಲವಿದೆ. ಕಾದಂಬರಿಯಲ್ಲಿ ಕಾರಣ ಕಾರ್ಯಗಳ ಸಂಬಂಧ ಸ್ಪಷ್ಟವಾಗಿ ನಿರೂಪಿತವಾಗಿರಬೇಕು. ಇದರ ಜೊತೆಗೆ ಕಲೆಯ ದೃಷ್ಟಿ ಎನ್ನುವುದು ದೋಷರಹಿತವಾಗಿರಬೇಕು. ಇಲ್ಲಿಯೇ ಕಾದಂಬರಿಕಾರನ ವಿಶೇಷ ಪ್ರಜ್ಞೆ ಗೋಚರವಾಗುವುದು. ಈ ಸಮಸ್ಯೆಯನ್ನು ಸರಿಯಾಗಿ ಬಿಡಿಸಿಕೊಂಡು, ಈ ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಕಾದಂಬರಿಕಾರ ಗೆದ್ದಂತೆಯೇ.

ಕಾದಂಬರಿಕಾರ ಕಥೆಯ ಕೇಂದ್ರವನ್ನು ಮೊದಲು ಕಂಡುಹಿಡಿಯಬೇಕು. ಆ ಕಾದಂಬರಿಯ ಕೇಂದ್ರ ಒಂದು ವಸ್ತುವೇ, ಘಟನೆಯೇ ಇಲ್ಲವೇ ಒಬ್ಬ ವ್ಯಕ್ತಿಯೇ ಎಂಬುದನ್ನು ಆತ ಸ್ಪಷ್ಟಮಾಡಿಕೊಳ್ಳಬೇಕು. ಅನಂತರ ಆ ಕೇಂದ್ರದ ಸುತ್ತಲೂ, ಹೂವಿನ ತೋಟದ ಸುತ್ತಲೂ ಭದ್ರವಾದ ಬೇಲಿಯನ್ನು ಹಬ್ಬಿಸುವಂತೆ, ಕಥೆಯ ಚೆಲುವಿನ ಹಂದರವನ್ನು ಹಬ್ಬಿಸಬೇಕು. ಜೊತೆಗೆ ಕಾದಂಬರಿಯ ಕೇಂದ್ರದ ಸುತ್ತ ಹಲವು ಪೂರಕ ಪಾತ್ರಗಳು, ಹಲವು ಸನ್ನಿವೇಶಗಳು ಮಜಲು ಮಜಲಾಗಿ, ಕ್ರಮ ಕ್ರಮವಾಗಿ ನಿರೂಪಿತವಾಗಬೇಕು. ಸಮರ್ಥ ಕಾದಂಬರಿಕಾರ ಈ ಕಥೆಯ ಬೆಳವಣಿಗೆಗೆ ಎಲ್ಲ ಸಣ್ಣ ದೊಡ್ಡ ವಿಷಯಗಳನ್ನೂ, ವ್ಯಕ್ತಿಗಳನ್ನೂ, ಸಂದರ್ಭ ಸನ್ನಿವೇಶಗಳನ್ನೂ ಸದುಪಯೋಗಪಡಿಸಿಕೊಳ್ಳುತ್ತಾನೆ. ಇಷ್ಟೆಲ್ಲ ಇದ್ದರೂ ಅಂಥೋನಿ

ಟ್ರೊಲೋಪ್ ಹೇಳುವ 'ನಾನೊಂದು ಕಾದಂಬರಿ ಬರೆಯಲು ಕುಳಿತಾಗ ಅದು ಹೇಗೆ ಕೊನೆಗೊಳ್ಳಲಿದೆ ಯೆಂಬುದು ನನಗೆ ಗೊತ್ತೇ ಇರುವುದಿಲ್ಲ. ಆ ಬಗ್ಗೆ ನಾನು ಹೆಚ್ಚು ಲಕ್ಷ್ಯ ಕೊಡುವುದೂ ಇಲ್ಲ' ಎಂಬ ಹೇಳಿಕೆಯನ್ನು ಅವಶ್ಯ ಅನುಲಕ್ಷಿಸಬೇಕು.

ಶ್ರೇಷ್ಠ ಕಾದಂಬರಿಯ ನಿರ್ಮಾಣ ಕಾದಂಬರಿಕಾರನ ಅದ್ಭುತ ಶಕ್ತಿ ಶ್ರೀಯಿಂದ ನಡೆಯುತ್ತದೆ. ಒಂದು ಹೊಸ ವಸ್ತು ಅಥವಾ ಒಂದು ಹೊಸ ಕಥೆಯನ್ನು ಕಂಡುಹಿಡಿದು ಅದಕ್ಕೆ ತನ್ನ ಪ್ರತಿಭೆಯ ಹಾಗೂ ಕಲ್ಪನಾಶ್ರೀಯ ಬಣ್ಣಹಚ್ಚಿ ಮನೋರಂಜಕವಾಗುವಂತೆ ಸರ್ವಜನರೋಚಕವಾಗುವಂತೆ ರಚಿಸುವ ಸಾಮರ್ಥ್ಯ ಸಾಮಾನ್ಯ ಮಟ್ಟದ್ದಲ್ಲ.

ಕಾದಂಬರಿಗಳಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಹಾಗೂ ಪತ್ತೇದಾರಿ ಎಂದು ಬೇರೆ ಬೇರೆ ಪ್ರಕಾರಗಳಿವೆ. ಇವುಗಳಲ್ಲಿ ಚಾರಿತ್ರಿಕ ಕಾದಂಬರಿಗಳ ವಿಚಾರ ಕುರಿತು ಇಲ್ಲಿ ಪ್ರಸ್ತಾಪಿಸಲೆತ್ನಿಸಿದೆ. ಐತಿಹಾಸಿಕ ಕಾದಂಬರಿಗಳ ವಿಚಾರ ಕುರಿತು ಇಲ್ಲಿ ಪ್ರಸ್ತಾಪಿಸಲೆತ್ನಿಸಿದೆ. ಐತಿಹಾಸಿಕ ಕಾದಂಬರಿಗಳ ಉಗಮ ಹಾಗೂ ವಿಕಾಸಕ್ಕೆ ಸಂಬಂಧಿಸಿದಂತೆ ಇಂಗ್ಲೆಂಡ್ ಮತ್ತು ಭಾರತದಲ್ಲಿ ನಡೆದ ಪ್ರಯತ್ನಗಳ ಪರಾಮರ್ಶೆ ಪರಿಭಾವನಾರ್ಹವಾಗಿದೆ. ಇಂಗ್ಲೆಂಡಿನ ಶ್ರೇಷ್ಠ ವಿಮರ್ಶಕರಲ್ಲೊಬ್ಬರಾದ ಪ್ರಾ॥ ಜಾರ್ಜ್ ಸೈಂಟ್ಸ್‌ಬರಿ (1875–1920) ಎಂಬುವರು ಐತಿಹಾಸಿಕ ಕಾದಂಬರಿಗಳ ವಿಚಾರವಾಗಿ ಮೂರು ಪ್ರೌಢ ಪ್ರಬಂಧಗಳನ್ನು ಬರೆದಿದ್ದಾರೆ. ಅವರಲ್ಲದೆ ಮತ್ತೆ ಹತ್ತೆಂಟು ಜನ ವಿಮರ್ಶಕರೂ, ವಿದ್ವಾಂಸರೂ ಕಾದಂಬರಿಗಳ ವಿಷಯದಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ನಮ್ಮಲ್ಲಿ ಇನ್ನೂ ಆ ಬಗೆಯ ವಿವೇಚನಾತ್ಮಕ ಬರೆಹ ಆಗಬೇಕಾಗಿದೆ.

ಪಾಶ್ಚಾತ್ಯರಲ್ಲಿ ಒಂದು ಕ್ರಮಬದ್ಧನಾದ ಕಾದಂಬರಿಯ ವಿಕಾಸದ ನಿರೂಪಣೆ ದೊರೆಯುತ್ತದೆ. ಭಾರತೀಯರಿಗೆ ವೇದ ಪುರಾಣಗಳು ಹೇಗೆ ಪುರಾತನವೋ ಹಾಗೆ ಐರೋಪ್ಯರಿಗೆ ಗ್ರೀಸ್ ಮತ್ತು ರೋಮ್ ದೇಶಗಳ ಇತಿಹಾಸವೇ ಪ್ರಾಚೀನ. ಅವರಲ್ಲಿ ಕಾದಂಬರಿಯ, ಅದರಲ್ಲಿಯೂ ಐತಿಹಾಸಿಕ ಕಾದಂಬರಿಯ ಹುಟ್ಟು ಎಂದು ಆಯಿತು ? ಎಂಬ ಪ್ರಶ್ನೆಗೆ ಉತ್ತರ ಕ್ರಿ. ಪೂ. ದ ಕಡೆಯ ಶತಮಾನಗಳಿಗೆ ಕೊಂಡೊಯ್ಯುತ್ತದೆ. ಜೆನೋಫನ್ (xenophon) ಎಂಬ ಲೇಖಕ ಬರೆದ ಸೈರೋಪೇಡಿಯ (Cyropaedia)ಎಂಬ ಕೃತಿಯೇ ಮೊಟ್ಟ ಮೊದಲ ಪುರಾತನ ಐತಿಹಾಸಿಕ ಕಾದಂಬರಿಯೆಂದು ವಿದ್ವಾಂಸರು ತಿಳಿಸಿದ್ದಾರೆ. ಅದರ ರಚನೆಗೆ ಹಿನ್ನೆಲೆ ಹಾಗೂ ಕೃತಿಯ ವಸ್ತು ಸ್ವಾರಸ್ಯವಾಗಿದೆ. ಗ್ರೀಸ್ ದೇಶದ ರಾಜಕುಮಾರರಿಗೆ ರಾಜಕೀಯದ ಚಾತುರ್ಯವನ್ನು ಪರಿಚಯ ಮಾಡಿಸಿಕೊಡುವ ಸಲುವಾಗಿ ಸೈರೋಪೇಡಿಯವನ್ನು ಬರೆಯಲಾಯಿತೆಂದು ತಿಳಿದು ಬರುತ್ತದೆ. ಹೀಗಾಗಿ ಇದನ್ನು ಎಲ್ಲ ವಿಧದಲ್ಲೂ ಇದು ನಮ್ಮ ಪಂಚತಂತ್ರವನ್ನು ಹೋಲಿಸಬಹುದು. ಗ್ರಂಥ ರಚನೆಯ ಉದ್ದೇಶ ಹಾಗೂ ನೀತಿ ನಿರೂಪಣೆ, ಶ್ರೋತೃಗಳ–ಎಲ್ಲದರಲ್ಲೂ ಸೈರೋ ಪೇಡಿಯಕ್ಕ ಪಂಚ ತಂತ್ರಕ್ಕೂ ವೈದೃಶ್ಯಗಳಿಗಿಂತ ಸಾದೃಶ್ಯಗಳೇ ಹೆಚ್ಚಾಗಿವೆ. ಆದರೆ ಇದರಲ್ಲಿ ಸಿಗುವ ಚರಿತ್ರೆಯ ಅಂಶಗಳು ತೀರ ಕಡಮೆ, ಪಂಚ ತಂತ್ರದಲ್ಲೂ ಅಷ್ಟೆ. ಚಾರಿತ್ರಿಕ ಕಾದಂಬರಿಯ ವಿಚಾರದಲ್ಲಿ ಇದರಿಂದ ಹೆಚ್ಚು ಬೆಳಕು ಬೀಳದಿರಬಹುದು. ಆದರೆ ಈ ಕೃತಿ ಐತಿಹಾಸಿಕ ಕಾದಂಬರಿಗೆ ತೀರ ಹತ್ತಿರ ಬರುತ್ತದೆಂಬುದನ್ನು ಗುರುತಿಸಬೇಕು. ಇದರ ಲೇಖಕನಾದ ಜೆನೋಫೆನ್ ಸಾಕ್ರೆಟಿಸ್ ಹಾಗೂ ಅರಿಸ್ಟಾಟಲ್ ಗುಂಪಿಗೆ ಸೇರಿದವನು.

ಐತಿಹಾಸಿಕ ಕಾದಂಬರಿಕಾರನಿಗೆ ಚರಿತ್ರೆಯ ಅಂಶಗಳು ಹೇರಳವಾಗಿ ಸಿಕ್ಕರೆ ಅನುಕೂಲ ಆದರೆ ಈ ಅನುಕೂಲ ಆಗ ಕಡಮೆಯಾಗಿದ್ದುದರಿಂದ ಗ್ರೀಸ್ ಹಾಗೂ ರೋಮ್ ದೇಶಗಳ ಮೇಲಿನ ಚಾರಿತ್ರಿಕ ಕಥೆಗಳು ಹುಟ್ಟುವುದಕ್ಕೆ ತಕ್ಕ ಅವಕಾಶ ಮತ್ತು ಅನುಕೂಲಕರ ಪರಿಸರ ದೊರೆಯದೇ ಹೋಯಿತು. ಹಾಗೆ ನೋಡುವುದಾದರೆ ಬಹಳ ಕಾಲದವರೆಗೂ ಚಾರಿತ್ರಿಕ, ಪೌರಾಣಿಕ ಹಾಗೂ ಸಾಮಾಜಿಕ ವಿಭಜನೆಗಳು ಸರಿಯಾಗಿ ನಡೆಯಲಿಲ್ಲ. ಆ ಕಾಲಕ್ಕೆ ಅವರಿಗೆ ಉಪಲಬ್ಧವಿದ್ದ ಇತಿಹಾಸದಲ್ಲೂ ಕಾಲ್ಪನಿಕ ಅಂಶ ಯಾವುದು ? ನಿಜವಾದ ಚರಿತ್ರೆ ಯಾವುದು ?—

ಎಂಬುದು ತೀರ ಖಚಿತವಾಗಿ ವಿಂಗಡಿಸಿ ತಿಳಿಯುವುದು ಅಶಕ್ಯವಾಯಿತು. ಅಷ್ಟೇಕೆ ಸುಮಾರು ಒಂದೂವರೆ ಸಾವಿರ ವರ್ಷದವರೆಗೂ ಈ ಚಿತ್ರ ಸ್ಪಷ್ಟವಾಗಲಿಲ್ಲ. ಹದಿನೈದನೆಯ ಶತಮಾನದಲ್ಲೂ ಕೂಡ ಇತಿಹಾಸವನ್ನು ಕುರಿತು ಗ್ರಂಥಗಳ ಮೂಲಕ, ಸಾಹಿತ್ಯದ ಚೌಕಟ್ಟಿನಲ್ಲಿ ವಿಶೇಷವಾದ ಯಾವ ಜ್ಞಾನವೂ ಹೊರಬರಲಿಲ್ಲವೆಂಬುದು ಸೋಜಿಗದ ಸುದ್ದಿ.

ಆದರೆ ಬೌದ್ಧಿಕ ಹಾಗೂ ಮಾನಸಿಕವಾಗಿ ಅದರ ಮುಂದಿನ ಶತಮಾನವಾದ 16ನೆಯ ಶತಮಾನ ತುಂಬ ಮುಂದುವರಿದ ಕಾಲ. ಇದರಲ್ಲಿ ಒಂದೆರಡು ಪ್ರಮುಖ ಘಟನೆ ನಡೆದುವು. ಈ ಅವಧಿಯಲ್ಲಿ ಚರಿತ್ರೆಗೆ ಸಂಬಂಧ ಪಟ್ಟ ಅನೇಕಾನೇಕ ವೃತ್ತಾಂತ (ಸುದ್ದಿ)ಗಳ ಸಂಗ್ರಹಣೆ, ಮತ್ತು ಪತ್ರಿಕೆಗಳ ಮೂಲಕವಾಗಿ ಅದರ ಪ್ರಸರಣೆ-ಇವು ಗಮನಾರ್ಹವಾಗಿ ನಡೆದು ಎದ್ದು ಕಾಣುವ ಪ್ರಗತಿ. ಇದರಿಂದ ಅನಂತರ ಬಂದವರಿಗೆ ತುಂಬ ಪ್ರಯೋಜನವೇ ಆಯಿತು. ಮುಖ್ಯವಾಗಿ ಈ ಕಾರಣ ದಿಂದ ಗ್ರಾಹ್ಯಾಗ್ರಾಹ್ಯಗಳನ್ನು ವಿವೇಚಿಸುವ ವೈಜ್ಞಾನಿಕ ದೃಷ್ಟಿಯ ವಿಮರ್ಶನಾಶಕ್ತಿ ಪ್ರಬಲವಾಗಲು ಸಾಧ್ಯವಾಯಿತು, ಪುಟಗೊಟ್ಟಂತಾಯಿತು. ಯಾವಾಗ ಈ ವಿಮರ್ಶನ ದೃಷ್ಟಿ ತೀಕ್ಷ್ಣವಾಗಿ ಬೆಳೆಯಿತೊ ಆಗಲೇ ಐತಿಹಾಸಿಕ ಕಾದಂಬರಿಗಳ ರಚನೆಗೆ ಅಂಕುರಾರ್ಪಣೆ ಆಯಿತೆನ್ನಬಹುದು. ಆದರೂ ಇದರ, ಈ ನಾಂದಿಗೀತದ ಹೊರತು ಈ ಶತಮಾನದಲ್ಲಾಗಲಿ, 17ನೆಯ ಶತಮಾನದಲ್ಲಾಗಲಿ ಚಾರಿತ್ರಿಕ ಕಾದಂಬರಿಗಳ ಬೆಳೆ ಬರಲಿಲ್ಲ.

ಸರ್ ಥಾಮಸ್ ಮೂರ್ ಎಂಬಾತ 1516-18ರಲ್ಲಿ ಆದರ್ಶಮಯವಾದ ಒಂದು ಸ್ವಪರಿಪೂರ್ಣ ಸಮಾಜದ ಕಲ್ಪಿತ ಚಿತ್ರವನ್ನು ಕೊಟ್ಟು ಲ್ಯಾಟಿನ್ ಭಾಷೆಯಲ್ಲಿ ಬರೆದ utopia ಎಂಬ ಗ್ರಂಥವೇ ಕಾದಂಬರಿಗಳ ಕಹಳೆಯನ್ನೊದಿದ ಕೃತಿಯೆಂದು ಕೆಲವರ ಅಭಿಪ್ರಾಯ. ಇದೇ ಸುಮಾರಿಗೆ ಲ್ಯಾಟಿನ್ ಭಾಷೆಯಲ್ಲೇ Robert Barclay ಎಂಬ ಲೇಖಕ ಬರೆದ 'Argenis' ಎಂಬ ರಾಜಕೀಯ ವಿಡಂಬನಾತ್ಮಕ ಪುಸ್ತಕವನ್ನು ಅನಂತರದ ಲೇಖಕರ ಮೇಲೆ ವರ್ಚಸ್ಸು ಬೀರಿದ ಸೊಗಸಾದ ಶೈಲಿಯ ಸೊದವಾದ ಗದ್ಯ ಗ್ರಂಥವೆಂದು ಕೌಪರ್, ಹೆನ್ರಿ ಹಲ್ಲಮ್ ಮುಂತಾದವರು ಹೆಸರಿದ್ದಾರೆ. ಕೋಲ್‌ರಿಜ್ ಇದರ ಇಂಗ್ಲೀಷ್ ಅನುವಾದ ಬೇಗನೆ ಬರಬೇಕೆಂದು ಪ್ರಶಂಸಿಸಿ ನುಡಿದಿದ್ದಾನೆ. ಇಟಲಿಯ ಕೃತಿಗಳ ಸ್ಫೂರ್ತಿಯಿಂದ 1580-81ರಲ್ಲಿ ಪೆಂಬ್ರೂಕ್‌ನ ಕೌಂಟೆಸ್ ಆದ ತನ್ನ ತಂಗಿ ಮೇರಿಯ ಒಲವರದ ಕೋರಿಕೆಯ ಮೇರೆಗೆ ಸರ್ ಫಿಲಿಪ್ ಸಿಡ್ನಿ ಎಂಬಾತ ಇಂಗ್ಲಿಷ್‌ನಲ್ಲಿ ಬರೆದ Arcadia ಗ್ರಂಥವನ್ನು ಎಲ್ಲರೂ ಇಂಗ್ಲಿಷ್‌ನ ಪ್ರಥಮ "ರೊಮಾನ್ಸ್" ಎಂದು ಕರೆದಿದ್ದಾರೆ. ಇದರಲ್ಲಿ ವಿಶೇಷವಾಗಿ ಗದ್ಯ ಬರೆಹವೇ ಇದ್ದರೂ ಅಲ್ಲಲ್ಲಿ ಮಧ್ಯೆ ಮಧ್ಯೆ ಪದ್ಯಗಳೂ ಸೇರಿವೆ. ಶೈಲಿ ಮಾಧುರ್ಯ ಗುಣ ಪ್ರಧಾನವಾಗಿದ್ದು ಕೆಲವು ಕಡೆ ಇದು ಕಾವ್ಯದ ಘನತೆಗೇರಿದೆ. ಆ ಕಾಲದ ಸಮಾಜದಲ್ಲಿದ್ದ ಭಾವನೆಗಳ ಬಿಂಬ ಈ ಹೊತ್ತಗೆಯಲ್ಲಿ ಪಡಿಮೂಡಿದೆ.

ಸರ್ ಫಿಲಿಪ್ ಸಿಡ್ನಿಯ ಗ್ರಂಥ ರಚಿತವಾಗುವುದಕ್ಕೆ ಎರಡು ವರ್ಷ ಹಿಂದೆಯೇ 1579ರಲ್ಲಿ ಜಾನ್ ಲಿಲಿ ಎಂಬಾತ ಕೇವಲ ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿಯೇ ರಚಿಸಿದ The Anatomy of wit ಅಥವಾ Euphues ಎಂಬ ಹೆಸರಿನ ಹೊತ್ತಗೆಯೂ ಸಿಡ್ನಿಯ ರಚನಾ ವಿಧಾನ ಮಾರ್ಗವನ್ನೇ ಅನುಸರಿಸಿದ ಉಲ್ಲೇಖಾರ್ಹ ಕೃತಿ. ಇದು ಸಿಡ್ನಿಯ ಹಾದಿಯನ್ನೇ ಹಿಡಿದಿದ್ದರೂ ಇದರ ಭಾಷೆ ಸ್ವಲ್ಪ ಪೆಡಸು. ಶೈಲಿ ಲ್ಯಾಟಿನ್ ಪದ ಭೂಯಿಷ್ಠ. ಇದರ ಉಕ್ತಿ ಚಮತ್ಕಾರ ಕೆಲವು ಕಾಲ ಇಂಗ್ಲೆಂಡ್‌ನಲ್ಲಿ ಅದೊಂದು "ಫ್ಯಾಷನ್" ಆಗಿ ಪ್ರಚಾರದಲ್ಲಿತ್ತು. ನೇಪಲ್ಸ್ ಮತ್ತು ಇಂಗ್ಲೆಂಡ್‌ಗಳಲ್ಲಿ ಸಾಹಸ ಕಾರ್ಯಗಳನ್ನೆಸಗಿದ Euphues ಎಂಬ ತರುಣನೊಬ್ಬನ ಬುದ್ಧಿ ಚಾತುರ್ಯ ಮತ್ತು ಸಿದ್ಧಿ ಸಾಧನೆಗಳ ಸುತ್ತ ಹೆಣೆದ ರಮ್ಯ ಕಥಾನಕವೇ ಆ ಕಾದಂಬರಿಯ ಮುಖ್ಯ ವಸ್ತು. ಜಾನ್ ಲಿಲಿಯ ವಿಡಂಬನೆ ತತ್ಕಾಲೀನ ಸಮಾಜದಲ್ಲಿ ಸ್ಥಾಯಿಯಾಗಿ ಬೇರುಬಿಟ್ಟಿದ್ದ ದೋಷ ಹಾಗೂ ದುಷ್ಟ ಗುಣಗಳ ಮೇಲೆ. ಕಾದಂಬರಿಕಾರನ ಈ ಉದ್ದೇಶ ತೀವ್ರತರವಾಗಿ ಅಭಿವ್ಯಕ್ತವಾಗಿದೆ. ಷೇಕ್ಸ್‌ಪಿಯರ್, ಸರ್ ವಾಲ್ಟರ್ ಸ್ಕಾಟ್ ಮುಂತಾದ

ಹಿರಿಯ ಲೇಖಕರು ಕೂಡ ಈ ಉತ್ತಮ ಕೃತಿಯನ್ನು ಓದಿದ್ದರೆಂಬುದನ್ನು ಸ್ಮರಿಸಬಹುದು.

ಅನಂತರ ಶ್ರೀಮತಿ ಅಫ್ರೆಬೆಲ್ಹ್ ಎಂಬಾಕೆ 1699ರಲ್ಲಿ ಪ್ರಕಟಿಸಿದ The History of Oronooko ಅಥವಾ The Royal Slave ಎಂಬುದಂತೂ ಕಾದಂಬರಿಯ ರೂಪ ಸ್ಥೂಲವಾಗಿ ತಳೆದ ಗ್ರಂಥ. ಇದರಲ್ಲಿ ಗುಲಾಮಗಿರಿಗೆ ಮಾರಲಾದ ಆಫ್ರಿಕದ ರಾಜಕುಮಾರನೊಬ್ಬನ ಕರುಣಾಜನಕವಾದ ವ್ಯಥೆಯ ಕಥೆಯಿದೆ. ಇದನ್ನು ಓಜಸ್ವಿಯಾದ, ಆದರೆ ಮಾಧುರ್ಯಲಿಪ್ತವಾದ ಶೈಲಿಯಲ್ಲಿ ಅಳವಡಿಸಿದೆ. ಮುಖ್ಯವಾಗಿ ಗುಲಾಮಿಪದ್ಧತಿಯ ದುಷ್ಪರಿಣಾಮದ ವಿರುದ್ಧವಾಗಿ ಬಂಡಾಯವೆದ್ದ ಮೊಟ್ಟಮೊದಲ ಇಂಗ್ಲಿಷ್ ಕೃತಿ ಇದು ಎಂಬುದು ಇದರ ಮತ್ತೊಂದು ಹಿರಿಮೆ ಥಾಮಸ್ ಸದರ್ನ್ ಎಂಬ ನಾಟಕಕಾರ ಇದರಿಂದ ಪ್ರೇರಿತನಾಗಿ Oronooko ಎಂಬ ದುರಂತ ನಾಟಕವೊಂದನ್ನು ಬರೆದಿದ್ದಾನೆಂಬುದನ್ನು ಇಲ್ಲಿ ಅವಶ್ಯ ಸ್ಮರಣೆಗೆ ತಂದುಕೊಳ್ಳಬಹುದು. Utopia ಹೊತ್ತಿಗೆಯ ಮಾದರಿಯಲ್ಲೇ ರಚಿತವಾದ ಲಾರ್ಡ್‌ಬೇಕನ್ನಿನ "ಅಟ್ಲಾಂಟಿಸ್" ಮತ್ತು ಸರ್ ಹ್ಯಾರಿಂಗ್‌ಟನ್ ಬರೆದ "ಓಸಿಯಾನ" ಎಂಬ ಗ್ರಂಥಗಳನ್ನು ಬಿಟ್ಟರೆ, ಲಿಲಿ ಮತ್ತು ಸಿಡ್ನಿಗಳಾದ ಮೇಲೆ ಕಥಾ ಸಾಹಿತ್ಯದ, ಗದ್ಯ ಗ್ರಂಥಗಳ ನಿರ್ಮಾಣ ಸರಿ ಸುಮಾರು ಒಂದು ಶತಮಾನದ ತನಕ ಆಗಲಿಲ್ಲವೆಂಬುದು ಐತಿಹಾಸಿಕ ನಿಷ್ಕರ್ಷೆ.

17, 18, ಮತ್ತು 19ನೆಯ ಶತಮಾನಗಳು ಇಂಗ್ಲಿಷ್ ಭಾಷಾ ಮತ್ತು ಸಾಹಿತ್ಯ ಚರಿತ್ರೆಯ ಕಾದಂಬರೀ ಕ್ಷೇತ್ರದಲ್ಲಿ ಹುಲುಸಾದ ಬೆಳೆ ಬಂದ ಸುವರ್ಣಕಾಲ. ರಾಬಿನ್‌ಸನ್ ಕ್ರೂಸೋ ಬರೆದ ಡೇನಿಯಲ್ ಡಿಫೋ (1635-1731); ಗಲಿವರನ ಪ್ರವಾಸವನ್ನು ಬರೆದ ಜೋನಥಾನ್ ಸ್ವಿಫ್ಟ್ (1667-1745); ಕ್ಲಾರಿಸ್ಸ್, ಪಮೇಲ ಕಾದಂಬರಿಗಳ ಲೇಖಕ ಸ್ಯಾಮ್ಯುಯಲ್ ರಿಚರ್ಡಸನ್ (1689-1761); ಜೋಸೆಫ್ ಆಂಡ್ರೂಸ್, ಟಾಮ್ ಜೋನ್ಸ್, ಅಮೇಲಿಯ ಕಾದಂಬರಿಗಳ ರಚಯಿತ ಹೆನ್ರಿ ಫೀಲ್ಡಿಂಗ್ (1707-54); ಪೆರಿಗ್ರಿನ್ ಪಿಕಲ್, ಹಂಫ್ರಿ ಕ್ಲಿಂಕರ್, ರೊಡರಿಕ್ ರ್‍ಯಾಂಡಮ್ ಮುಂತಾ ಕಾದಂಬರಿಗಳ ಲೇಖಕ ಟೊಬಿಯಸ್ ಸ್ಮಾಲೆ (18ನೆಯ ಶತಮಾನ); ಡೆಸರ್ಟೆಡ್ ವಿಲೇಜ ವಿಕಾರ್ ಆಫ್ ವೇಕ್ ಫೀಲ್ಡ್ ಕಾದಂಬರಿಗಳ ಕ ಆಲಿವರ್ ಗೋಲ್ಡ್‌ಸ್ಮಿತ್ (1728-1774). ವತ್ತು ಕಾದಂಬರಿಗಳ ಸಾರ್ವಭೌಮ ಸರ್ ವಾಲ್ಟ ಸ್ಕಾಟ್ (1771-1832); ಅನೇಕ ಕಾದಂಬರಿ ಸಮ್ರಾಟ ಚಾರ್ಲ್ಸ್ ಡಿಕನ್ಸ್ (1812-1870 The Life of opinions of Tristra Shandy, Sentimental Journ ಕಾದಂಬರಿಗಳ ಸೃಷ್ಟಿಕರ್ತ ರೆ. ಲಾರೆನ್ಸ್ ಸ್ಟನ (1710-1768); ಈವ್‌ಲಿನ, ಸೆಸಿಲ ಕಾದಂಬರಿ ಜನ್ಮದಾತೆ ಫ್ರಾನ್ಸೆಸ್ ಬರ್ನಿ (1752-1840) T Italian, Horace Walpole ಅಥ Castle of otranto ಕಾದಂಬರಿಗಳ ಒ ಶ್ರೀಮತಿ ಆ್ಯನಿ ರ್‍ಯಾಡ್ ಕ್ಲಿಫ್ (1764-18 ಮುಂತಾದವರು ಇಂಗ್ಲಿಷ್ ಭಾಷೆಯ ಕಾದಂ ಕ್ಷೇತ್ರದ ಕೃಷಿಕಾರರು. ಇವರಲ್ಲಿ ಅನೇಕರು ಕೆ ದೃಷ್ಟಿಗಳಿಂದ ಸಾಹಸಿಗಳಾಗಿ ಮೆರೆದು ಮೈಲಿಗಲ ನಿಂತಿದ್ದಾರೆಂಬುದನ್ನು ನೆನಪಿನಲ್ಲಿಡಬೇಕು. ಥಾಮ ಹಾರ್ಡಿ, ಡಿ. ಎಚ್. ಲಾರೆನ್ಸ್, ಮೆರಿಡಿ ಅರ್ನೆಸ್ಟ್ ಹೆಮಿಂಗ್‌ವೇ ಮತ್ತು ಸಾಮರ್ಸೆಟ್ ಮಾ ಮುಂತಾದವರು ತರುವಾಯದ ಸುಪ್ರಸಿದ್ಧ ಕಾದಂ ಕಾರರು.

ಭಾರತೀಯ ಸಾಹಿತ್ಯಕ್ಕೆ ಒಂದು ದೃಷ್ಟಿಯಿ ಚಾರಿತ್ರಿಕ ಕಾದಂಬರಿ ಹೊಸದು. ಮತ್ತೊಂದು ದ ಯಿಂದ ಅದು ಹಳೆಯದೂ ಹೌದು. ಪ್ರಾ ಕಾವ್ಯ-ಗದ್ಯ ಮತ್ತು ಪದ್ಯ-ಗಳಲ್ಲಿ ಕಾವ್ಯಾಂಶದೊ ಇತಿಹಾಸವೂ ಹಾಸು ಹೊಕ್ಕಾಗಿ ಬೆರೆತಿರುವುದು ವಿಷಯ. ಆ ಬಗೆಯ ಕಾವ್ಯಗಳಲ್ಲಿ ಚರಿತ್ರೆಯೆಂಬು ತಾನೇ ಮುಂದಾಗಿ, ಮೇಲಾಗಿ ನಿಲ್ಲದಿದ್ದರೂ ಕಾ ಹೊರಮೈಯ್ಯಾಗಿ ಬಂದಿದೆ. ಇದಕ್ಕೆ ನಮ್ಮ ವ ಕವಿಗಳಾದ ಪಂಪಪೊನ್ನ ರನ್ನರ ಕಾವ್ಯಗಳೇ ಸಾ ಆದರೆ ಕೆಲವೊಮ್ಮೆ ಇತಿಹಾಸ ಅಂದಿನ ಕಾವ್ಯಗಳ

ವಾರ್ಯ ಭಾಗವಾಗಿಯೂ ಬೆರೆತುಬಿಟ್ಟಿದೆ. ಅಷ್ಟೇಕೆ ಅಲ್ಲಲ್ಲಿ ಇತಿಹಾಸವೇ ಪ್ರಧಾನವಾದ ಗ್ರಂಥಗಳೂ ರಚಿತ ವಾಗಿವೆ. ಬಾಣನ ಹರ್ಷ ಚರಿತೆ, ಕಲ್ಹಣನ ರಾಜ ತರಂಗಿಣಿ, ಬಿಲ್ಹಣನ ವಿಕ್ರಮಾಂಕದೇವ ಚರಿತೆ ಮುಂತಾದ ಕೃತಿ ರತ್ನಗಳು ಈ ಸಾಲಿಗೆ ಸೇರುತ್ತವೆ. ಕನ್ನಡದಲ್ಲೂ ಈ ವಿಧವಾದ ಕಾವ್ಯಗಳುಂಟು ಕನ್ನಡದ ಕೆಲವು ಹಳೆಯ ಕಾವ್ಯಗಳನ್ನು ಅಲ್ಪ ಸ್ವಲ್ಪ ಮಾರ್ಪಾಟು ಗಳಿಂದ ಹೊಸಗನ್ನಡಕ್ಕೆ ಅನುವಾದ ಮಾಡಿದರೆ ಸಾಕು ಅವು ಒಳ್ಳೆಯ ಕಾದಂಬರಿಗಳಾಗುತ್ತವೆ. ನಂಜುಂಡ ಕವಿಯ ಕಾವ್ಯವನ್ನು ಪ್ರಾ॥ ದೇ. ಜವರೇಗೌಡರು "ಕಡುಗಲಿ ಕುಮಾರ" ಎಂಬ ಗ್ರಂಥವಾಗಿ ಬರೆದಿದ್ದಾರೆ. ನಾವು ಇವುಗಳಲ್ಲಿ ಇಂದಿನ ಇತಿಹಾಸ ಪ್ರಧಾನ ಕಾದಂಬರಿ ಗಳ ಮೂಲವನ್ನು ದರ್ಶಿಸಬಹುದು.

ಐತಿಹಾಸಿಕ ಕಾದಂಬರಿಗಳ ಸಿರಿಬೆಳೆ ಭಾರತದಲ್ಲಿ ಮೊಟ್ಟಮೊದಲು ಸರ್ವಾಂಗ ಸುಂದರವಾಗಿ, ವೈವಿಧ್ಯ ಮಯವಾಗಿ, ಸತ್ವ ಸಂಪನ್ನವಾಗಿ, ಸಮೃದ್ಧವಾಗಿ ಬೆಳೆ ದದ್ದು ವಂಗನಾಡಿನಲ್ಲಿ. ಬಂಗಾಳ ಭಾರತದಲ್ಲಿ ಬಹು ಬೇಗ ಬಗೆ ಬಗೆಯಲ್ಲಿ ಎಲ್ಲ ಚಟುವಟಿಕೆಗಳಲ್ಲೂ ಭಾಗ ವಹಿಸಿ ತನ್ನ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ಕಣ್ಣಿಗೆ ಕಾಣುವಂತೆ ಸಲ್ಲಿಸಿತು. ಸಾಹಿತ್ಯ, ಧರ್ಮ ಹಾಗೂ ತತ್ವ, ವಿಜ್ಞಾನ-ಎಲ್ಲದರಲ್ಲೂ ವಂಗನಾಡಿನದು ಅಗ ಮರ್ಯಾದೆಗೆ ಅರ್ಹವಾದ ವಿಶಿಷ್ಟ ಪಾತ್ರ. ಕಾದಂಬರಿ ಗಳ ಕ್ಷೇತ್ರದಲ್ಲೂ ವಂಗನಾಡು ಬಂಗಾರದ ಬೆಳೆ ತೆಗೆ ಯಿತು. ಕರುಣಾ ಹಾಗೂ ಶಶಾಂಕ ಐತಿಹಾಸಿಕ ಕಾದಂಬರಿಗಳ ಲೇಖಕರೆಂದು ಖ್ಯಾತನಾಮರಾದ ರಾಖಾಲದಾಸ ವಂಧ್ಯೋಪಾಧ್ಯಾಯ, ಆನಂದಮಠ, ದೇವೀಚೌಧುರಾಣಿ ಮುಂತಾದ ಕಾದಂಬರಿಗಳ ಬಂಕಿಮ ಚಂದ್ರ ಚಟ್ಟೋಪಾಧ್ಯಾಯರು–ಇವರು ಬಂಗಾಳದ ಬೆಳಕಾಗಿ ಬರೆದವರು ಈಶ್ವರೀ ಸೂತ್ರ, ಉಷಃಕಾಲ, ಚಂದ್ರಗುಪ್ತ, ಮರಾಠರ ಅಭ್ಯುದಯ ಮುಂತಾದ ಐತಿಹಾಸಿಕ ಕಾದಂಬರಿಗಳನ್ನು ಮರಾಠಿಯಲ್ಲಿ ಬರೆದ ಹರಿನಾರಾಯಣ ಆಪ್ಟೆಯವರಂತೂ ಮಹಾರಾಷ್ಟ್ರದಲ್ಲಿ ಆದ್ಯರು ಕರಣಬಾಘೇ ಲೋ ಅಲ್ಲದೆ, ಕೆ. ಎಂ. ಮುನಷಿಯವರು ಬರೆದ ಜಯ ಸೋಮನಾಥ, ಗುಜ ರಾತ್ ಸೋಮನಾಥ ಮತ್ತು ಪೃಥ್ವೀವಲ್ಲಭ ಎಂಬ ಕಾದಂಬರಿಗಳು ಗುಜರಾತಿ ಭಾಷೆಯಲ್ಲಿ ಪ್ರಸಿದ್ಧಿ ಪಡೆದ ಪುಸ್ತಕಗಳು ಕಲ್ಕಿಯವರ ಪಾರ್ಥಿಬನ್ ಕನಸು ತಮಿಳಿನ ಖ್ಯಾತಿ. ಸರ್ದಾರ್ ಕೆ. ಎಂ. ಪಣಿಕ್ಕರ್ ಅವರ ಕೇರಳ ಸಿಂಹ ಮತ್ತು ಇತರರ ಕಾದಂಬರಿಗಳು ಮಲೆ ಯಾಳಿ ಭಾಷೆಯ ಹಿರಿಮೆ ಸಾರಿವೆ. ರಾಣಿ ರುದ್ರಮ ದೇವಿ ಮುಂತಾದುವು ತೆಲುಗು ಭಾಷೆಯ ಘನವೆತ್ತ ಕೃತಿಗಳು

ಕನ್ನಡದಲ್ಲಿ ಕೆಂಪು ನಾರಾಯಣನ ಮುದ್ರಾ ಮಂಜೂಷದಿಂದ ಕಾದಂಬರಿಗಳ ಬೆಳೆ ಪ್ರಾರಂಭವಾಯಿ ತೆನ್ನಬಹುದು. ಅದೊಂದು ಸುಂದರವಾದ ಚಾರಿತ್ರಿಕ ಕಾದಂಬರಿ. 1823 ರಲ್ಲಿ ಇದು ರಚಿತವಾಯಿತು. ಆದರೆ ಯಾವುದನ್ನು ನಾವು ಇಂದು ಕಾದಂಬರಿ ಎಂದು ಕರೆಯುತ್ತೇವೆಯೋ ಆ ಪ್ರಕಾರದ ಮಾಪನದಿಂದ ಐತಿಹಾಸಿಕ ಕಾದಂರಿಗಳು ಶತಮಾನಗಳಷ್ಟು ಪ್ರಾಚೀನ ವಲ್ಲ. ಕೇವಲ ಕಳೆದ ಶತಮಾನದ ಅಂತ್ಯ ಮತ್ತು ಈ ಶತಮಾನದ ಆದಿಯಿಂದ ಆರಂಭವಾಗಿದೆ. ಕನ್ನಡದ ಕಾದಂಬರಿಗಳ ಮೊದಲ ಬೆಳೆಯೆಲ್ಲಾ ಎರವಲು ತಂದದ್ದು. ಭಾಷಾಂತರದ ಮೂಲಕ ಪ್ರಾರಂಭದ ಕಾದಂಬರಿಗಳು ಬಂದುವು. ಬಿ. ವೆಂಕಟಾಚಾರ್ಯರು (1873-1914) ಬಂಗಾಳಿಯಿಂದಲೂ. ವೆಂಕಟೇಶ ತಿರಕೋ ಕುಲಕರ್ಣಿ ಅಥವಾ ಗಳಗನಾಥರು (1869-1942) ಮರಾಠಿಯಿಂದಲೂ ಕಾದಂಬರಿ ಗಳನ್ನು ಅನುವಾದ ಮಾಡಿದರು. ಆದರೆ ಸ್ವಂತ ಕೃಷಿ ನಡೆದದ್ದು ಈ ಶತಮಾನದ ಮೊದಲನೆಯ, ಎರಡ ನೆಯ ದಶಕದಿಂದ ಈಚೆಗೇ ಎನ್ನಬಹುದು. ಇದರ ಪ್ರಥಮ ಪೂಜೆ ಎಸ್. ಎಸ್. ಪುಟ್ಟಣ್ಣನವರಿಗೆ (1854-1920) ಸಲ್ಲುತದೆ. ಪುಟ್ಟಣ್ಣನವರು ಸಾಮಾಜಿಕ ಹಾಗೂ ಐತಿಹಾಸಿಕ ಕಾದಂಬರಿಗಳೆರ ಡನ್ನೂ ಬರೆದಿದ್ದಾರೆ. ಅಲ್ಲಿಂದ ಮುಂದೆ ವೀರಕೇಸರಿ ಸೀತಾರಾಮಶಾಸ್ತ್ರಿ, ಮಾಸ್ತಿ, ದೇವುಡು (ಮಯೂರ ಕಾದಂಬರಿ), ತರಾಸು, ಕೊರಟ – ಮುಂತಾದವರು ಐತಿಹಾಸಿಕ ಕಾದಂಬರಿಗಳ ಹೊಳೆಯನ್ನೇ ಹರಿಸಿ ದ್ದಾರೆ.

ಕಾದಂಬರಿ, ಅದು ಯಾವುದೇ ಜಾತಿಯ ಕಾದಂಬರಿಯಾಗಿರಲಿ, ಅದರ ಹಿರಿಮೆ ಗರಿಮೆಗಳೆಲ್ಲ ಅದರಲ್ಲಿ ಅಡಕವಾಗಿರುವ ಬಾಳಿನ ಆಳವಾದ ಅನುಭವ, ಜೀವಂತವಾದ ನಿಷ್ಠೆಗಳಲ್ಲಿ ಅಂತರ್ಗತವಾಗಿರುತ್ತದೆ. ಜೊತೆಗೆ ಅದು ಸೌಂದರ್ಯ ತತ್ವಗಳನ್ನೂ, ಜೀವನ ಮೌಲ್ಯಗಳನ್ನು ಪ್ರಾಮಾಣಿಕವಾಗಿ, ಆದರೆ ಕಲಾತ್ಮಕವಾಗಿ ಒಡಮೂಡಿಸಿರಬೇಕು. ಒಂದು ಕಾಲದ ಜನರ ಬದುಕಿನ ಪ್ರಾಮಾಣಿಕವೂ, ಪೂರ್ಣವೂ ಆದ ಚಿತ್ರ ದೋಷದೂರವಾಗಿ, ಐತಿಹಾಸಿಕ ಕಾದಂಬರಿಯಲ್ಲಿ, ಬರಬೇಕು. ಇಂತು ಹಂತ ಹಂತವಾಗಿ ಓದುಗನನ್ನು ಹೊಸದಾದ ಬಾಳಿನ ದರ್ಶನದತ್ತ ಕೊಂಡೊಯ್ಯುವ ಕೃತಿಯೇ ಶ್ರೇಷ್ಠ ಕೃತಿ.

ಕಾದಂಬರಿಗಳು, ವಿಶೇಷವಾಗಿ ಐತಿಹಾಸಿಕ ಕಾದಂಬರಿಗಳು ಭಾರತದ ಜಾಗೃತಿಗಾಗಿ ತುಂಬ ಶ್ರಮಿಸಿವೆ. ಅವು ಸಲ್ಲಿಸಿರುವ ಸೇವೆ ಶ್ಲಾಘನೀಯ. ಕಾದಂಬರಿಗಳು ಸ್ವಾತಂತ್ರ್ಯ ಸಾಧನೆಯಲ್ಲಿ ವಹಿಸಿದ ಮಹತ್ತರ ಪಾತ್ರವನ್ನು ನಿರೂಪಿಸಿದರೇ ಅದೊಂದು ಬೃಹದ್ಗಾತ್ರದ ಗ್ರಂಥವಾಗುತ್ತದೆ. ಅದರ ಅಭ್ಯಾಸವಂತೂ ಎಂಥವನಿಗೂ ರೋಮಾಂಚವುಂಟು ಮಾಡುತ್ತದೆ. ನಮ್ಮ ನಾಡಿನ ಗತಕಾಲದ ಇತಿಹಾಸದ ವಿಭವ ವೈಭವಗಳ ಮಹೋನ್ನತಿಯ ಸ್ವಸ್ವರೂಪ ದರ್ಶನ ಮಾಡಿ ಕೊಟ್ಟು ಭಾರತೀಯರಲ್ಲಿ ದೇಶಪ್ರೇಮ ಉಕ್ಕಿ ಹರಿಯುವಂತೆ ಮಾಡಿವೆ. ನಮ್ಮ ನುಡಿಯ ಸತ್ವ, ಶ್ರೀಮಂತಿಕೆಯ ಪರಿಚಯ ಮಾಡಿಕೊಟ್ಟು ಭಾಷಾಪ್ರೇಮ ಅರಳುವಂತೆ ಮಾಡಿವೆ. ಹೀಗಾಗಿ ಕಾದಂಬರಿಗಳು ಹೊಸ ಪೀಳಿಗೆಯಲ್ಲಿ ಪುನರುತ್ಥಾನದ ಪ್ರಜ್ಞೆಯನ್ನು ಪ್ರಜ್ವಲಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸಿವೆ. ವಂಗನಾಡಿನಲ್ಲಂತೂ ಕಾದಂಬರಿಗಳ ಸುಗ್ಗಿಯೇ ಹಿಗ್ಗಿ ಹರಿಯಿತು, ಜನಮನವನ್ನು ಕುಣಿಸಿ ತಣಿಸಿತು ಐತಿಹಾಸಿಕ ಕಾದಂಬರಿಗಳು ಜಗತ್ತಿನ ಯಾವುದೇ ಭಾಷೆಯಲ್ಲಿ ರಚಿತವಾಗಿರಲಿ, ಬಹುಮಟ್ಟಿಗೆ ಅವುಗಳೆಲ್ಲದರ ಸಾಮಾನ್ಯ ರೂಪ ಒಂದೇ ಆಗಿರುತ್ತದೆ.



ಮದುವೆ

ಮದುವೆ, ಮದುವೆ
ಸಿರಿಯ ಮದುವೆ
ಇಂದು ನನ್ನ ಗೆಳೆಯಗೆ
ಮಧುವೆ ಮದುವೆ ರೂಪಿನಲ್ಲಿ
ಇಳಿಯ ಲವನ ಬಾಳಿಗೆ

ಎರಡೆದೆಗಳ ಮಿಲಲಕಿಬ್ಬರಿಗೂ
ನಿರಿಗೆ ಗಂಟು
ಹಸೆಗೇರುವ ಹೊಸ ಸಂತಸ
ಬೆಸುಗೆ ಬಿಡದ ನಂಟು

ತನ್ನ ಮಗಳು ಆಗಲುವಳೆಂದಲ್ಲ
ತಾಯಿ ಅಳುವುದು
ತನ್ನ ಭಾರವಿಳಿದ ಕೃತಾರ್ಥತೆಯ
ಹೊಣೆಯ ನಲಿವದು

ತಲೆನೂರಿನ ಬೆಳಕಿನ ಕುಡಿ—
ಗೀ ಮದುವೆಯ ತೈಲ
ಗುರುಜನಗಳ ಹಾರೈಕೆಯೆ
ಈ ಹಣತೆಯ ಮೂಲ

ಅವನಿಗಿವಳು ಇವನಿಗವಳು
ಋಣಿಯಾಗಿಹರಿವರು
ಬಾಳಿನ ತೇರದು ಸಾಗಲು
ಗಾಲಿಗಳಾಗಿಹರು

ತಂತಿ ಮೇಲೆ ನಡೆಯುವಂತೆ
ದಾಂಪತ್ಯ ಜೀವನ
ನುಭವದಭ್ಯಾಸದಲ್ಲೆ
ಆಗಬೇಕು ಪಾವನ

ಸತಿಪತಿಗಳ ಒಲವಿನ ಬಳ್ಳಿಯ
ಬೆಳೆಯಲಿ ಕೋಮಲ
ಮುಗುಳು ನಗೆಯ ತೊದಲು ನುಡಿಯ
ಅಂಬೆ ಗಾಲಿನಾ ಫಲ

—ಟಿ. ವಿ. ಎಂ. ಆಚಾರ್ಯ.

ಒಡನಾಡಿಗೆ

1

ಓ ಗೆಳತಿ ನನ್ನೊಡನೆ
ಜೀವನದ ಸಂಗಾತಿ
ಒಡನಾಡಿ ಒಡಗೂಡಿ--
ನಲಿಯೋಣ ಬಾ !

2

ಬಾಳನ್ನು ಉತ್ತೋಣ
ಲವನ್ನು ಬಿತ್ತೋಣ
ಜ ತ್ರಿಯನು ಹುಲುಸಾಗಿ--
ಬೆಳೆಸೋಣ ಬಾ !

3

ಉತ್ಸಾಹ ತಳೆಯೋಣ
ಬೇಸರವ ಕಳೆಯೋಣ
ಕಟುವಾಗಿ, ಪಟುವಾಗಿ--
ಜಗಿಯೋಣ ಬಾ !

4

ಸುಖದುಃಖ ಸಹಿಸೋಣ
ಕುಟಿಲತೆಯ ದಹಿಸೋಣ
ಬಾಳಿನಲಿ ಹಾಲ್ ಹೊಳೆಯ--
ಹರಿಸೋಣ ಬಾ !

5

ಜೀವನವ ಕಡೆಯೋಣ
ಅಮೃತವ ಪಡೆಯೋಣ
ಮಿತವಾಗಿ, ಹಿತವಾಗಿ--
ಸವಿಯೋಣ ಬಾ !

6

ಹೊಸ ಜಗವ ತೆರೆಯೋಣ
ಹೂ ಮಳೆ-ಗರೆಯೋಣ
ಪ್ರೇಮ ಸಾಗರದಲ್ಲಿ--
ಮಿಾಯೋಣ ಬಾ !

7

ಹೃದಯಗಳ ಮಿಡಿಸೋಣ
ಆತ್ಮಗಳ ನುಡಿಸೋಣ
ಜೀವನದ ಹಾಡೊಂದ--
ಹಾಡೋಣ ಬಾ !

8

ಹಿತವನ್ನೆ ನುಡಿಯೋಣ,
ನುಡಿದಂತೆ ನಡೆಯೋಣ’
ಆದರ್ಶ ಜೀವನವ--
ನಡೆಸೋಣ ಬಾ !

9

ತರತಮವ ತೊರೆಯೋಣ
ಸಮರಸವ ಮೆರೆಸೋಣ
ಹನಿಯಲ್ಲಿ ಹನಿಯಾಗಿ.....
ಬೆರೆಯೋಣ ಬಾ !

10

“ನಿನ್ನಿರವೆ ನನದೆಂದು,
ನನ್ನಿರವೆ ನಿನದೆಂದು”
ಕಡೆತನಕ ಕೈಹಿಡಿದು--
ನಡೆಯೋಣ ಬಾ !

“ಮಧುಚಂದ್ರ”

ವೇದದಲ್ಲಿ ಸೃಷ್ಟಿ ನಿರೂಪಣೆ

ಮೂಲ : ಬಿ. ನಾರಾಯಣ ಐಯ್ಯಂಗಾರ್ ಅವರು

ಅನುವಾದ : ನಾ. ಭಾ. ಚಂದ್ರಶೇಖರಾಚಾರ್ಯ, ಮಂಡ್ಯ; ಇವರಿಂದ

('ಸಿದ್ಧಗಂಗಾ' 1967ರ 2ನೇ ಸಂಚಿಕೆಯಿಂದ ಮುಂದುವರಿದುದು)

ಋಗ್ವೇದದ iv, 58,3ರಲ್ಲಿ "ಮಹೋ ದೇವ" (ಅಗ್ನಿಯು)ನು ಮರ್ತ್ಯರನ್ನು ಪ್ರವೇಶಿಸಿದನು (ಮಹೋದೇವೋ ಮರ್ತ್ಯಾಗ್ಂ ಆವಿವೇಶ) ಎಂದೂ, ಅಗ್ನಿಯೇ ಈ ದ್ಯಾವಾ ಪೃಥಿವಿಗಳಿಗೆ ಅವಲಂಬನವಾಗಿರುವನೆಂದೂ, ಅವನೇ ಎಲ್ಲರ ಜೀವ, "ವಿಶ್ವಾಯು" ವೆಂದೂ, ಅವನೇ ಗುಹೆ ಗುಹೆಗಳನ್ನು ಪ್ರವೇಶಿಸಿರುವನೆಂದೂ (1, 67,3) ಹೇಳಲ್ಪಟ್ಟಿದೆ.

ಸಾಮಾನ್ಯಾಗ್ನಿಯನ್ನು ಯಾರೂ ಈ ರೀತಿ ಹೊಗಳರು. ಇಲ್ಲಿ ಅಗ್ನಿಯೆಂಬುದು ಸರ್ವಜ್ಞ ಪರಮೇಶ್ವರನ ಒಂದು ಸಂಕೇತ. 'ಗುಹೆ ಗುಹೆ' ಗಳೆಂದರೆ "ಪ್ರತಿಯೊಂದರ ಹೃದಯಕ್ಕೂ" ಎಂದರ್ಥ. (ಹೃದಯ ಎಂಬರ್ಥದಲ್ಲಿ ಗುಹಾ ಪದವನ್ನು ಪ್ರಯೋಗಿಸಿರತಕ್ಕ ಮಹಾ ನಾರಾಯಣೋಪನಿಷತ್ ಹಾಗೂ ಇತರ ಉಪನಿಷತ್ತುಗಳಲ್ಲಿ ಬರುವ "ಅಂತಶ್ಚರತಿ ಭೂತೇಷು; ಗುಹಾಯಾಂ ವಿಶ್ವಮೂರ್ತಿಷು" ಎಂಬ ವಾಕ್ಯದೊಂದಿಗೆ ಹೋಲಿಸಿ.)

ಋಗ್ವೇದದಲ್ಲಿಯ ಹಿರಣ್ಯ ಗರ್ಭನೆಂದರೆ ಎಲ್ಲಾ ರೂಪಗಳ ಗರ್ಭದಲ್ಲಿರುವ–ಎಲ್ಲಾ ಜೀವಿಗಳ ಹೃದಯ ಗರ್ಭದಲ್ಲಿರುವ ಆತ್ಮ ಅಥವಾ ಸುವರ್ಣಶಿಶು. ಋಗ್ವೇದದ ದಶಮ ಮಂಡಲದ 121 ನೇ ಸೂಕ್ತವಾದ ಹಿರಣ್ಯ ಗರ್ಭ ಸೂಕ್ತದ 10ನೇ ಮಂತ್ರವು ಹೀಗೆ ಹೇಳುತ್ತದೆ :–

ಪ್ರಜಾಪತೇ ನತ್ವದೇತಾನ್ಯನ್ಯೋ ವಿಶ್ವಾ
ಜಾತಾನಿ ಪರಿತಾ ಬಭೂವ।
ಯತ್ಕಾಮಾಸ್ತೇ ಜುಹುಮಸ್ತನ್ನೋ ಅಸ್ತು
ವಯಂ ಸ್ಯಾಮ ಪತಯೋ ರಯೀಣಾಂ

"ಎಲೈ ಪ್ರಜಾಪತಿಯೇ! ನೀನಲ್ಲದೆ ಮತ್ತ್ಯಾರೂ ಈ ಎಲ್ಲಾ ಜೀವಿಗಳಲ್ಲಿ ವ್ಯಾಪಕವಾಗಿಲ್ಲ. (ಪರಿಬಭೂವ (ಪರಿಭೂ ಎಂದರೆ ಒಳಗೆ–ಹೊರಗೆ, ಎಲ್ಲ ಕಡೆ ವ್ಯಾಪಕವಾಗಿರುವುದು).

ಪುನಃ x, 81,1 (ವಿಶ್ವಕರ್ಮ ಸೂಕ್ತ) ರಲ್ಲಿ 'ಪ್ರಥಮಚ್ಛದವರಾಗ್ಂ ಆವಿವೇಶ', ಎಂದರೆ 'ಪ್ರ... ಮನು ಆ ಅನಂತರದ ಸರ್ವ ಜೀವಿಗಳನ್ನೂ ಹೊಕ್ಕನು' ಎಂದು ಹೇಳಲ್ಪಟ್ಟಿದೆ.

ಮನುಷ್ಯನು ತಾನು ಒಂಟಿಯಾಗಿ, ಸ್ವಾರ್ಥಿಯಾಗಿದ್ದಾಗ ಮಾತ್ರ ಅವನು ಇತರರನ್ನು ದ್ವೇಷಿಸಿ ಕೆಡಿಸಿ, ಕೊಲ್ಲುವುದು ; ಆದರೆ ಅವನು ತನ್ನನ್ನು ವಿಸ್ತರಿಸಿಕೊಂಡು ಇವೆಲ್ಲವೂ ನಾನೇ ಆಗಿದ್ದೇನೆ ಎಂದು

ಹೇಳಿದಾಗ, ಇತರರು ನ್ಯಾಯವಾಗಿ ಅನುಭವಿಸುವುದ ನ್ನೆಲ್ಲಾ ಇವನೇ ಅವರ ರೂಪದಲ್ಲಿ ಅನುಭವಿಸುತ್ತಾನೆ; ಮತ್ತು ಮನಸಾ ಅವೆಲ್ಲವೂ ತಾನೇ ಆಗಿರುವುದರಿಂದ ಸಾಧ್ಯವಾದಷ್ಟೂ ಅವರಲ್ಲಿಲ್ಲದಿರುವುದನ್ನು ಇವನೇ ಒದಗಿಸುತ್ತಾನೆ. ಇದು ಅವನ "ವಿಶ್ವರೂಪತಾ" (ನಾನಾ ರೂಪತ್ವ); ತನ್ನನ್ನು ತಾನು ವ್ಯಾಪಕವಮಾಡಿ ಕೊಂಡ ರೀತಿ. ತಪಸ್ವಿಯ ಅಥವಾ ಜ್ಞಾನಿಯ ಪರಮೋಚ್ಚಧ್ಯೇಯವೇ ಇದೆನಿಸಿ, ತಪಸ್ಸಿನ ಫಲವಾಗಿ ದೇವರು ಇದೆಲ್ಲಾ ಆದನೆಂಬುದು ಕೇವಲ ಉಚಿತವೇ ಆಗಿದೆ. ಆದ್ದರಿಂದಲೇ ಅವನು ತಪಸ್ಸುಮಾಡಿ ಇದೆಲ್ಲಾ ಆದನು ಎಂದು ಹೇಳಲ್ಪಟ್ಟಿರುವುದು. ಹೀಗೆ ದೇವರು ಈ ಎಲ್ಲಾ ಜೀವಿಗಳಾದನು ಎಂದರೆ ಅವರುಗಳ ಪಾಪಾ ತ್ಮಕ ಸ್ಥಿತಿಯನ್ನು ಪಡೆದನು ಎಂದು ಅರ್ಥವಲ್ಲ, ಅವನು ವಿಶ್ವಪ್ರೇಮವನ್ನು ಒಳಗೊಂಡಿದ್ದಾನೆ ಎಂಬ ನಿಗೂಢ ರಹಸ್ಯ, ಆ ವಿಶ್ವ ಪ್ರೇಮವು ಸಾಧಿತವಾಯಿ ತೆಂದರೆ ಆ ಪಾಪಸ್ಥಿತಿಗಳೆಲ್ಲಕ್ಕೂ ಅಂತ್ಯವೇ.

ವೈದಿಕ ಋಷಿಯ ದೇವ ಭಾವನೆಯು ಅವನು ಕವಿಯೆಂಬುದಷ್ಟು ಮಾತ್ರವಲ್ಲ, ಅವನು ನಮ್ಮ ತಂದೆಯೂ ಹೌದೆಂಬುದು. ಎಲ್ಲ ಪುರಾತನ ರಾಷ್ಟ್ರ ಗಳೂ ದೇವರನ್ನು ಈ ಪ್ರೀತಿಯ ಮಾತಿನಿಂದ ಕರೆದಿರು ವರಲ್ಲದೆ, ವಿಶ್ವಕರ್ಮ ಸೂಕ್ತಗಳಲ್ಲೂ ದೇವರನ್ನು "ಯೋ ನಃ ಪಿತಾ ಜನಿತಾ ಯೋವಿಧಾತಾ"ಎಂಬುದಾಗಿ ಕರೆದಿರುವುದು ಕಾಣಬರುತ್ತದೆ. ತಾಯಿಯೆಂಬುದಿಲ್ಲದೆ ತಂದೆಯೆಂಬ ಮಾತು ಬರಲಾರದು. ಆದರೆ ಪರಿಪೂರ್ಣ ನಿಂದ ಹೊರಗೆ ಇನ್ನೊಂದಿರುವುದು ಹೇಗೆ ಸಾಧ್ಯ? ತನ್ನ ಹೊರತು, ಹೆಂಡತಿ ಅಥವಾ ಬೇರೊಂದು ಸಂತೋ ಷವನ್ನು ಪಡೆಯಲಾರನು. ಆದ್ದರಿಂದ ಅವನ ಹೆಂಡತಿ ಯಾದನು. 'ಏಕಾಕೀ ನ ರಮತೇ। ಸ ದ್ವಿತೀಯ ಮೈಚ್ಛತ್।' ಬೃ-ಉ. ಇದರಿಂದಲೇ ಬೃಹದಾರಣ್ಯ ಕದ I, 4ರಲ್ಲಿ ಹೇಳಿರುವಂತೆ ತನ್ನನ್ನು ಎರಡಾಗಿಸಿ ಕೊಂಡನೆಂಬ ಭಾವನೆಯು ಹುಟ್ಟಿರುವುದು. ಅದೇ ಉಪನಿಷತ್ತು ಹೀಗೆ ಮುಂದುವರಿದಿರುತ್ತದೆ:-

"ಅವನು (ಆತ್ಮಾ - ಪುರುಷನು) ತನ್ನನ್ನು ಎರಡಾಗುವಂತೆ ಮಾಡಿಕೊಂಡನು. (ಆತ್ಮಾನಂ ದ್ವೇಧಾ ಅಪಾತಯತ್), ಇದರಿಂದ ಪತಿ-ಪತ್ನಿಯರಾ ದರು (ತತಃ ಪತಿಶ್ಚ ಪತ್ನೀಚಾಭವತಾಂ) ಅವನು ಅವ ಳನ್ನು ಪ್ರೀತಿಸಿದನು, ಅದರಿಂದ ಮನುಷ್ಯರು ಹುಟ್ಟಿದರು (ತಾಂ ಸಮಭವತ್। ತತೋ ಮನುಷ್ಯಾ ಅಜಾಯಂತ) ಅವಳು ಯೋಚಿಸಿದಳು :- 'ಕಥಂನುಮಾತ್ಮನ ಏವ ಜನಯಿತ್ವಾ ಸಂಭವತಿ? ಹಂತ! ತಿರೋಽಸಾನೀತಿ'. ತಾನೇ ಸೃಷ್ಟಿಸಿದ (ಆ ಕಾರಣದಿಂದ ಮಗಳಾದ) ನನ್ನನ್ನು ಅವನು ಪ್ರೀತಿಸುವುದೇ? ನಾನು ಅವನಿಂದ ದೂರ ಓಡುವೆ ಅಥವಾ ಅದೃಶ್ಯಳಾಗುವೆ". ಅವಳು ಹಸುವಾದಳು, ಅವನು ಹೋರಿಯಾದನು (ಸಾ ಗೌರಭ ವತ್, ಋಷಭ ಇತರಃ) ಈ ರೀತಿಯಾಗಿ ಅವಳು ಎಲ್ಲಾ ಪ್ರಾಣಿಗಳ ಸ್ತ್ರೀ ರೂಪವನ್ನು ತಾಳಿದಳು, ಅವನು ಎಲ್ಲಾ ಪುಂ ರೂಪ ತಾಳಿದನು. ಈ ವಿಧವಾಗಿ ಉಂಟಾದ ದಂಪತಿಗಳಿಂದ ಈ ಸೃಷ್ಟಿಯು ಆರಂಭ ವಾಯಿತು (ತತ್ ಸರ್ವಮಸೃಜತ). ಬೃಹದಾರಣ್ಯ ಕೋಪನಿಷತ್ತಿನ ಈ ಭಾಗವು ಶತಪಥ ಬ್ರಾಹ್ಮಣ (ವೇದಭಾಗ)ದಿಂದ ತೆಗೆದು ಕೊಳ್ಳಲ್ಪಟ್ಟಿರುವಂತೆ ಕಾಣುತ್ತದೆ. ಅಂದರೆ ಈ ಕಥೆಯು ಉಪನಿಷತ್ತಿ ಗಿಂತ ಹಳೆಯದೆಂದಾಯಿತು.

ಈ ಕಥೆಯನ್ನು ಹೇಳುವುದಕ್ಕೆ ಮುಂಚೆ, ಉಪನಿ ಷತ್ತು, ಪುರುಷನೆಂದರೆ-ಪೂರ್ವಃ ಹಿಂದೆ ಎಂದರೆ ಎಲ್ಲ ಕ್ಕಿಂತ ಮೊದಲು, ಪಾಪಗಳನ್ನೆಲ್ಲಾ (ಉಷ್) ಸುಟ್ಟ ವನು ಎಂದು ವ್ಯಾಖ್ಯೆ ಮಾಡಿದೆ. ಇದು ಪುರುಷ ಎಂಬ ಪದವನ್ನು ವಿಂಗಡಿಸಿ, ಪುರುಷ ಎಂದರೆ ಚನ್ನಾಗಿ ಉರಿಸುವವನು ಎಂಬ ಅರ್ಥವನ್ನು ದೃಢಪಡಿಸಲು ಮಾಡಿರುವ ಒಂದು ದ್ವಂದ್ವಾರ್ಥ ವಿವರಣೆ ಮಾತ್ರ. ಆದರೆ "ಪುರುಷ"ನೆಂಬುದರ ನಿಜವಾದ ಅರ್ಥವು ಪರ ಮಾತ್ಮನಿಗೆ ಅನ್ವಯವಾದಂತೆ "ಎಲ್ಲ ಶರೀರಗಳಲ್ಲಿಯೂ ಇರುವವನು" ಎಂದಾಗುತ್ತದೆ. ಇದೇ ಉಪನಿಷತ್ತಿನಲ್ಲಿ ಉದ್ಧೃತವಾಗಿರುವ, ಪುರುಷ ಶಬ್ದವನ್ನು ವಿವರಿಸಿರುವ ಒಂದು ಶ್ಲೋಕವಿರುತ್ತದೆ:-

ಪುರಶ್ಚಕ್ರೆ ದ್ವಿಪದಃ, ಪುರಶ್ಚಕ್ರೆ ಚತುಷ್ಪದಃ।
ಪುರಸ್ಸ ಪಕ್ಷೀಭೂತ್ವಾ, ಪುರಃ ಪುರುಷ ಆವಿಶತ್॥

ಇದರ ಅರ್ಥ :—ಪುರುಷನು ಎಲ್ಲ ದ್ವಿಪದ, ಚತುಷ್ಪದ ಪ್ರಾಣಿಗಳನ್ನೂ, ಎಲ್ಲಾ ಪುರಗಳನ್ನೂ ಮಾಡಿ, ತಾನು ಪಕ್ಷಿಯಾಗಿ ಅವುಗಳನ್ನು ಪ್ರವೇಶಿಸಿದನು. ಈ ಶರೀರವೆಂಬ ಪುರದಲ್ಲಿ ವಾಸಿಸುತ್ತಾನಾದ್ದರಿಂದ ಮನುಷ್ಯನು ಪುರುಷನೆನಿಸಿದ್ದಾನೆ.

ಈ ಧ್ವಂದ್ವಾರ್ಥ ವಿವರಣೆಯ ಮೂಲಕ ಹೇಳಲುದ್ದೇಶಿಸಿರುವ ವಿಶೇಷಾರ್ಥವೇನೆಂದು ಕಾಣುತ್ತದೆಂದರೆ–ತನ್ನಂತೆಯೇ ಎಲ್ಲ ಪ್ರಾಣಿಗಳನ್ನೂ ಪ್ರೀತಿಸುವ ಅಂತ ರಂಗವಾಸಿಯಾದ ಪರಮಾತ್ಮನು ಸೃಷ್ಟಿಗೆ ಪೂರ್ವ ಇದ್ದನು, ಮತ್ತು ಪಾಪದೂರನಾಗಿದ್ದನು ಎಂಬುದನ್ನು ಸ್ಥಾಪಿಸುವುದಕ್ಕೇ ಆಗಿದೆ. ಇಲ್ಲಿ ಪುತ್ರೀಗಮನ ವಿಷಯವನ್ನು ನಿರೂಪಿಸುವಾಗ ಕವಿಯು ಒಂದು ಎಚ್ಚರಿಕೆಯನ್ನು ವಹಿಸಿ, ಇದನ್ನು ಮಾಡಿದವನು ಪಾಪರಹಿತ (ಪುರಾಉಷ್)ನೆಂದು ಹೇಳಿದ್ದಾನೆ ಮತ್ತೆ ಈ ಒಗಟಿನ ಅರ್ಥವೇನೆಂದರೆ–ಶಬ್ದ ಸೃಷ್ಟಿಕರ್ತನಾದ ಮನಸ್ಸೇ ಬ್ರಹ್ಮನಾಗಿ ತನ್ನ ಭಾಷಾ ಶಕ್ತಿಯಾದ ವಾಕ್ಕಿನೊಂದಿಗೆ ಕೂಡಿದನೆಂದು. ಮನಸ್ಸು ಮತ್ತು ಭಾಷೆ ಇವರೇ ಆ ದಂಪತಿಗಳು. ಅದೇ ಉಪನಿಷತ್ತು (ಬೃ.ಉ.) ಅದೇ ಭಾಗದಲ್ಲಿ ಮುಂದೆ ಹೀಗೆ ಹೇಳುತ್ತದೆ: "ಮನಃ ಏವಾಽಸ್ಯಾತ್ಮಾ ವಾಗ್ಜಾಯಾ" ಅವನ ಮನಸ್ಸೇ ಅವನ ಆತ್ಮಾ, ವಾಕ್ಕೇ ಅವನ ಹೆಂಡತಿ. ತೈತ್ತಿರೀಯ ಸಂಹಿತೆಯಲ್ಲಿ ಅನೇಕ ಕಡೆ ಈ ವಾಕ್ಕೇ ಸರಸ್ವತಿಯೆಂದು ಹೇಳಲ್ಪಟ್ಟಿದೆ. (ಉದಾ: 'ಸರಸ್ವತೀಂ ವಾಕ್ II, 3, II-1; ವಾಗ್ವೈ ಸರಸ್ವತಿ III, 3, 3, 4) ಐತರೇಯ ಬ್ರಾಹ್ಮಣದಲ್ಲಿ ಈ ವಾಕ್ಕನ್ನು 'ಸರಸ್ವತೀ ಪಾವೀರವೀ ಕನ್ಯಾ' ಎಂದರೆ ಕುಮಾರಿ ಎಂಬುದಾಗಿ ಹೇಳಿರುತ್ತದೆ. ಋಗ್ವೇದದ IV 497ರಲ್ಲಿ "ಪಾವೀರವೀ ಕನ್ಯಾ ಚಿತ್ರಾಯುಃ ಸರಸ್ವತೀ ವೀರಪತ್ನೀಧಿಯಾಧಾತ್" ಇತ್ಯಾದಿಯಾಗಿ ಈ ಸರಸ್ವತೀ ಪಾವೀರವೀ ಕನ್ಯೆಯ ವಿವರಣೆಯೇ ಇರುತ್ತದೆ. ಈಕೆಯ ವಿಷಯವನ್ನು ಹೇಳುತ್ತಾ, ತೈತ್ತಿರೀಯ ಸಂಹಿತಾ IV. 1, 11, 2 ರಲ್ಲಿ ಈಕೆಯು "ಚೋದಯಂತೀ ಸೂನೃತಾನಾಂ, ಚೇತಂತೀ ಸುಮತೀನಾಂ" ಎಂದರೆ ಸತ್ಯ–ಸದ್ಭಾವನೆಗಳ ಉತ್ತೇಜಕಳು ಎಂಬುದಾಗಿ ಹೇಳಲ್ಪಟ್ಟಿದೆ. ಇವೆಲ್ಲವನ್ನೂ ಮಾಡಬೇಕಾದರೆ ವಾಕ್ಕು ವಿದ್ಯೆಯೇ ಆಗಬೇಕ. ವಾಕ್ಕಿನ ಇನ್ನೊಂದು ಹೆಸರು 'ಧಿಷಣಾ' ಎಂದಾದ್ದರಿಂದ ತೈ.ಸಂ. V, 1, 8, 2, ಧಿಷಣಾ ಎಂದರೆ ವಿದ್ಯೆಯೆಂದೇ ಹೇಳುತ್ತದೆ. ಅವಳು ಒಂದಾದ ಮೇಲೆ ಮತ್ತೊಂದು ರೂಪವನ್ನು ತೆಗೆದುಕೊಳ್ಳುವಳಾಗಿದ್ದರಿಂದ ಅವಳನ್ನು 'ವಿಶ್ವರೂಪ' ಎಂದಿದ್ದಾರೆ. ವಸ್ತುತಃ ತೈತ್ತಿರೀಯ ಬ್ರಾಹ್ಮಣ II, 7, 15ರಲ್ಲಿ ವಾಕ್ಕನ್ನು ಸ್ಪಷ್ಟವಾಗಿ 'ವಿಶ್ವರೂಪಾ' ಎಂದೇ ಕರೆದಿದ್ದಾರೆ. ಅದರಲ್ಲಿ, ಯಾವ ಪ್ರಜಾಪತಿಯು ಶಿಲ್ಪ ಮತ್ತು ಕಲ್ಪನೆಗಳಿಂದ ಈ ವಿಶ್ವವನ್ನು ಸೃಷ್ಟಿಸಿದನೋ, ಯಾವುದರಿಂದ ತಾನು ವಿಶ್ವರೂಪಾವಾಕ್ಕಿನೊಡನೆ ಒಂದುಗೂಡಿದನೋ, ಆ ಶಿಲ್ಪ ಮತ್ತು ಕಲ್ಪನೆಗಳ ಸ್ತುತಿಯಿದೆ. ಆದರ ಮೂಲಪಾಠ ಈ ರೀತಿಯಿದೆ—

"ಯೇಭಿಶ್ಶಿಲ್ಪೈಃ ಪ್ರಪ್ರಥಾನಾ ಮದೃಗ್ಂಹತ್।
ಯೇಭಿರ್ವಾಚಮಭ್ಯಪಿಗ್ಂಶತ್ಪ್ರಜಾಪತಿಃ।
ಯೇಭಿರ್ವಾಚಂ ವಿಶ್ವರೂಪಾಗ್ಂ ಸಮವ್ಯಯತ್।
ತೇನೇಮ ಮಗ್ನ ಇಹವರ್ಚಸಾ ಸಮಂಗ್ಧಿ॥

ಈಗಾಗಲೇ ಹೇಳಿರುವಂತೆ ದೇವರ ವಿಶ್ವರೂಪವೆಂದರೆ ಆತನು ಎಲ್ಲ ಜೀವಿಗಳ ಹೃನ್ಮಧ್ಯದಲ್ಲಿರುವನೆಂದು ಅರ್ಥ. ತಂದೆ ತಾಯಿಗಳ ರೂಪವೂ ಆ ಹಿರಣ್ಯಗರ್ಭನ ವಿಶ್ವರೂಪವೇ. ಸರಸ್ವತಿ ಎಂದರೆ ಓಡುವುದು, ಹರಿಯು (ಪ್ರವಹಿಸು)ವುದು ಎಂದು ಅರ್ಥ. ಮನಸ್ಸಿನ ಯೋಚನೆಯ ಪ್ರವಾಹವೇ ಮಾತು ಅಥವಾ ವಾಕ್. ಆದುದರಿಂದ ಆ ವಾಕ್ಕಿಗೆ ಸರಸ್ವತಿಯೆಂಬುದು ಯುಕ್ತವಾದ ಹೆಸರು. ಆದಕ್ಕೇ ಪುತ್ರೀ–ಜಾಯಾ ಓಡಿದಳೆಂನು ಹೇಳಲ್ಪಟ್ಟಿರುವುದು.

ಪ್ರಜಾಪತಿಯು ತನ್ನ ಮಗಳ ಗಂಡನಾದನು ಎಂಬ ಈ ಒಗಟೆಯು ಪುರಾತನವಾದ ಋಗ್ವೇದದ I 164, 33; X, 61, 7,ರಲ್ಲಿ—

ಪಿತಾ ಯತ್ಸ್ವಾಂ ದುಹಿತರ ಮಧಿಷ್ಕನ್ ಕ್ಷ್ಮಯಾ ರೇತಾಃ ಸಂಜಗ್ಮಾನೋ ನಿಷಿಂಚತ್" ಇತ್ಯಾದಿಯಾಗಿ ಹೇಳಲ್ಪಟ್ಟಿದೆ. ಈ ಒಗಟೆಯು ಸಹ 'ಪ್ರಜಾಪತಿ' ಎಂಬ ಶಬ್ದದಿಂದ ನೆಯ್ಯಲ್ಪಟ್ಟಿರಬೇಕು. 'ಪ್ರಜಾ' ಶಬ್ದವು ನಿತ್ಯ ಸ್ತ್ರೀಲಿಂಗ ಪದವಾದರೂ, ಸಾಮೂಹಿಕವಾಗಿ

ಹರಿಹರನ ರಗಳೆಯಲ್ಲಿ ಭಕ್ತಿ – (ಪುಷ್ಪರಗಳೆ)

ಹಂಪೆಯ ಹರಿಹರನು ತನ್ನ ಜೀವನ ಹಾಗೂ ಭಕ್ತಿ ಸಾಧನೆಗಳಲ್ಲಿ ತನ್ನದೇ ಆದ ಒಂದು ವಿಶಿಷ್ಟರೀತಿಯಿಂದ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಪರಿಚಿತನಾಗಿದ್ದಾನೆ. ಸರ್ವವನ್ನು ಈಶ್ವರಾರ್ಪಣ ಮಾಡಿ, ರಗಳೆಗಳ ಮೂಲಕ, ಆ ಈಶ್ವರಾರ್ಪಣಮಾಡಿದ ರೀತಿಯನ್ನು ನಮಗೆ ಪರಿಚಯ ಮಾಡಿಕೊಡುವನು. ಬಸವರಾಜ ದೇವರ ರಗಳೆಯಲ್ಲಿ ಈತನ ಜೀವನದ ಒಂದು ಮುಖ ಪರಿಚಯವಾದರೆ, ಪುಷ್ಪ ರಗಳೆಯಲ್ಲಿ ಆತನ ಇನ್ನೊಂದು ಮುಖದ ಪರಿಚಯವು ಉಂಟಾಗುವುದು. "ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಅನವರತ ಪೊಗಳ್ದು ಕೆಡಬೇಡಲೆ ಮಾನವ ನೀನಹರ್ನಿಶಂ ನೆನೆ ಪೊಗಳರ಼್ಿಸೆಮ್ಮ ಕಂಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ" ಭಕ್ತಿರಸದ ಉತ್ಕಟತೆ ತನ್ಮಯತೆಗಳನ್ನು, ಕೊರಗು ಕಳವಳಗಳನ್ನು ಉದ್ಗಾರ ಪುನರುಕ್ತಿಗಳಿಂದ ವಿಶಿಷ್ಟವಾದ ಶೈಲಿಯಲ್ಲಿ ಹರಿಹರನು ವ್ಯಕ್ತಪಡಿಸಿದ್ದಾನೆ. ಭಕ್ತಹೃದಯವನ್ನು ತೆರೆದು ದಣಿವಿಲ್ಲದೆ ಹಾಡುತ್ತಾ ಹಾರುವ ಹಕ್ಕಿಯಂತೆ ಇವನು ತೋರುತ್ತಾನೆ. ಪುಷ್ಪದ ರಗಳೆಯಲ್ಲಿ ಹರಿಹರನ ದೈನಂದಿನ ವ್ಯಾಪಾರದ ಪರಿಚಯ ನಮಗೆ ಉಂಟಾಗುವುದು. ಅರುಣೋದಯಕ್ಕೆ ಮುಂಚೆ ಎದ್ದು ಈತ ಶಿವಪೂಜೆಗೆ ಅಣಿಮಾಡುವ ಶಿವಪೂಜೆ ಮಾಡುವ ವಿಧಾನವು ಹೃದ್ಯವಾಗುವಂತೆ ರಚಿತವಾಗಿದೆ.

ಪೊಚ್ಚಪೊಸ ಪೂಗಳಿಂದ ಅರ್ಚಿಸುವುದಕ್ಕಾಗಿ ಹರಿಹರನು ಹೂವನ್ನು ಆಯಲು ಹೊರಟಿದ್ದಾನೆ. ಫಾಳದಲ್ಲಿ ಭಸಿತೋದ್ಧೂಳನ ಮಾಡಿ, ಕೈಯಲ್ಲಿ ಹೂಬಟ್ಟೆಯನ್ನು ಹಿಡಿದು ಶಿವಗೀತೆಯನ್ನು ಹಾಡುತಿದ್ದಾನೆ. ಸುರಚಿರಾಮೋದದ ರಸಾಂಭೋಧಿಯಾದ ಕಂಪಿನ ಪರಮಸೀಮೆಯಾದ ಸುರತರು ಸುಗಂಧದ ತವರ್ಮನೆ ಎನಿಸಿದ ಪೂದೋಟವನ್ನು ದೂರದಿಂದ ಕಂಡು ಸೊಂಪೇರಿ,

ಲೇಖಕ :

ಬಿ. ಎ. ರಂಗನಾಥ

ಆದ ಪರಮಾನಂದದಿಂದ ಒಲಿದು ನಲವೇರಿ ಪುಟವೆದ್ದು ಅಡ್ಡದಿಡ್ಡಿಯಾಗಿ ಸರಿದಾಡಿದ್ದಾನೆ. ನಟನಂತೆ ಉಗ್ಗಡಿಸಿ ಕುಣಿಕುಣಿದು ಕೂಗಾಡಿದ್ದಾನೆ. ಪುಷ್ಪಗಳಿಗೆಲ್ಲಾ ನಮಿಸುತಿದ್ದಾನೆ. ದೊಡ್ಡಪತ್ರಕೆ 'ನಮೋ' ಎನ್ನುತಿದ್ದಾನೆ. ಆಗ ಕಂಪು ಬರಲು ಹರಹರಾ ವಿರೂಪಾಕ್ಷಾ ನಿನಗೆ ಎನ್ನುತ್ತಾ ಅಲ್ಲಿಯೇ ಶಿವನಿಗೆ ಆ ಕಂಪಿನಿಂದ ಉಂಟಾದ ಆನಂದವನ್ನು ಅರ್ಪಿಸಿದ್ದಾನೆ. ಒಂದೊಂದು ರೋಮಾಂಚಕಾರಿಯಾದ ಆನಂದವನ್ನೂ ಶಿವಾರ್ಪಣ

ಮಾಡಿ, ಶಿವಾರ್ಪಣದ ಆನಂದದಲ್ಲಿ ತಲ್ಲೀನನಾಗಿದ್ದಾನೆ ಚಂದ-ಚಂದದ ಕುಸುಮವೃಂದವನ್ನು ನೋಡುತ್ತಾ ಎನಗಿಂತು 'ಕರುಣಿಸಿದನೇ ಸದಾಶಿವ' ಎಂದು ಮನದೊಳಗೆ ಹೆರುಷದಿಂದ ನಲಿದು-ನಲಿದು ನೋಡುತಿದ್ದಾನೆ

ಅಳಿ ಎರಗದ ಅನಿಲನಲುಗದ ರವಿಕರಂಪುಗದ ಬೆಳೆ-ಬೆಳೆದು ನಳನಳಿಸುವ ಮಘಮಘಿಸುತ್ತಾ ಕಂಪಿಡಿದ ಇರವಂತಿಯನ್ನು ಕಂಡು ಅದನ್ನು ಪ್ರಾರ್ಥಿಸುತ್ತಾನೆ. "ಪರಶಿವಂಗೆ ಓಲೈಪ ಪೂವನೀವೆ" ಎಂದು. ಸಂಪಿಗೆಯ ಮರ ಇದ್ದಕಡೆ ಬಂದು ಕೇಳುತ್ತಾನೆ, "ಏನವ್ವ ಸಂಪಿಗೆಯೇ ಶಿವನ ಸಿರಿಮುಡಿಗಿಂದು ನೀನೀವ ಪೊಸ ಕುಸುಮಮಂ ನೀಡು" ಎಂದು ದೀನನಾಗಿ ಪ್ರಾರ್ಥಿಸುವನು. ಹೂವನ್ನು ಬಿಡಿಸುವಾಗಲೂ, ಬಗೆಬಗೆಯ ಹೂಗಳಿಂದ ಮತ್ತಷ್ಟು ಆನಂದಿಸುವಾಗಲೂ, ಆ ಹೂ ಬಿಟ್ಟ ಬಳ್ಳಿಗೆ, ಗಿಡಕ್ಕೆ ನೋವಾಗದಂತೆ ಬಿಡಿಸುವನು. 'ಆನಂದದಿಂದ ಶಿವಲಿಂಗ ಕರ್ಚಿಪೆ' ಎಂದು ಹೇಳುವನು. ಶಿವನಿಗೆ ಈ ಹೂಗಳನ್ನು ಅರ್ಪಿಸಿ ತನ್ನ ಬಾಳನ್ನು ಅರ್ಪಿಸಲು ಅವಕಾಶವಿತ್ತ ತರುಲತೆಗಳಿಗೆ ಆನಂದವನ್ನೂ ಕೊಡುವ ಉದಾರ ಸರಳತನ ಹರಿಹರನಲ್ಲಿ ಮೂಡಿಬರುತ್ತಇದೆ. "ಪರಿಮಳದ ಕಣ್ಪಂಗರೆಯ ಬಾರವ್ವ" ಎಂದು ಕುಂಕುಮದ ತಾರೆಗಳಂತಿದ್ದ ಸೇವಂತಿಯನ್ನು ಕರೆಯುವನು. ತನಗಾಗಿ ಅಲ್ಲ ಆ ಹೂ, ಅದು ಕುಲಪತಿಯ ಜಡೆಗಳೊ. ದೇಸಂಗೆ ದೇವರ ಶಿಖಾಮಣಿಯ ಜಡೆಮುಡಿಗೆ.

ಅದೇ ಮಲ್ಲಿಕಾಲತೆ-ವಿರೂಪಾಕ್ಷ ನಿನಗೆ. ಅದೇ ಮಾಧವೀಲತೆ ಅದೂ ನಿನಗೆ ವಿರೂಪಾಕ್ಷ. ಕಂಪಿನ ನಿಧಿ ಎನಿಸಿದ್ದ ಮಲ್ಲಿಗೆಯ ಮುಂದಕ್ಕೆ ಬಂದು ಅದನ್ನು ಆಯ್ದು ಅವುಗಳ ಸುಗಂಧದಿಂದ ಮೆಲ್ಲಮೆಲ್ಲನೆ ನೋಡುತ ಅಲ್ಲಲ್ಲಿ ಕುಣಿವುತ್ತ, ಅದಿರ್ಗಂತಿಯನ್ನು ತುಂಬಿತುಳುಕದ ಮುನ್ನ ಆನಂದನಿಧಿ ಶಿವನಿಗೆ ಕೊಡೆಂದು ಪ್ರಾರ್ಥಿಸುತ್ತಾ, ವಿಾಸಲನವ ಸುಗಂಧವನ್ನು ನೀಡೆಂದು ಕೇಳುತ್ತಾ ಮುಖವೈದರವಂಗೆ ಸಂದಲ್ಲಿ ಬರ್ದುಂಕುವೆನೆನ್ನುತ್ತಾ ಕೊಂಡಾಡುತ್ತ ಬರುತ್ತಿದ್ದಾನೆ.

ಕೇತಕಿಯ ಕುಸುಮಗಳನ್ನು ಕೈಕೊಂಡು ಹೊರಗೆ ಮುಳ್ಳೊಳಗೆ ಕಂಪಕ್ಕಕ್ಕು ನಿನ್ನಪರಿ ಎಂದು ಪದ್ಮಳಿಯಿ ರಲು ಅದನ್ನು ಕಂಡು ತಾರೆಗಳ ಮೊಳೆಗಳಂತಿರ್ದ ಪದ್ಮ ಗಳನ್ನು ಹಾರೈಸುತ್ತಕೊಂಡು, ಮುಡಿವಾಳದಲ್ಲಿ ನಿಂದ 'ಬೇರೆ ಬಲ್ಲವರ್ಗೆ ನೀನೆಲೆದೋರಲೇಕೆ' ಎಂದು ಪರಿವ ಳದ ಬೇರುಗಳನ್ನು ಮನೆವಾರೆ ತಿರಿಯುತ್ತಾ "ದವನವೇ ಶಿವನ ಪರಿಮಳದ ಹಬ್ಬವೇ ಬಾರ, ಭುವನ ದೊಳ್ ನಿನಗೆ ಸರಿಯಿಲ್ಲ ಸೌರಭಸಾರ" ವೆನ್ನುತ್ತಾ ಏನೆನ್ನ ಹೊನ್ನೆ, ಸುರಹೊನ್ನೆ ಪರಿಮಳದ ಅರಸಿ, ನಿ ಮುನ್ನ ಪುಲಿಗೆರೆಗೆ ಸೋಮಯ್ಯನಂ ಕರೆಸಿಕೊಂಡ ಸದ್ಭ ಕ್ತಿಯೆಂದು ಹೊಗಳುತ್ತಾ ನಡೆತರುತ್ತಿದ್ದಾನೆ

ಕಮಲವೇ ಹರಿಗೆ ಚಕ್ರವಿತ್ತ ಶಿವನ ಪದಕ್ಕೆ ಸಾರ್ವುದುಚಿತಂ ಎಂದು ಹೇಳುವನು. ಅಂಬುಜವನ್ನು ಎತ್ತುತ್ತಾ "ನೆಯ್ದಿಲೆಯೇ, ಶಿವನಲ್ಲಿ ಗೈಯ್ದಲೇ ಬ ದಪ್ಪೆ" "ಒಯ್ದೊಡೇ ನಂ ಲಂಚವೀವೆ" ಎನ್ನುವನು ಬೆಂಗಳಿಗಲೇ ಬಾರ ಶಿವನೊಲವೇ ಎಂದು, ಮಂಗಳವ ಯುವಾದ ಹೂವನ್ನು ಕೊಂಡು, ಸಿಂದು ಬಂದು ನಿರ್ಮ ಲವಾದ ಸ್ಥಾನಕ್ಕೆ ಬರುವನು

ಹೂವನ್ನು ಆ ಪವಿತ್ರವಾದ ಕೆಲಸ ಮುಗಿ ಮೇಲೆ ಹರಿಹರನ ಭಕ್ತಿ ತನ್ನ ಉತ್ಕಟತೆಯನ್ನ ವತ್ತಷ್ಟು ಹೆಚ್ಚಿಸುವುದು. ಹೂವನ್ನು ಅಂದವರಿತ ಅಂದ ಕೆಡದಂತೆ ಕಟ್ಟುವಾಗಿನ ಪರವಶತೆಯು ಭಕ್ತಿಯ ಇನ್ನೊಂದು ಮುಖ. ಅದರ ಇನ್ನೊಂದು ಅನುಭ ವನ್ನು ಹೀಗೆ ಸಂಗ್ರಹಿಸಬಹುದು.

''ಕೈಮುಟ್ಟಿ ಮುಟ್ಟದೆ ಮನಂ ಮುಟ್ಟಿ ಕಟ್ಟುತ
ಕೈಮರೆದು ಪೂ ಬೀಳೆ ಮಿಗೆ ಸತ್ತು ಹುಟ್ಟುತ
ನೋಡಿದೊಡೆ ಪೂ ಬಾಡುಗೆಂದು ಕಣ್ಮುಚ್ಚುತ
ನಾಡೆ ನೆನೆದೊಡೆ ಕುಂದುಗೆಂದು ಮನಬಿಚ್ಚುತಂ

ಚೆಂದುಳ್ಳ ಪೂ ಮಾಲಿಕೆಯ ಗೈದು ಸಡಗರಿ

ಮೆಲ್ಲನೆ ಅಲುಗದೆ ಪುಷ್ಪ ಒಂದಿರದಂತೆ ಕಟ್ಟಿ ಶಿವನ ಮನೆಗೆ ಬಂದು ಬಾಗಿಲಿನಲ್ಲಿ ನಿಂದು ಶಿವನು ಏಳು

ಹಾಗೂ ಕಾದಿರುವನು. ಶಿವನನ್ನು ಎಚ್ಚರಿಸುವಲ್ಲಿ ಹರನು ಮಾತನಾಡುವುದು ಬಹು ಆತ್ಮೀಯವಾ ಶಿವನನ್ನು ಒಬ್ಬ ಮಗುವನ್ನು ಮಾತನಾ ಎಷ್ಟು ಸರಳವಾಗಿದೆ. ಪ್ರೇಮಭರಿತವಾಗಿದೆ.

"ಏನೆನ್ನ ಶಿವನೆ, ಉಪ್ಪವಡಿಸಿದರ್ಾ ತಂದೆ,
ಏನಯ್ಯಾ ತಳುವಿರ್ದನೆನುತಲಿರ್ದಾತಂದೆ,
ಅಳಿಗಳೆರಗದ ಗಂಧವಹನಲುಗದಲರ್ಗಳಂ
ಸಿ ತಂದೆಂ ತಂದೆ ದೇವ ಪೊಸಪೂಗಳಂ,"

ಎಂದು ಬಿನ್ನವಿಸಿ ಹೊಸ ಸೇವಂತಿಯ ಹೂವಿನ ನೀರಿನಿಂದ ಮುಖವನ್ನು ತೊಳೆಸುವನು. ಹೊಸ ಹೂವಿನ ಪರಾಗದ ವಿಭೂತಿಯ ತಿಲಕವನ್ನು ಇಡುವನು ಣವಾಗಿ ಒಪ್ಪುವಂತೆ ಶಿವನ ಸಿರಿಮುಡಿಯನ್ನು ದಿಂದ ಸಡಿಲಿಸುವನು. ಕೆಂಜೆಡೆಗಳನ್ನು ನೋವಾ ಂತೆ ಅಲಂಕರಿಸುವನು; ಶಿವನ ಶಶಿಕಳೆ ನೋಯ ತೆ ಮೆಲ್ಲನೆ ಹಿಕ್ಕುವನು. ಸುರನದಿ ತುಳುಕದಂತೆ ಕ್ಕುವನು. ಹೊಸ ಪಡ್ಡವಳಿಯ ಪರಿಮಳದ ಕತ್ತುರಿ ನ್ನು ಇಕ್ಕುವನು. ತಣ್ಪುಮಾಡಿ ಪಸಿಗಿಳಿದ ಜಡೆ ನ್ನು ಗಂಟುಹಾಕುವನು. ಇರುವಂತಿಯನ್ನು ಸಿರಿ ಡಿಯಲ್ಲಿ ಸಿಕ್ಕಿಸುವನು. ಮಲ್ಲಿಗೆಯ ಪರಿಮಳ ದ ಚಂದನವನ್ನು ಒಪ್ಪವಾಗಿ ಇಟ್ಟು, ಮಲ್ಲಿಗೆಯ ಗ್ಗಗಳ ನಾಗಕುಂಡಲವನ್ನು ಇಟ್ಟು, ಜಾದಿಯ ಗಂಧದಿಂದ ಮೃಗಮದವನ್ನು ಒಲ್ದು ಇತ್ತು, ದರದಿಂದ ಮಾಧವಿಯ ಮುದ್ರಿಕೆಯನ್ನು ಒಸೆದಿತ್ತು, ಲಗಳನ್ನು ಚರಣ ಕಮಲದಲ್ಲಿ ಒಪ್ಪವಾಗಿ ಇಟ್ಟು ಮುದಗಳನ್ನು ಸಮೀಪದಲ್ಲಿ ಶೃಂಗಾರಮಾಡಿ, ಮಿಕ್ಕ ಪ್ಪಗಳನ್ನು ಅಂದ ಕೆಡದಂತೆ ಓರಣವನ್ನು ಮಾಡಿ, ಹರನು ಶಿವನನ್ನು ಆರೋಗಣೆಗೆ ಏಳುವಂತೆ ದೂಪ- ಮುವನ್ನು ಹಾಕಿ ಬಿನ್ನವಿಸಿಕೊಳ್ಳುವನು.

"ದೇವ ಸುಕುಮಾರ ಶಶಿಶೇಖರ ವಿರೂಪಾಕ್ಷ
ದೇವ ಪರಿಮಳ ವೃಂದ ಸೇವಿತ ವಿರೂಪಾಕ್ಷ"

ಎಂದು ಹೊಗಳುತ್ತಾ ಹೊಂಗುತ್ತ ಹಾಡುವನು ಸನ್ನಿವೇಶದಲ್ಲಿ ಹರಿಹರನ ಸ್ಥಿತಿಯನ್ನು ನೋಡಿದರೆ ಭಕ್ತಿಯ ಸುಖಕ್ಕಿಂತ ಹೆಚ್ಚಿನ ಸುಖ ಇಲ್ಲದೆ ಎಂದು ಎನಿಸುವುದು ದೇವನ ಸನ್ನಿಧಿಯಲ್ಲಿ ಅಮರಾವತಿಯ ಹಾಗೂ ಧ್ರುವನ ಸುಖದ ಕಲ್ಪನೆಯೂ ಬಾರದೇ ದೇವೇಂ ಹೋಗುವುದು. ಸುರತರುವನು ಒಲ್ಲೆ ಅಮೃತವನ್ನು ಚೆಲ್ಲು, ನಿಧಿಗಳನ್ನುನೂಕು, ಚಿಂತಾಮಣಿಯನ್ನು ಬಿಸಾ ಡು. ಮಧು- ಗಿದುಗಳು ಎಲ್ಲಿಯವು ಏತರವು ಅವು ಏಕೆಂದು ಪರಮ ಭಕ್ತಿಯ ಸೊಕ್ಕಿನಿಂದ ಮಾತನಾಡು ವನು. ಹರನ ಕರುಣೆಯ ಪ್ರಸಾದಕ್ಕಾಗಿ ಹಾತೊರೆಯು ವನು. ಶಿವನಪರವಶತೆಯಲ್ಲಿ ಕಳಕಳವು ಗದ್ಗದವಾಗಿ "ವಿವಿವಿರೂಪಾಕ್ಷ"ಎನ್ನುವನು. ಶಿವನ ರೂಪು ಕಣ್ಣಿನಲ್ಲಿ ನಿಂದು ಶಿವನಮಂತ್ರವು ನಾಲಿಗೆಯಲ್ಲಿ ಮಿಡಿಯುತ್ತಿರಲು ಜಪದ ಆ ಶಬ್ದವು ಕಿವಿಯಲ್ಲಿ ಮಿಡಿಯುತ್ತಿರಲು ಶಿವನ ನೆನಪೇ ಮೂರ್ತಿವೆತ್ತಂತೆ ಇರಲಾಗಿ, ಶಿವನ ಸ್ತುತಿ ಯನ್ನು ಹರಿಹರನು ಆರಂಭಿಸುವನು.

ಸರ್ವ-ಸಮರ್ಪಣಭಾವವು ಹರಿಹರನಿಗೆ ಬಂದು, ತನ್ನ ಇರವೂ ಮರೆತು ಹೋಗುವುದು. ಅವನ ಈ ಮಾತುಗಳಲ್ಲಿ ಅದು ಮೂಡಿಬಂದಿದೆ.

ಎನಗೆ ಸರ್ವಂ ನೀನೆ, ಎನಗೆ ಗರ್ವಂನೀನೆ
ಎನಗೆ ಮಾತೆಯುಂ ನೀನೆ, ಎನಗೆ ಪಿತನುಂನೀನೆ
ಭವ ಭವಾಂತರದೊಳು ನಿನ್ನನರ್ಚಿಸುತಿರ್ಪ,
ತವೆ ಚೆನ್ನ ಭಕ್ತಿಯಂ ಕರುಣಿ ಕರುಣಿಸುಬೊಪ್ಪ
ರಕ್ಷಿಸು ವಿರೂಪಾಕ್ಷ, ವೀಕ್ಷಿಸು ವಿರೂಪಾಕ್ಷ
ದಯೆಗೆಯ್ವಿರೂಪಾಕ್ಷ, ಭಯಹರ ವಿರೂಪಾಕ್ಷ"

ಹೀಗೆ ವಿರೂಪಾಕ್ಷ ಬೇರೆ, ತಾನೇ ಬೇರೆ ಎಂಬ ಭಾವವು ಮಾಯವಾಗಿ, ಹರಿಹರನ ಜೀವನವು, ಶಿವನ ಆರಾಧನೆಯು ಬೇರೆ ಇಲ್ಲವೆಂದೆನಿಸಿ ಮೆರೆಯುತ್ತಿದೆ. ಶಿವನ ಸಾನ್ನಿಧ್ಯದ ಪರಮ ಆನಂದವು ಭಕ್ತಿಯಿಂದ ರೂಪಿತವಾದ ಸ್ತುತಿಯಲ್ಲಿ ಮೈವೆತ್ತು ಹರಿಹರನ ಜೀವನ ವನ್ನು ಪಾವನ ಮಾಡುತ್ತಿದೆ ಪುಷ್ಪರಗಳೆ ಹರಿಹ ರನ ಭಕ್ತಿಯ ಪುಷ್ಪ!



ಕುಷ್ಟರೋಗ

ಲೇಖಕ :

ಬೆಂ. ಗು. ಚಂದ್ರಶೇಖ

''ತೊನ್ನು ಮತ್ತು ಕುಷ್ಟರೋಗಿಗಳಿಗೆ ಪ್ರವೇಶವಿಲ್ಲ" ಎಂದು ಹೋಟಲುಗಳು, ಸಿನಿಮ ಮಂದಿರಗಳು ಮತ್ತು ಸಾರ್ವಜನಿಕ ಕ್ಷೇತ್ರಗಳ ಬಾಗಿಲುಗಳ ಮುಂದೆ ನೇತುಹಾಕಿರುವ ಫಲಕಗಳನ್ನು ನೀವೆಲ್ಲರೂ ನೋಡಿದ್ದೀರಿ. ಇವರಿಗೇಕೆ ಪ್ರವೇಶವಿಲ್ಲವೆಂದು ಯೋಚಿಸಬೇಕಾದುದು ಅತಿ ಮುಖ್ಯವಾದ ವಿಷಯ.

''ಇದು ಮಹಾರೋಗವಾದುದರಿಂದ ಇವರಿಗೆ ಪ್ರವೇಶವಿಲ್ಲ' ಎಂಬ ಸಮಾಧಾನದ ಉತ್ತರವನ್ನು ಕೆಲವೊಮ್ಮೆ ನಮಗೆ ನಾವೇ ಹೇಳಿಕೊಂಡಿರುವ ಸಂದರ್ಭಗಳೂ ಒದಗದೆ ಇಲ್ಲ.

ಇದು ಮಹಾರೋಗವೇ? ಇದನ್ನು ಗುಣಪಡಿಸಲಾಗುವುದಿಲ್ಲವೇ? ಅವರಿಂದ ನಮಗಾಗುವ ಅನಾನುಕೂಲಗಳೇನು? ಅವರಿಗೆ ಸಮಾಜದಲ್ಲಿ ಸ್ಥಾನ-ಮಾನಗಳಿಲ್ಲವೇ? ಎಂದು ಯೋಚಿಸಬೇಕಾದುದು ಪ್ರತಿಯೊಬ್ಬರ ಕರ್ತವ್ಯವೆಂದು ನನಗೆ ತೋರುತ್ತದೆ.

''ರೋಗಗಳು ಪಾಪ ಮತ್ತು ಶಾಪದ ಫಲಗಳು, ದೇವರು ಮಕ್ಕಳನ್ನು ಕೊಡುವಂತೆ ಕಾಯಿಲೆಗಳನ್ನು ಅವರ ಪಾಪಕ್ಕೆ ತಕ್ಕಂತೆ ಕೊಡುವನು" ಎಂಬ ಮೂಢ ನಂಬಿಕೆಯಿಂದ ನಮ್ಮ ಜನತೆ ಆ ರೋಗಿಗಳನ್ನು ದೂಷಿಸುತ್ತಿದ್ದಾರೆ. ಹಾಗಿದ್ದ ಪಕ್ಷದಲ್ಲಿ ಬಂಜೆಯರು ಸಾವಿರ ದೇವರಿಗೆ ಹರಕೆ ಹೊತ್ತರೂ ಅವರ ಬಂಜೆತನವೇಕೆ ನೀಗುತ್ತಿಲ್ಲ? ಈ ರೋಗವು ಬರದಂತೆ ತಡೆಗಟ್ಟಲ
ವುದಿಲ್ಲವೇ? ಎಂಬುದನ್ನು ಪರಿಶೀಲಿಸೋಣ.

ರೋಗಕಾರಕಗಳು

ಕುಷ್ಟರೋಗವು "ಮೈಕೊ ಬ್ಯಾಕ್ಟೀರಿಯ
ಲಾಪ್ರ" ಎಂಬ ಸೂಕ್ಷ್ಮದಂಡಾಣುಗಳಿಂದ ಪ
ವಾಗುತ್ತದೆ. ಇವು ರಚನೆಯಲ್ಲಿ(Morpholo
ಕ್ಷಯ ರೋಗದ ದಂಡಾಣುಗಳನ್ನು ಹೋಲುತ್ತವೆ.
ಆಮ್ಲತ್ವರಿತ (Acid fast) ಚಲನವಿಲ್ಲದ,
ಬಾಗಿದ ಕಂಬಿಯಾಕಾರದ(Curved rod)ಗ
ಗೂಡಲ್ಪಟ್ಟ ದಂಡಾಣುಗಳು. ಈ ದಂಡಾಣುಗ
ರೋಗಿಯ ಶ್ಲೇಷ್ಮ ಹಾಗೂ ಕೀವಿನಲ್ಲಿರುವುವೆಂಬು
ಸೂಕ್ಷ್ಮ ದರ್ಶಕ ಯಂತ್ರದಲ್ಲಿ ಪರೀಕ್ಷಿಸಿ ವಿಜ್ಞಾನಿ
ಸಾರಿದವನು ''ಹ್ಯಾನಸನ್" ಎಂಬಾತನು.
ರೋಗಿಯ ಚರ್ಮದ ಗಂಟುಗಳು(Nodu
ಗಾಯಗಳು, ಶ್ಲೇಷ್ಮ (Nasal mucous
charge) ಹಾಗು ಪಿತ್ತಜನಕಾಂಗ (Li
ಮತ್ತು ಗುಲ್ಮ (Spleen) ಮುಂತಾದುವುಗ
ತ್ತವೆ. ರೋಗಿಯು ಜ್ವರದಿಂದ ನರಳುತ್ತಿರುವ
ದಲ್ಲಿ (Febrile conditions) ರಕ್ತದ
ಈ ದಂಡಾಣುಗಳನ್ನು ಕಾಣಬಹುದು.

ಘಟನೆಗಳು

(Incidences)

ಉಷ್ಣವಲಯ ಮತ್ತು ಸಮಶೀತೋಷ್ಣವಲಯ ಗಳಲ್ಲಿ ಈ ರೋಗವು ಹೆಚ್ಚಾಗಿ ಕಾಣಬರುತ್ತದೆ. ಚೀನ, ಭಾರತ, ಆಫ್ರಿಕ ಮತ್ತು ಉತ್ತರ ಅಮೇರಿಕ ಖಂಡಗಳಲ್ಲಿ ಈ ರೋಗವನ್ನು ಕಾಣಬಹುದು. ಆರೋಗ್ಯಕ್ಕೆ ಗಮನವೀಯದ ಸ್ಥಳಗಳು (un Hygienic) ಮತ್ತು ಕಿಕ್ಕಿರಿದ ಜನಸಂದಣಿಯಿರುವ ಪ್ರದೇಶಗಳು (over crowding) ಈ ರೋಗಕ್ಕೆ ತವರು ಮನೆ. ಆರೋಗ್ಯಕ್ಕೆ ಹೆಚ್ಚು ಗಮನ ಕೊಡುವ ಪ್ರದೇಶಗಳಲ್ಲಿ ಈ ರೋಗವು ತಲೆ ಹಾಕುವುದಿಲ್ಲ. ಹತ್ತು ವರ್ಷದಿಂದ ಮೂವತ್ತು ವರ್ಷ ವಯಸ್ಸಿನ ಜನಗಳು ಈ ರೋಗಕ್ಕೆ ತುತ್ತಾಗಬಹುದು. ನೈರ್ಮಲ್ಯದಿಂದ ಕೂಡಿರುವವರು ಈ ರೋಗಕ್ಕೆ ತುತ್ತಾಗುವುದಿಲ್ಲವಾದುದರಿಂದ ನಮ್ಮ ಸುತ್ತ ಮುತ್ತಲಿನ ಪ್ರದೇಶಗಳನ್ನು ಚೊಕ್ಕಟವಾಗಿಟ್ಟು ಕೊಳ್ಳಬೇಕು ಮತ್ತು ರೋಗ ಹರಡದಂತೆ ಸರ್ಕಾರದೊಡನೆ ಸಹಕರಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ.

ರೋಗ ಹರಡುವ ಕ್ರಮ

ಆರೋಗ್ಯದಿಂದಿರುವವರು ರೋಗದಿಂದ ನರಳುತ್ತಿರುವವರೊಡನೆ ಅನೇಕ ವರ್ಷಗಳ ಸಂಪರ್ಕವಿಟ್ಟು ಕೊಂಡಿದ್ದರೆ ಮಾತ್ರ ಅವರೂ ಈ ರೋಗಕ್ಕೆ ತುತ್ತಾಗುತ್ತಾರೆ. ಈ ದಂಡಾಣುಗಳು ಚರ್ಮ ಮತ್ತು ಮೂಗಿನ ಒಳ ಪದರ (Nasal Mucous Membrane) ದ ಮೂಲಕ ದೇಹವನ್ನು ಸೇರುತ್ತವೆ. ಇದು ಪ್ರಾಣಿಗಳಿಂದಾಗಲೀ, ಲೈಂಗಿಕ ಸಂಪರ್ಕದಿಂದಾಗಲೀ ಹರಡುವುದಿಲ್ಲ ಮತ್ತು ವಂಶಪಾರಂಪರ್ಯ (Heriditary) ರೋಗವಲ್ಲ. ರೋಗದಿಂದ ನರಳುತ್ತಿರುವ ದಂಪತಿಗಳಿಗೆ ಜನಿಸಿದ ಮಗುವನ್ನು ಜಾಗ್ರತೆ ಅವರಿಂದ ಬೇರ್ಪಡಿಸಿದರೆ ಆ ಮಗುವು ರೋಗಕ್ಕೆ ತುತ್ತಾಗುವುದಿಲ್ಲ.

ರೋಗಿಗಳು ಕೆಮ್ಮುವುದು, ಸೀನುವುದು ಮುಂತಾದುವುಗಳನ್ನು ಮಾಡಿದಾಗ ದಂಡಾಣುಗಳು ಗಾಳಿಯ ಮೂಲಕ ಪ್ರಸರಿಸಿ ರೋಗವನ್ನು ಹರಡುತ್ತವೆ. ರೋಗಿಗಳು ಉಪಯೋಗಿಸುವ ಪದಾರ್ಥಗಳು, ಬಟ್ಟೆ ಬರೆಗಳು, ರವಸ್ತ್ರ ಮುಂತಾದುವುಗಳ ಮೂಲಕ ರೋಗ ಹರಡಬಹುದು. ರೋಗಿಗಳ ಗಾಯಗಳ ಕೀವಿನಲ್ಲಿರುವ ದಂಡಾಣುಗಳನ್ನು ನೊಣಗಳು ತಮ್ಮ ಕಾಲಲ್ಲಿರುವ ಅಂಟು ಸಿಂಬೆಗಳ ಮೂಲಕ ಹೊತ್ತು ತಂದು ನಾವು ಸೇವಿಸುವ ಪಾನೀಯಗಳು ಮತ್ತು ತಿಂಡಿ ಪದಾರ್ಥಗಳ ಮೂಲಕ ಹರಡುತ್ತವೆ.

ಪ್ರಾಣಿಗಳಲ್ಲಿ ತಗಣಿಗಳು (Bed bugs) ಸಹ ರೋಗ ಹರಡುವುವೆಂದು ಕಂಡುಬಂದಿದೆ.

ಪಕ್ವಕಾಲ (Incubation period)

ಇದಕ್ಕೆ ನಿಗದಿಯಿಲ್ಲ. ಆರು ತಿಂಗಳುಗಳಿಂದ ಐದು ವರ್ಷಗಳ ವರೆವಿಗೆ ಬೇಕಾದರೂ ಆಗಬಹುದು.

ವಿಧಗಳು

ರೋಗವನ್ನು ತಡೆಗಟ್ಟುವ ಆಧಾರದ ಮೇಲೂ, ರೋಗಿಗಳ ಲಕ್ಷಣಗಳ ಮೇಲೂ ಇದನ್ನು ಎರಡು ವಿಧಗಳಾಗಿ ವಿಭಜಿಸಿ ವೀಕ್ಷಿಸಬಹುದು.

(ಅ) ಕುಷ್ಟತ್ವದ ಅಥವ ಗಂಟುಗಳನ್ನುಂಟು ಮಾಡುವ (lepromatous or Nodular) ಗುಂಪಿಗೆ ಸೇರಿದವುಗಳು.

(ಆ) ಕ್ಷಯಿಸುವ ಅಥವ ವೇದ ನಿರೋಧಕ ಲಕ್ಷಣಗಳ (Tuberculoid or Anabsthetic) ಗುಂಪಿಗೆ ಸೇರಿದವುಗಳು.

(ಅ) ಕುಷ್ಟತ್ವ

ಈ ವಿಧದಲ್ಲಿ ಚರ್ಮವು ಹೆಚ್ಚಾಗಿ ನರಳುತ್ತದೆ. ಚರ್ಮದ ಮೇಲೆಲ್ಲಾ ತಾಮ್ರ ವರ್ಣದ ಕಲಮೆಗಳು ಕಾಣಿಸಿಕೊಳ್ಳುತ್ತವೆ. ಹಲವು ದಿನಗಳನಂತರ ಚರ್ಮವು ದಪ್ಪವಾಗಿ, ಸುಕ್ಕು ಕಟ್ಟಿಕೊಂಡು ಜ್ವರವು ಕಾಣಿಸಿಕೊಳ್ಳುತ್ತದೆ. ಈ ಕಲಮೆಗಳು ದಪ್ಪವಾಗಿ ಸಣ್ಣ ಗಂಟುಗಳಾ (ಗ್ರಂಥಿಗಳು Nodules) ಗುತ್ತವೆ.

ಇದು ಗಾಯುವಾಗಿ ಕೀವು ಸುರಿಯಲು ಪ್ರಾರಂಭಿಸುತ್ತದೆ. ಈ ಕೀವಿನಲ್ಲಿ ದುಂಡಾಣುಗಳಿರುತ್ತವೆ. ಈ ಗಂಟು ಗಳನ್ನ ಕಿವಿ, ಮೂಗು ಮತ್ತು ಚರ್ಮಗಳಲ್ಲಿ ಹೆಚ್ಚಾಗಿ ಕಾಣಬಹುದು.

ಶೇಕಡ ಇಪ್ಪತ್ತು ರೋಗಗಳಲ್ಲಿ ಈ ಲಕ್ಷಣ ಗಳನ್ನು ಕಾಣಬಹುದು. ಈ ಒಂದು ವಿಧವು ಮಾತ್ರ ಅಂಟು ಜಾತಿಗೆ ಸೇರಿದುದು.

(ಆ) ಕ್ಷಯತ್ವ ವಿಧ

ಶೇಕಡ ಎಂಬತ್ತು ರೋಗಿಗಳಿಗೆ ಈ ವಿಧದ ರೋಗವು ಕಾಣಿಸಿಕೊಳ್ಳುತ್ತದೆ. ಇದು ಅಂಟುಜಾತಿಗೆ ಸೇರಿದುದಲ್ಲ.

ಈ ರೋಗಿಗಳ ಬೆವರು ಗ್ರಂಥಿಗಳು ಬೆವರನು ಉತ್ಪತ್ತಿ ಮಾಡುವುದಿಲ್ಲ. ಚರ್ಮವು ಸ್ಪರ್ಶಜ್ಞಾನ, ವೇಧಜ್ಞಾನ ಮತ್ತು ಶಾಖ ಜ್ಞಾನವನ್ನು ಕಳೆದುಕೊಳ್ಳು ತ್ತದೆ. ನರಗಳು ದಪ್ಪನಾಗುತ್ತವೆ. ದಂಡಾಣುಗಳು ನರಗಳನ್ನ ಮುತ್ತಿಗೆ ಹಾಕುವುದರಿಂದ ನರಗಳು ದುರ್ಬಲ (Paralysis) ವಾಗುತ್ತವೆ. ಆ ನರಗಳಿಂದ ಸರಬ ರಾಜು ಹೊಂದಿರುವ ಮಾಂಸ ಖಂಡಗಳು ನಶಿಸಿ ಹೋಗುತ್ತವೆ. ಹೆಚ್ಚಾಗಿ ಕೈಯ್ಯಿನ ಸಣ್ಣ ಮಾಂಸ ಖಂಡಗಳು (Thenar and Hypothenar Muscles) ನಶಿಸುವುದನ್ನು (Wasting) ಕಾಣ ಬಹುದು. ರೋಗಿಯು ನಿರ್ಲಕ್ಷನಾಗಿದ್ದರೆ ಕೆಲವು ಕಾಲದನಂತರ ಶ್ವಾಸಕೋಶದ ಕ್ಷಯ (pulmonary tuberculosis) ಕ್ಕೆ ತುತ್ತಾಗುತ್ತಾನೆ.

ಲಕ್ಷಣಗಳು

ರೋಗಿಗಳ ಲಕ್ಷಣಗಳು ಮಿಶ್ರ ವಿಧಿಗಳಿಂದ ಕೂಡಿರುವುದರಿಂದ ಈ ಲಕ್ಷಣಗಳನ್ನ ಮೂರು ಹಂತ ಗಳಾಗಿ ವಿಭಜಿಸಬಹುದು.

ಮೊದಲನೆ ಹಂತ

ಚರ್ಮದ ಮೇಲೆಲ್ಲಾ ತಾಮ್ರ ವರ್ಣದ ಕಲಮೆ ಗಳು, ಸ್ಪರ್ಶಜ್ಞಾನ ನಾಶ; ನರಗಳು ದಪ್ಪನಾಗುವಿಕೆ (Thickness or peripheral nerves) ಮುಂತಾದುವುಗಳನ್ನು ಕಾಣಬಹುದು. ಆ ನರಗಳನ್ನು ಒತ್ತಿದರೆ ನರಗಳು ಟಣ ಟಣ ಹಾರಿದಂತೆಯೂ (Tingling sensation) ಮತ್ತು ಕಾಲು ಜೊಗ್ಗು ಹಿಡಿಯುವಿಕೆಯನ್ನೂ ರೋಗಿಯು ಅನುಭವಿಸುತ್ತಾನೆ.

ಎರಡನೆಯ ಹಂತ

ಚರ್ಮವು ದಪ್ಪನಾಗಿ, ಸುಕ್ಕು ಕಟ್ಟಿ ಅನಂತರ ಗಂಟು ಗಳಾಗುತ್ತವೆ. ಕಿವಿಗಳು ಊದುತ್ತವೆ. ಈ ಹಂತ ದಲ್ಲಿ ರೋಗಿಯು ಮಲ ಮೂತ್ರದಲ್ಲಿ ಸಹ ದಂಡಾಣು ಗಳನ್ನು ಕಾಣಬಹುದು.

ಮೂರನೆ ಹಂತ

ರೋಗಿಯ ಕೈ ಕಾಲುಗಳ ಬೆರಳುಗಳು ಬಾಗಿ' ಗಾಯವಾಗಿ, ನಶಿಸಿ, ಬೆರಳುಗಳುದುರಲು ಪ್ರಾರಂಭ ವಾಗುತ್ತದೆ. ನಂತರ ರೋಗಿಯು ಅಂಗವಿಕಲನಾಗು ತ್ತಾನೆ. ಕೆಲವೊಮ್ಮೆ ಕಣ್ಣು ರೆಪ್ಪೆಗಳನ್ನು ಸಹ ಮುಚ್ಚಲು ತೊಂದರೆಯಾಗುತ್ತದೆ. ಕೆಲವು ಸಂದರ್ಭ ಗಳಲ್ಲಿ ರೋಗಿಯು ಪಾದ-ಪತನ (Foot drop) ದಿಂದ ನರಳಬಹುದು. ಇದು ಅತಿ ಭಾಧೆಯ ಹಂತ. ಈ ಹಂತದಲ್ಲಿ ರೋಗಿಗೆ ಏನೂ ಮಾಡಲಾಗುವುದಿಲ್ಲ.

ಚಿಕಿತ್ಸಾಕ್ರಮ– ಡಿ. ಡಿ. ಎಸ್. ಎಂಬ ಮಾತ್ರೆ ಗಳು ಈ ಕಾಯಿಲೆಗೆ ಅತ್ಯುತ್ತಮವಾದ ಔಷಧ. ಇದನ್ನು ಡಾಪ್ಸೋನಂ ಎಂದು ಕರೆಯುತ್ತಾರೆ. ಪ್ರಾರಂ ಭದಲ್ಲಿ ಕಡಿಮೆ ಪ್ರಮಾಣದಲ್ಲಿ ಕೊಡುತ್ತಾ ಆಮೇಲೆ ಹೆಚ್ಚಿಸಬೇಕು. ವಾರಕ್ಕೆ ೬೫ ಮಿ. ಗ್ರಾಂನಂತೆ ವಾರಕ್ಕೆ ಒಂದು ಅಥವಾ ಎರಡು ಭಾರಿ ಮಾತ್ರ ಕೊಡಬೇಕು. ಮೂರು ತಿಂಗಳನಂತರ ಹದಿನೈದು ದಿವಸಗಳು ಯಾವ ಮಾತ್ರೆಗಳನ್ನೂ ಸೇವಿಸಬಾರದು. ಇದು ಮರುಕಳಿ ಸುವ (relapse) ಸಂದರ್ಭಗಳು ಇರುವುದರಿಂದ ಲಕ್ಷ ಣಗಳು ಮಾಯವಾದ ನಂತರವೂ ವಾರಕ್ಕೆ 25-50 ಮಿ. ಗ್ರಾಂ.ನಷ್ಟು ಸುಮಾರು ಎರಡು ಮೂರು ತಿಂಗಳು ಮುಂದುವರಿಸಬೇಕು.

ಪ್ರತಿ ಮಾತ್ರೆಯೂ 100 ಮಿ ಗ್ರಾಂ. ಪ್ರಮಾಣದಲ್ಲಿರುತ್ತವೆ. ಇವುಗಳನ್ನು ಸುಮಾರು ಎರಡು ವರ್ಷಗಳಾದರೂ ಸೇವಿಸಬೇಕು. ಒಂದು ವರ್ಷಕ್ಕೆ 250 ಮಾತ್ರೆಗಳು ಬೇಕಾಗುವುದೆಂದು ಲೆಕ್ಕ ಹಾಕಲಾಗಿದೆ. ಒಟ್ಟು ಎರಡು ವರ್ಷಕ್ಕೆ 500 ಮಾತ್ರೆಗಳು ಬೇಕಾಗುತ್ತವೆ. ಕೇವಲ ಹನ್ನೆರಡು ರೂಪಾಯಿಗಳಲ್ಲಿ ಎಲ್ಲ ಮಾತ್ರೆಗಳನ್ನು ಪಡೆಯ ಬಹುದು. ಇದರ ಹಣದ ಹೊರೆಯನ್ನು ಸರ್ಕಾರವೇ ಹೊರುತ್ತದೆ. ರೋಗಿಯು ಪ್ರತಿನಿತ್ಯವೂ ಸಲಹೆಗಳಿಗನುಗುಣವಾಗಿ ಮಾ ತ್ರೆ ಗ ಳ ನ್ನು ಸೇ ವಿ ಸು ವ ಭಾ ರ ವ ನ್ನು ಮಾತ್ರ ವಹಿಸಿ ಕೊಂಡರೆ ಸಾಕು.

ಈಗ ಹೇಳಿರಿ, ಇದು ಮಹಾ ರೋಗವೇ? ಹಾಗಿದ್ದಲ್ಲಿ ಕೇವಲ ಹನ್ನೆರಡು ರೂಪಾಯಿಗಳಲ್ಲಿ ವಾಸಿಮಾಡಲಾಗುತ್ತಿತ್ತೇ?

ಈ ಮಾತ್ರೆಗಳನ್ನು ಸೇವಿಸುವುದರಿಂದ ಹುಣ್ಣು ವಾಸಿಯಾಗುತ್ತದೆ. ಮೂಗು ಕಟ್ಟುವುದು ಮತ್ತು ಮೂ ಗಿ ನ ಲ್ಲಿ ಸುರಿಯುವುದು ನಿ ಲ್ಲು ತ್ತ ದೆ. ಮೂಗಿನ ಗಾಯಗಳು ಸಂಪೂರ್ಣವಾಗಿ ವಾಸಿಯಾಗುತ್ತವೆ. ಐರಿಸ್‌ನ ಸಂಪರ್ಕದೋಷವು [Iritis] ವಾಸಿಯಾಗುತ್ತದೆ. ಈ ಮಾತ್ರೆಗಳು ಮೇಲಿನೆರಡು ವಿಧಗಳಿಗೂ ಪರಿಣಾಮಕಾರಿ. ಎಲ್ಲ ಹಂ ತ ಗ ಳ ಲ್ಲಿ ಯೂ ಉತ್ತಮ ಫಲಿತಾಂಶವನ್ನು ಕೊಡುತ್ತವೆ.

ಚಾವುಲ್ ಮೂಗ್ರ ಮತ್ತು ಹಿಡ್‌ನೋಕಾರ್ಪ್ಸ್ ಎಣ್ಣೆಗಳು ಸಹ ಉತ್ತಮ ಫಲಕಾರಿಗಳು. ಸ್ಟ್ರೆಪ್ಟೊಮೈಸಿನ್, ಐ. ಎನ್. ಎ ಹೆಚ್. ಮತ್ತು ತಿಯೊಸೆಮಿಕಾರ್ಬಜೋನ್‌ಗಳನ್ನು ಸಹ ಈ ಕಾಯಿಲೆಯಲ್ಲಿ ಉಪಯೋಗಿಸಬಹುದು.

ಎರಡನೆ ಹಂತದಲ್ಲಿ ಮಾತ್ರೆಗಳ ಜೊತೆಗೆ ಗಾಯಗಳನ್ನು ಸಹ ಚಿಕಿತ್ಸಿಸಬೇಕಾಗುತ್ತದೆ. ಮೂರನೆಯ ಹಂತದಲ್ಲಿ ಔಷಧಗಳ ರುಚಿಯ ಜೊತೆಗೆ ಶಸ್ತ್ರದ ಸವಿಯನ್ನು ಸಹ ತೋರಿಸಬೇಕಾಗುತ್ತದೆ. ಅಂಗವಿಕಲತೆಯನ್ನು ಪ್ಲಾ ಸ್ಟಿ ಕ್ ನಿ ಂ ದ ಸ ರಿ ಪ ಡಿ ಸಬಹುದು ಪ್ಲಾ ಸ್ಟಿ ಕ್ ಚಿ ಕಿ ತ್ಸೆಯು [plastic surgery] ವೈದ್ಯಕೀಯ ಪ್ರಗತಿಯ ಮಹತ್ಸಾಧನೆಯೆಂದು ಹೇಳಬಹುದು.

ರೋಗಗಳನ್ನು ತಡೆಗಟ್ಟುವಿಕೆ ಮತ್ತು ಪ್ರತಿಬಂಧಕಗಳು- "Prevention is better than cure" ಎಂಬಂತೆ ಶೇಕಡ ತೊಂಬತ್ತು ಕಾಯಿಲೆಗಳನ್ನು ಪ್ರತಿಬಂಧಕಗಳಿಂದ ತಡೆಗಟ್ಟಬಹುದು.

ಈ ರೋಗದ ಲಕ್ಷಣಗಳು ಕಾಣುತ್ತಿದ್ದ ಹಾಗೆಯೇ ರೋಗಿಯು ವೈದ್ಯರಿಗೆ ತಿಳಿಸುವುದು ಅತಿ ಮುಖ್ಯವಾದುದು. ಅವನನ್ನು ಆರೋಗ್ಯವಂತರಿಂದ ಬೇರ್ಪಡಿಸಬೇಕು (Isolation). ರೋಗಿಗಳನ್ನು ಆಸ್ಪತ್ರೆಗಳಿಗಾಗಲೀ, ಕುಷ್ಠರೋಗದ ಕೇಂದ್ರಗಳಿಗಾಗಲಿ (leprosy centre) ಸೇರಿಸಬೇಕು. ರೋಗಿಯ ಬಟ್ಟೆಗಳು; ಪಾತ್ರೆಗಳು ಮತ್ತು ರೋಗಿಯಿಂದುಪಯೋಗಿಸಲ್ಪಟ್ಟ ಪ್ರತಿ ವಸ್ತುಗಳನ್ನು ಕ್ರಿಮಿನಾಶಕದಿಂದ ತೊಳೆಯಬೇಕು. ಅವನ ಗಾಯಗಳು ಮತ್ತು ಕೀವನ್ನು ಮುಟ್ಟಿದವರು ಕ್ರಿಮಿನಾಶಕವನ್ನುಪಯೋಗಿಸಿ ಕೈಯನ್ನು ಶುಭ್ರ ಮಾಡಿಕೊಳ್ಳಬೇಕು. ರೋಗದಿಂದ ನರಳುತ್ತಿರುವವರನ್ನು ರಸ್ತೆಗಳಲ್ಲಿ ಸ್ವೇಚ್ಛೆಯಾಗಿ ಓಡಾಡಲು ಬಿಡಬಾರದು. ಅವರು ತಿಂಡಿತಿನಸುಗಳನ್ನು ಮಾರಲು ಅವಕಾಶ ಕೊಡಬಾರದು. ಅವರ ಮಲ ಮೂತ್ರಗಳನ್ನು ದೂರ ಸಾಗಿಸಬೇಕು. ಹೀಗೆ ಮಾಡುವುದರಿಂದ ದಂಡಾಣುಗಳು ಆರೋಗ್ಯವಾಗಿರುವವರನ್ನು ಸೇರಲು ಅವಕಾಶವಿರುವುದಿಲ್ಲ. ರೋಗಿಗಳನ್ನು ಚಿ ಕಿ ತ್ಸಿ ಸಿ ದ ರೆ ರೋಗ ನಿವಾರಣೆಯಾಗುತ್ತದೆ. ಜನತೆಯು ಸರ್ಕಾರದೊಡನೆ ಸಹಕರಿಸಿದರೆ ಈಗ ಮಹಾ ರೋಗವೆಂದು ಹೆದರುತ್ತಿರುವ ಈ ಕುಷ್ಠ ರೋಗವನ್ನು ಬುಡಸಹಿತ ಕಿತ್ತೆಸೆಯಬಹುದು.

ಎಚ್ಚರಿಕೆ ಕ್ರಮಗಳು:- ರೋ ಗಿ ಯೂ ಸ ಹ ಮುನ್ನೆಚ್ಚರಿಕೆಗಳನ್ನು ವಹಿಸಬೇಕಾದುದು ಅವನ ಮತ್ತು ಸಮಾಜದ ದೃಷ್ಟಿಯಿಂದ ಅತ್ಯವಶ್ಯಕ. ಅವರುಮೊದಲು ಸಮಾಜಕ್ಕೆ ಹೊಂದಿಕೊಂಡು ಬಾಳಬೇಕು. ತಮ್ಮ ಬಟ್ಟೆ ಬರೆಗಳನ್ನು, ಸಾಮಗ್ರಿಗಳನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕು. ಕೆಮ್ಮುವಾಗ ಮತ್ತು ಸೀನುವಾಗ ಬಾಯಿಯ ಮುಂದೆ ಬಟ್ಟೆಹಿಡಿದುಕೊಳ್ಳಬೇಕು. ಮಕ್ಕ

ಳಿಗೆ ತಾವು ಎಂಜಲು ಮಾಡಿದ ತಿಂಡಿ ತಿನಸುಗಳನ್ನು ಕೊಡಬಾರದು, ಅವರಿಗೆ ಮುತ್ತಿಡುವುದು ಮತ್ತು ಆಲಂಗಿಸುವುದನ್ನು ನಿಷೇಧಿಸಬೇಕು. ಧೂಮಪಾನವನ್ನು ತಡೆಗಟ್ಟಬೇಕು. ಸಾಧ್ಯವಿಲ್ಲದಿದ್ದರೆ ಸಿಗರೇಟು ಅಥವಾ ಬೀಡಿಗಳ ತುದಿಗೆ ಹೋಲ್ಡರ್ ಅನ್ನು ಸಿಗಿಸಿ ಹೋಲ್ಡರ್ ಅನ್ನು ಬಾಯಿಯಲ್ಲಿಟ್ಟು ಅದರ ಮೂಲಕ ಸೇದಬೇಕು. ಶಾಖಜ್ಞಾನವಿಲ್ಲದಿರುವುದರಿಂದ ಸಿಗರೇಟಿನ ಬೆಂಕಿಯಿಂದ ತುಟಿಗಳನ್ನು ಸುಟ್ಟುಕೊಳ್ಳಬಹುದು. ಬಿಸಿ ಮುಟ್ಟುವಾಗ ಬಟ್ಟೆಗಳ ಸಹಾಯವನ್ನು ಪಡೆಯಬೇಕು ಸಣ್ಣಪುಟ್ಟ ಗಾಯಗಳಿಗೆ ತಕ್ಷಣ ಚಿಕಿತ್ಸೆ ಪಡೆಯಬೇಕು. ಸೂಜಿ ಮುಳ್ಳು ಮುಂತಾದುವುಗಳನ್ನು ಚುಚ್ಚಿಕೊಳ್ಳುವಂತಹ ಕೆಲಸಗಳನ್ನು ಮಾಡಬಾರದು. ಮೊಳೆ ಹೊಡೆದ ಪಾದರಕ್ಷೆಗಳನ್ನು ಮೆಟ್ಟದೆ ಹೊಲಿದ ಪಾದರಕ್ಷೆಗಳನ್ನು ಉಪಯೋಗಿಸಬೇಕು.

ಸಮಾಜ ಮತ್ತು ರೋಗಿಗಳು:- ಕುಷ್ಠರೋಗವು ಜ್ವರ ಮತ್ತು ಕೆಮ್ಮುಗಳಂತೆ ಸಾಮಾನ್ಯ ರೋಗವೇ ಹೊರತು ಮಹಾರೋಗವಲ್ಲ. ಸಮಾಜವು ಇವರನ್ನು ಪಾಪಿಗಳೆಂದು ಪರಿಗಣಿಸಿ, ಕೀಳುಭಾವನೆಯಿಂದ ಕಾಣುತ್ತಿರುವುದರಿಂದ ಇವರಲ್ಲಿ ರೋಗದ ಲಕ್ಷಣಗಳು ಕಂಡು ಬಂದರೂ ಸಮಾಜದ ಮಹಾಮಾರಿಗೆ ತುತ್ತಾಗುವೆವೆಂಬ ಭಯದಿಂದ ತಮ್ಮ ರೋಗವನ್ನು ಗುಪ್ತವಾಗಿಡುತ್ತಾರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದಿ ರೋಗ ನಿವಾರಣೆಯಾದನಂತರವೂ ಸಮಾಜವು ಇದರನ್ನು ಹೊರದೂಡುವುದೆಂಬ ಹೆದರಿಕೆಯಿಂದ ಅಂಗವಿಕಲರಾಗುವವರೆವಿಗೂ ತಮ್ಮ ಗುಟ್ಟನ್ನು ರಟ್ಟಾಗಿಸುವುದಿಲ್ಲ. ಸಮಾಜವು ಅವರಿಗೆ ರೋಗವನ್ನು ಹರಡಲು ಅವಕಾಶ ಕಲ್ಪಿಸಿ ಕೊಡುತ್ತಿದೆಯೇ ಹೊರತು ರೋಗವನ್ನು ತಡೆಗಟ್ಟಲು ಸಹಾಯ ಮಾಡುತ್ತಿಲ್ಲ. ಸಮಾಜವು ಇವರೊಡನೆ ಹೊಂದಿಕೊಂಡು ಪ್ರಾರಂಭದಲ್ಲಿಯೇ ಎಚ್ಚರಿಕೆ ವಹಿಸಿ, ವಾಸಿಯಾದನಂತರ ಮೊದಲಿನ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರೆ ಮಾತ್ರ ರೋಗವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಇದರಿಂದ ಈ ರೋಗವೆಂಬ ಬಳ್ಳಿಯನ್ನು ಬುಡಸಹಿತ ಕಿತ್ತೆಸೆಯಬಹುದು. ಇಲ್ಲದಿದ್ದ ರೋಗಿಗಳ ಸಂಖ್ಯೆ ಇಮ್ಮಡಿಸುತ್ತಾ ಹೋಗಿ ರೋಗವು ಉರ್ಧ್ವ ಸ್ಥಿತಿಯನ್ನು ಹೊಂದಿ ಹರಡುತ್ತಾ ಹೋಗುವುದು. ಆಗ ಆರೋಗ್ಯವಂತರೂ ರೋಗಕ್ಕೀಡಾಗಿ ಸಮಾಜಕ್ಕೂ ಮತ್ತು ರಾಷ್ಟ್ರಕ್ಕೂ ಹಾನಿಯನ್ನುಂಟು ಮಾಡಿದ ಹಾಗಾಗುತ್ತದೆ.

ಕುಷ್ಠರೋಗವು ಮಹಾರೋಗವೆಂಬುದನ್ನು ಮರೆತು ಪಾಪ ಅಥವ ಶಾಪದ ಫಲಗಳೆಂಬ ಮೂಢನಂಬಿಕೆಯನ್ನು ಹೋಗಲಾಡಿಸಿಕೊಂಡು ಕರ್ಮದಿಂದಾದುದಲ್ಲವೆಂಬ ಮರ್ಮವನ್ನರಿತು ರೋಗವನ್ನು ತಡೆಗಟ್ಟುವ ಕ್ರಮಗಳನ್ನು ತಿಳಿದು ರೋಗಿಗಳೊಡನೆ ಸಹಕರಿಸಿದರೆ ಮಾತ್ರ ಈ ರೋಗವನ್ನು ತಡೆಗಟ್ಟಬಹುದೇ ಹೊರತು ದೇವರಿಗೆ ಹರಕೆ ಹೊತ್ತು ರೋಗಗಳು ಬರದಂತೆ ತಡೆಗಟ್ಟಲಾಗುವುದಿಲ್ಲ ಸರ್ಕಾರವು ಸಹ ಮುನ್ನೆಚ್ಚರಿಕೆಯ ಕ್ರಮಗಳನ್ನನುಸರಿಸಿಯೇ ಈ ರೋಗವನ್ನು ತಡೆಗಟ್ಟುತ್ತಿದೆ.



ಜಾಣ್ನುಡಿಗಳು

ಇನ್ನೊಬ್ಬರ ಕೆಲಸದಲ್ಲಿ ಕೈ ಹಾಕದೆ ತನ್ನ ಕರ್ತವ್ಯವನ್ನು ತಾನು ನಿರ್ವಹಿಸುವುದೇ ನ್ಯಾಯ.

ನ್ಯಾಯವು ಒಂದು ಗುಣ. ಅದರ ಮೂಲಕ ಮಾನವನು ಪ್ರತಿಯೊಬ್ಬನಿಗೂ ಆತನ ನ್ಯಾಯವಾದ ಪಾಲು ನೀಡುತ್ತಾನೆ. ಇದು ಅವನ ಶಾಶ್ವತನಾದ ಮತ್ತು ನಿರಂತರವಾದ ಅಭಿಲಾಷೆಯಾಗಿದೆ.

ನಿಸರ್ಗದೊಂದಿಗೆ ಹೊಂದಿಕೊಂಡ ಸದ್ವಿವೇಕವೇ ಕಾನೂನು ಅದು ನಿತ್ಯವ್ಯಾಪಕ, ಅಪರಿವರ್ತನೀಯ ಮತ್ತು ಶಾಶ್ವತ.

ಐಕ್ಯತೆಯ ಮರೀಚಿಕೆ

ಕೆ. ವೆಂಕಟರಾಮಯ್ಯ.

ಕೆಲವು ದಿನಗಳ ಹಿಂದೆ ಕೇಂದ್ರ ಸರ್ಕಾರದ ಮಂತ್ರಿಯೊಬ್ಬರು ಇಂಗ್ಲಿಷ್ ಭಾಷೆಯ ವಿಚಾರವಾಗಿ ಸರ್ಕಾರದ ನೀತಿಯನ್ನು ಒಪ್ಪದೆ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಇತ್ತರು. ಇಂಗ್ಲಿಷ್ ಭಾಷೆಯನ್ನು ಅಲಕ್ಷ್ಯ ಮಾಡಿದರೆ ನಮ್ಮ ರಾಷ್ಟ್ರದ ಐಕ್ಯತೆಗೆ ಅಪಾಯವೆಂಬುದು ಅವರ ಒಂದು ಮುಖ್ಯ ವಾದ. ಈ ವಾದವನ್ನು ಇಂಗ್ಲಿಷ್ ಬಲ್ಲ ಅನೇಕ ಹಿರಿಯರು ಒಪ್ಪಿ ಆ ಮಂತ್ರಿಗಳ ತ್ಯಾಗವನ್ನು ಮೆಚ್ಚಿದ್ದಾರೆ. ತ್ಯಾಗವನ್ನು ಮೆಚ್ಚುವುದು ಸರಿ. ಆದರೆ ಇಂಗ್ಲಿಷ್ ಭಾಷೆಯಿಂದ ಐಕ್ಯತೆ ಬೆಳೆದಿದೆ ಮತ್ತು ಆ ಐಕ್ಯತೆ ಉಳಿಯಲು ಇಂಗ್ಲಿಷ್ ಆವಶ್ಯಕ ಎಂಬ ವಾದವನ್ನು ಒಪ್ಪಲು ಮನಸ್ಸು ಬರುವುದಿಲ್ಲ. ಇಂಗ್ಲಿಷ್ ಪುಸ್ತಕಗಳನ್ನು ಓದಲು, ಇಂಗ್ಲಿಷ್ ಭಾಷಣಗಳನ್ನು ಕೇಳಲು ಇಂಗ್ಲಿಷ್ ಸಹಾಯ ಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ನಮ್ಮ ರಾಷ್ಟ್ರದ ಐಕ್ಯತೆಗೂ ಇಂಗ್ಲಿಷ್‌ಗೂ ಗಂಟು ಹಾಕುವ ವಾದ ಮನಸ್ಸಿಗೆ ಹಿಡಿಸುವುದು ಕಷ್ಟ. ಇಂಗ್ಲಿಷ್ ಭಾಷೆ ಮಾತ್ರವೇ ಅಲ್ಲ, ಯಾವ ಭಾಷೆಯಾದರೂ ಸರಿಯೇ ಆ ಭಾಷೆ ನಮ್ಮಲ್ಲಿ ಐಕ್ಯತೆಯ ಭಾವನೆಯನ್ನು ಬೆಳಸುತ್ತದೆ ಎಂಬ ವಾದ, ವಾದವೇ? ಎಂಬ ಅನುಮಾನ ಬರುತ್ತದೆ.

ಭಾಷೆ ಐಕ್ಯತೆಯನ್ನು ಬೆಳಸುವುದಾದರೆ ನಮ್ಮ ದೇಶದ ಚರಿತ್ರೆ, ಇತಿಹಾಸ, ಪುರಾಣಗಳು ಬೇರೆ ರೂಪವನ್ನು ತಾಳಬೇಕಾಗಿತ್ತು. ಕೌರವರು ಪಾಂಡವರು ಒಂದೇ ಭಾಷೆ ಬಲ್ಲವರಾದರೂ ಏಕೆ ಐಕಮತ್ಯದಿಂದ ಬಾಳಲಿಲ್ಲ? ಯಾದವರೆಲ್ಲರೂ ಒಂದೇ ಭಾಷೆ ಮಾತನಾಡುತ್ತಿದ್ದರೂ ಯಾದವೀಕಲಹವೇಕಾಯಿತು? ಕೈಕೆಯಿ ರಾಮನ ಭಾಷೆಯನ್ನೇ ಆಡುತ್ತಿದ್ದರೂ ದೊಡ್ಡ ರಾಮಾಯಣವನ್ನು ಉಂಟುಮಾಡಲು ಕಾರಣವೇನು? ರಾವಣ ವಿಭೀಷಣ ಒಂದೇಭಾಷೆ ಮಾತನಾಡುತ್ತಿದ್ದರು. ವಾಲಿ, ಸುಗ್ರೀವರು ಒಂದೇ ಭಾಷೆ ಮಾತನಾಡುತ್ತಿದ್ದರು. ಆದರೂ ಐಕ್ಯಮತ್ಯದ ಮಾದರಿ ಅವರ ನಡವಳಿಕೆ ತೋರುತ್ತದೆಯೇ?

ಅಶೋಕ ತನ್ನ ರಾಜ್ಯವನ್ನು ಒಟ್ಟುಗೂಡಿಸಿ ದಕ್ಷತೆಯಿಂದ ಆಡಳಿತ ನಡೆಸಲು ಯಾವ "ಲಿಂಕ್" ಭಾಷೆ ಇತ್ತು? ಅಕ್ಬರ್ ಐಕಮತ್ಯ ಸಾಧಿಸಲು ಅವನ ಭಾಷಾ ನೀತಿ ಕಾರಣವೇನು?

ಗಾಂಧೀಜಿ ಸ್ವಾತಂತ್ರ್ಯ ಹೋರಾಟ ನಡೆಸುತ್ತಿದ್ದ ಕಾಲದಲ್ಲಿ ಇಂಗ್ಲಿಷ್ ಬಲ್ಲ ನಮ್ಮ ಅನೇಕ ಹಿರಿಯರು ಇಂಗ್ಲಿಷ್ ಆಡಳಿತದಲ್ಲಿ ಸಹಕರಿಸಿ ಸ್ವಾತಂತ್ರ್ಯ ಹೋರಾಟವನ್ನು ವಿರೋಧಿಸಲಿಲ್ಲವೆ?

ಇಂಗ್ಲಿಷ್ ಬಲ್ಲವರೆಲ್ಲಾ ಗಾಂಧೀಜಿಯ ಹಿಂಬಾಲಕರೇಕೆ ಆಗಲಿಲ್ಲ? ಪಾಕಿಸ್ಥಾನ್ ಸ್ಥಾಪಕರಾದ ಜಿನ್ನಾರವರಿಗೆ ಇಂಗ್ಲಿಷ್ ಭಾಷೆ ಚೆನ್ನಾಗಿ ಬರುತ್ತಿದ್ದರೂ ಇಂಗ್ಲಿಷ್ ಬಲ್ಲ ಗಾಂಧೀಜಿ, ನೆಹ್ರೂ ಮುಂತಾದವರೊಡನೆ ಸಹಕರಿಸದಿರಲು ಕಾರಣವೇನು?

ಈಗ ನಮ್ಮ ದೇಶದ ಶಾಸನ ಸಭೆಗಳಲ್ಲಿ ಚುನಾಯಿತರಾಗಿರುವ ಸದಸ್ಯರೆಲ್ಲರಿಗೂ ಇಂಗ್ಲಿಷ್ ಭಾಷೆ ಚೆನ್ನಾಗಿ ಬಂದರೂ ಅವರ ನಡವಳಿಕೆಯಲ್ಲಿ ಐಕಮತ್ಯದ ಸೂಚನೆಗಳು ಕಾಣುವುದು ಸುಲಭವೇ? ನಮ್ಮ ರಾಜಕೀಯ ಪಕ್ಷಗಳ ನಾಯಕರಿಗೆಲ್ಲಾ ಇಂಗ್ಲಿಷ್ ಬರುತ್ತದೆ. ಅವರ ಮುಖ್ಯ ಕಾರ್ಯ ಕಲಾಪಗಳೂ ಇಂಗ್ಲಿಷ್ ಭಾಷೆ

ಯಲ್ಲೇ ನಡೆಯುತ್ತವೆ. ಆದರೂ ಏಕೆ ನಮ್ಮ ರಾಷ್ಟ್ರದಲ್ಲಿ ಐಕಮತ್ಯ ಕ್ಷೀಣಿಸುತ್ತಿದೆ?

ನಮ್ಮ ಈಗಿನ ಕಾಲೇಜುಗಳಲ್ಲಿ ಶಿಕ್ಷಣ ಮಾಧ್ಯಮ ಇಂಗ್ಲಿಷ್ ಭಾಷೆ ಆಗಿದ್ದರೂ ದೊಂಬಿ ಗದ್ದಲಗಳೇಕೆ? ಯಾವುದಾದರೂ ಕಾರಣಕ್ಕಾಗಿ ಮುಷ್ಕರಗಳನ್ನು ಹೂಡಿದಕೂಡಲೇ ವಿದ್ಯಾರ್ಥಿಗಳು ರಾಷ್ಟ್ರದ ಹಿತವನ್ನು ಮರೆತು ಅನಾಗರಿಕರಂತೆ ವರ್ತಿಸಲು ಕಾರಣವೇನು? ಇತ್ತೀಚೆಗೆ ನಮ್ಮೂರಲ್ಲಿ ಎರಡು ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಪರಸ್ಪರದ್ವೇಷ ಬೆಳೆದು ಜಗಳಗಳಾಗುವುದನ್ನು ಅವರು ಕಲಿಯುತ್ತಿರುವ ಇಂಗ್ಲಿಷ್ ಮಾಧ್ಯಮ ಏಕೆ ತಪ್ಪಿಸಲಿಲ್ಲ?

ಈ ಬಗೆಯ ಅನೇಕ ಅನುಭವಗಳು ಉದಾಹರಣೆಗಳು ಕಣ್ಣಿಗೆ ಕಟ್ಟಿದಂತೆ ಪ್ರತಿನಿತ್ಯವೂ ನಮಗೆ ಒದಗುತ್ತಿರುವಾಗ ಭಾಷೆಯಿಂದ ಐಕಮತ್ಯ ಬೆಳೆಯುತ್ತದೆ, ಉಳಿಯುತ್ತದೆ ಎಂಬ ವಾದ ಒಪ್ಪಲು ಮನಸ್ಸು ಬಾರದಲ್ಲದೆ?

ನಮ್ಮ ಮನೆಯಲ್ಲಿ ದೊಡ್ಡವರು ತೆಲುಗಿನಲ್ಲಿ ಮಾತನಾಡುತ್ತಾರೆ. ಹುಡುಗರಿಗೆ ತೆಲುಗು ಬರುವುದಿಲ್ಲ. ಅವರೊಡನೆ ವ್ಯವಹಾರ ಕನ್ನಡದಲ್ಲೇ! ಈ ದ್ವಿಭಾಷಾ ಮಾಧ್ಯಮ ನಮ್ಮ ಮನೆಯ ಐಕ್ಯತೆಗೆ ಯಾವ ಅಪಾಯವನ್ನೂ ಒಡ್ಡಿಲ್ಲ. ಈ ಬಗೆಯ ದ್ವಿಭಾಷಾ, ತ್ರಿಭಾಷಾ ಮಾಧ್ಯಮ ಅನೇಕ ಮನೆಗಳಲ್ಲಿ ನೋಡಿದ್ದೇವೆ. ಅಭಿಪ್ರಾಯಗಳ ವಿನಿಮಯಕ್ಕೆ ಬರುವ ಭಾಷೆಗಳನ್ನೆಲ್ಲಾ ಸಂತೋಷವಾಗಿ ಬಳಸೋಣ.

ನೆಹ್ರೂ ಭಾಷಣ ಮಾಡುವ ಸಭೆಗಳಿಗೆ ಲಕ್ಷಾಂತರ ಜನ ಬರುತ್ತಿದ್ದುದು ನಮ್ಮಲ್ಲಿ ಅನೇಕರು ನೋಡಿದ್ದೇವೆ. ನೆಹ್ರೂ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುತ್ತಿದ್ದರು ಅಂತ ಅವರೆಲ್ಲಾ ಬರುತ್ತಿದ್ದರೇನು? ಅವರಲ್ಲಿ ಎಷ್ಟೊ ಜನ ಹಳ್ಳಿಯವರಿಗೆ ನೆಹ್ರೂ ಆಡಿದ ಒಂದು ಮಾತೂ ಗೊತ್ತಾಗದಿದ್ದರೂ ತಾಳ್ಮೆಯಿಂದ ಸಭೆಯಲ್ಲಿ ಕುಳಿತಿರಲು ಕಾರಣವೇನು?

ತಿರುಪತಿ ಯಾತ್ರೆಗೆ ದೇಶದ ನಾನಾ ಮೂಲೆಗಳಿಂದ ಜನ ಬರುತ್ತಾರೆ ಎಂಬುದು ನಮಗೆಲ್ಲಾ ತಿಳಿದಿರುವ ವಿಷಯ. ಈ ಯಾತ್ರೆಯಲ್ಲಿರುವ ಐಕ್ಯತೆಯ [illegible] ತತ್ವ ಭಾಷೆಯೇನು? ಹಾಗೆಯೇ ನಮ್ಮ ದೇಶದ ಬದರಿ, ಕಾಶಿ, ರಾಮೇಶ್ವರ ಮುಂತಾದ ಯಾತ್ರಾಸ್ಥಳಗಳಲ್ಲಿ ಸೇರುವ ಯಾತ್ರಿಕರು ಭಾಷೆಯ ಮೋಹಕ್ಕೆ ಒಳಗಾದವರೇನು?

ಶ್ರೀಮತಿ ಸುಬ್ಬಲಕ್ಷ್ಮಿಯವರು ವಿಶ್ವ-ಸಂಸ್ಥೆಯಲ್ಲಿ ತ್ಯಾಗರಾಜರ, ಪುರಂದರದಾಸರ ಕೃತಿಗಳನ್ನು ಹಾಡಿದರೂ ಆ ಭಾಷೆಗಳು ಗೊತ್ತಿದ್ದ ಜನ ಮಾತ್ರ ಆ ಕೃತಿಗಳನ್ನು ಮೆಚ್ಚಿದರೇನು? ನಮ್ಮ ದೇಶದ ಸಾಧುಸಂತರು ಐಕ್ಯತೆಯನ್ನು ಬೆಳೆಸಲು ಸಹಾಯಕರಾಗಿದ್ದಾರೆ ಎಂಬುದನ್ನು ಬಲ್ಲವರೆಲ್ಲಾ ಹೇಳುತ್ತಾರೆ. ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ರಮಣ ಮಹರ್ಷಿ, ಅರವಿಂದರು, ತುಕರಾಂ, ಕಬೀರ್, ತುಳಸೀದಾಸ್ ಮುಂತಾದ ಅನೇಕ ಹೆಸರುಗಳು ನಮಗೆ ನೆನಪಾಗುತ್ತವೆ. ಅವರಲ್ಲಿ ಒಬ್ಬೊಬ್ಬರೂ ನಮ್ಮ ದೇಶದ ಒಂದೊಂದು ಮೂಲೆಗೆ ಸೇರಿದವರು. ಆದರೂ ಅವರನ್ನು ದೇಶದ ಯಾವ ಮೂಲೆಯವರಾದರೂ ಗೌರವಿಸಲು ಕಾರಣವೇನು?

ಈ ರೀತಿ ನಾವು ಸ್ವಲ್ಪ ಯೋಚಿಸಿದರೆ ನಮ್ಮ ದೇಶದ ಐಕ್ಯತೆ, ಪ್ರಗತಿ ಇಂಗ್ಲಿಷ್ ಭಾಷೆಯನ್ನಾಗಲೀ ಮತ್ತೆ ಯಾವ ಭಾಷೆಯನ್ನಾಗಲಿ ಅವಲಂಬಿಸಿಲ್ಲ ಎಂಬುದು ಮನವರಿಕೆಯಾಗುತ್ತದೆ. ಇಂಗ್ಲಿಷ್ ಭಾಷೆ ಕಲಿಯೋಣ, ಸಾಮರ್ಥ್ಯವಿದ್ದರೆ ಅದರಿಂದ ಆಗುವ ಪ್ರಯೋಜನಗಳನ್ನು ಪಡೆಯೋಣ. ಆದರೆ ಇಂಗ್ಲಿಷ್ ಕಲಿತರೆ ಐಕಮತ್ಯ ಉಳಿಯುತ್ತದೆ ಇಲ್ಲವಾದರೆ ಇಲ್ಲ ಎಂಬ ವಾದ ಮಾತ್ರ ಒಪ್ಪಲು ಸಾಧ್ಯವಿಲ್ಲ. ಇಂಗ್ಲಿಷ್ ಭಾಷೆ ಕೆಲವರಿಗೆ ಬೇಕು. ಅವರು ಓದಲಿ. ಸಂಸ್ಕೃತ ಕೆಲವರಿಗೆ ಬೇಕು. ಗೀತೆ, ಉಪನಿಷತ್ತು ಅರ್ಥಮಾಡಿಕೊಳ್ಳಲು ಇಷ್ಟಪಡುವವರು ಸಂಸ್ಕೃತ ಕಲಿಯಬೇಕು. ಇಲ್ಲವಾದರೆ ಆ ಗ್ರಂಥಗಳ ಸ್ವಾರಸ್ಯ ಸಿಕ್ಕುವುದಿಲ್ಲ. ಹಾಗೆಯೇ ವಿಜ್ಞಾನ ಚೆನ್ನಾಗಿ ಅಭ್ಯಾಸ ಮಾಡಲು ಇಂಗ್ಲಿಷ್ ಸಹಾಯ ಮಾಡುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ವಿಜ್ಞಾನದ ಗ್ರಂಥಗಳು, ಮಾಸಪತ್ರಿಕೆಗಳು, ವಾರಪತ್ರಿಕೆಗಳು ಬಹಳ ಚೆನ್ನಾಗಿವೆ. ಅವು ನಮ್ಮ


ಜ್ಞಾನದ ಬೆಳವಣಿಗೆಗೆ ಅತಿ ಅವಶ್ಯಕ; ಅದನ್ನು ಕಲಿಯುವ ಯೋಗ್ಯತೆ ಇರುವವರು ಇಂಗ್ಲಿಷ್ ಕಲಿಯಬೇಕು.

ಆದರೆ ನಮ್ಮ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ರುವ ಎಲ್ಲಾ ವಿದ್ಯಾರ್ಥಿಗಳೂ ವಿಜ್ಞಾನಿಗಳಾಗುವು ಲ್ಲ. ಅವರಿಗೆ ಇಂಗ್ಲಿಷ್ ಬೇಡವಾದ ಹೊರೆ. ದನ್ನು ಕಲಿಯಲು, ಕಲಿಸಲು ಆಗುವ ಶ್ರಮವೆಲ್ಲಾ ರ್ಥ. ನಮ್ಮ ಶಾಲಾ ಕಾಲೇಜುಗಳಲ್ಲಿರುವ ವಿದ್ಯಾ ಗಳು–ಉಪಾಧ್ಯಾಯರು ಎಷ್ಟು ಜನ ಇಂಗ್ಲಿಷ್ ಾಷೆಯುಲ್ಲಿ ಬರುತ್ತಿರುವ ಹೊಸ ಹೊಸ ಗ್ರಂಥಗಳನ್ನು ್ಯಾಗಸೀನ್‌ಗಳನ್ನು ನೋಡುತ್ತಾರೆ? ಅವರಿಗೆ ಅವರ ೋಟ್ಸೇ ಸರ್ವಸ್ವ. ಪರೀಕ್ಷೆಯಲ್ಲಿ ಪಾಸಾಗಲು ಕಷ್ಟು ''ನಂಬರು'' ಹೇಗಾದರೂ ಬಂದರೆ ಸಾಕು!

ನಂಬರಾರ್ಥಿಗಳೇ ಈಗ ಹೆಚ್ಚು. ಇವರಿಗೆಲ್ಲಾ ಂಗ್ಲಿಷ್ ದೊಡ್ಡ ಹೊರೆ. ಅದನ್ನು ಕಲಿಯಲು ರ್ಥವಾಗುವ ಸಮಯ ಶಕ್ತಿಯನ್ನು ಪ್ರಾಂತ್ಯ ಾಷೆಯ ಮಾಧ್ಯಮದಲ್ಲೇ ಜ್ಞಾನಾರ್ಜನೆಗೆ ಉಪ ೋಗಿಸಿದರೆ ಶಿಕ್ಷಣದ ಮಟ್ಟ ಕೂಡಲೇ ಉತ್ತಮಗೊ ುವುದರಲ್ಲಿ ಯಾವ ಸಂದೇಹವೂ ಇಲ್ಲ.

ಪ್ರತಿಭಾಶಾಲಿಗಳಾದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಐಚ್ಛಿಕ ಭಾಷೆಯಾಗಿ ಕಲಿಯಲು ಅವಕಾಶ ಕೊಟ್ಟರೆ ಸಾಕು. ಈಗ ಸಂಸ್ಕೃತ ಇದ್ದ ಹಾಗೆ.

ನಮ್ಮ ಹಳ್ಳಿಗಳಲ್ಲಿ; ಊರುಗಳಲ್ಲಿ ಎಷ್ಟು ಜನಕ್ಕೆ ''ಲಿಂಕ್'' ಭಾಷೆ ಬೇಕು? ಅವರಲ್ಲಿ ಎಷ್ಟು ಜನ ಅವರ ಜೀವಮಾನದಲ್ಲಿ ಡೆಲ್ಲಿ, ಬೊಂಬಾಯಿಗಳಲ್ಲಿ ವ್ಯವಹಾರ ನಡೆಸಬೇಕಾಗಿದೆ? ತಮ್ಮ ಊರಲ್ಲಿ, ತಮ್ಮ ಹಳ್ಳಿಯಲ್ಲಿ ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗಿರುವವರೇ 100ಕ್ಕೆ 99 ಜನ. ಅವರಿಗೆ ಅವರ ಮಾತೃಭಾಷೆಯೇ ಸಾಕು. ಉತ್ಸಾಹವಿದ್ದವರು; ಸಾಮರ್ಥ್ಯವಿದ್ದವರು, ಆವಶ್ಯಕತೆ ಇದ್ದವರು ಎಷ್ಟು ಭಾಷೆಗಳನ್ನು ಬೇಕಾದರೂ ಕಲಿಯುತ್ತಾರೆ. ಆದರೆ ಯಾರೋ ಕೆಲವರ ಹಿತಕ್ಕಾಗಿ, ಎಲ್ಲರೂ ಇಂಗ್ಲಿಷ್ ಹೊರೆ ಹೊತ್ತು ಜೀವನದ ಬಹುಭಾಗವನ್ನು ವ್ಯರ್ಥಗೊಳಿಸಬೇಕಾಗಿಲ್ಲ. ಆ ಹೊರೆ ಹೊರಲು ಅವರಿಗೆ ರಾಷ್ಟ್ರದ ಐಕ್ಯತೆಯ ಮರೀಚಿಕೆಯನ್ನು ತೋರಿಸಬೇಕಾಗಿಲ್ಲ. ಐಕ್ಯತೆ ಬೆಳೆಸುವುದು ಇಂಗ್ಲಿಷ್ ಭಾಷೆಯಲ್ಲಿ ಭಾಷಣ ಮಾಡುವಷ್ಟು ಸುಲಭವಲ್ಲ!



ಜಾಣ ನುಡಿಗಳು

ಹಕ್ಕುಗಳು ಮತ್ತು ಸಾಮಾನ್ಯ ಹಿತಗಳ ಭೋಗಕ್ಕಾಗಿ ಕೂಡಿದ ಮಾನವನ ಪರಿಪೂರ್ಣ ಸಂಸ್ಥೆಯೆ ರಾಜ್ಯ.

ಮಾನವರು ಮತ್ತು ಶಾಸ್ತ್ರಾಸ್ತ್ರಗಳೇ ಕಾನೂನಿನ ಶಕ್ತಿ ಪ್ರತಾಪಗಳು

ಪರಿಪೂರ್ಣ ಮಾನವನು ಪ್ರಾಣಿಗಳಲ್ಲಿ ಶ್ರೇಷ್ಠನು; ಕಾನೂನು ಮತ್ತು ನ್ಯಾಯದಿಂದ ನಿರ್ಲಿಪನಾದ ಮಾನವ ಎಲ್ಲರಿಗಿಂತಲೂ ಕನಿಷ್ಠನು.

ರಾಷ್ಟ್ರದ ಕಾನೂನು ಮತ್ತು ನ್ಯಾಯವು ಶಾಂತಿ, ಸುವ್ಯವಸ್ಥೆ ಮತ್ತು ನಾಗರಿಕತೆಗಳ ಶಾಶ್ವತ ಮತ್ತು ಆವಶ್ಯಕ ಅವಸ್ಥೆಯಾಗಿವೆ.

'ಭಕ್ತಿ'

ಶೈಲಜಾ

ಭಕ್ತಿಯ ಬಗ್ಗೆ ಬರೆಯುವ ಯೋಗ್ಯತೆ ನನಗೆ ಇಲ್ಲ ದಿರಬಹುದು. ಆದರೆ ಭಕ್ತಿಯ ರಸ ಸಾಗರದಲ್ಲಿ ಮಿಂದು ಪುನೀತರಾದ ಶರಣರ ನುಡಿಮುತ್ತುಗಳನ್ನು ನೆನೆಯುವಾಗ ಭಗವಂತನ ಸಾನಿಧ್ಯದಲ್ಲಿರುವಂತೆಯೇ ನನಗೆ ಭಾಸವಾಗುತ್ತದೆ. ಆ ಅಮೂಲ್ಯ ಸವಿಗಾಗಿ ಈ ಸಾಹಸ.

"ಭಕ್ತನ ಹೃದಯ ಭಗವಂತನ ಆವಾಸಸ್ಥಾನ. ಆತ ಸರ್ವಭೂತಗಳಲ್ಲಿಯೂ ಇರುವುದೇನೋ ನಿಜ. ಆದರೆ ಭಕ್ತನ ಹೃದಯದಲ್ಲಿ ವಿಶೇಷ ರೂಪದಿಂದ ಇರುತ್ತಾನೆ. ಜಮೀನುದಾರ ತನ್ನ ಎಸ್ಟೇಟಿನಲ್ಲಿ ಎಲ್ಲಿಬೇಕಾದಲ್ಲಿ ಇರಬಲ್ಲ. ಆದರೆ ಆತನನ್ನು ವಿಶೇಷವಾಗಿ ಆತನ ಬೈಠಕ್ ಖಾನೆಯಲ್ಲಿ ನೋಡಬಹುದು. ಭಕ್ತನ ಹೃದಯ ಭಗವಂತನ ಬೈಠಕ್ ಖಾನೆ" ಎಂದಿದ್ದಾರೆ ಶ್ರೀ ರಾಮಕೃಷ್ಣ ಪರಮಹಂಸರು. ಇಂಥ ಭಕ್ತರ ದರ್ಶನವೇ ಭಗವಂತನ ದರ್ಶನ. ಭಕ್ತರ ನುಡಿಗಳೇ ನಮಗೆ ಮಾರ್ಗದರ್ಶನದ ದಾರಿದೀಪಗಳು.

ಮಹಾತ್ಮ ಗಾಂಧೀಜಿ, ಅವರ ಪರಮಶಿಷ್ಯ ವಿನೋಬಾ, ಇವರಿಬ್ಬರೂ ಭಕ್ತಿಯ ಮಧುಪಾನ ಮಾಡಿ ದರಿದ್ರ ನಾರಾಯಣನ ಸೇವೆಯಲ್ಲಿ ಪರಮಾತ್ಮನನ್ನು ಕಂಡು ಜಗತ್ತನ್ನೇ ಬೆರಗುಗೊಳಿಸಿದ, ಬೆರಗುಗೊಳಿಸುತ್ತಿರುವ ಚೈತನ್ಯಪುರುಷರು. ಬಾಪೂಜಿ "ಭಕ್ತಿ ಮಾನವನ ಬಾಳಿಗೆ ಊರುಗೋಲು; ಭವಸಾಗರವನ್ನು ದಾಟಲು ಭಕ್ತಿ ಈಸುಗುಂಬಳ" ಎಂದಿದ್ದಾರೆ.

"ನಮ್ಮ ಬಾಳನೌಕೆಯ ಕೆಳಗೆ ಭಕ್ತಿಜಲವಿದ್ದ ಆ ನೌಕೆಯನ್ನು ಆನಂದದಿಂದ ಹುಟ್ಟುಹಾಕಿ ಸಾ ಬಹುದು" ಎಂದಿದ್ದಾರೆ ವಿನೋಬಾ ಗೀತಾಪ್ರವಚ ದಲ್ಲಿ.

"ಮೊದಲು ಕೈಗೆ ಎಣ್ಣೆ ಸವರಿಕೊಂಡು ಬ ಹಲಸಿನಹಣ್ಣು ಬಿಡಿಸಬೇಕು, ಇಲ್ಲದಿದ್ದರೆ ಕೈಗೆ ಅಂ ಹತ್ತಿಕೊಂಡು ಬಿಡುತ್ತದೆ. ಭಗವದ್ಭಕ್ತಿ ಎಂಬ ಎ ಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಂಸಾ ಕೆಲಸಕಾರ್ಯಗಳಲ್ಲಿ ಕೈ ಇಡಬೇಕು."

ಶ್ರೀ ರಾಮಕೃಷ್ಣಪರಮಹಂಸರು ಸಂಸಾರಿಗಳ ತೋರಿಸಿರುವ ಸುಲಭಮಾರ್ಗ ಇದು ರಾಗ-ದ್ವೇ ಆಶೆ-ಆಕಾಂಕ್ಷೆಗಳ ತವರು ಸಂಸಾರ. ರೋಗ, ಶೋ ದಾರಿದ್ರ್ಯ ಸಂಸಾರಿಯನ್ನು ಕಿತ್ತು ತಿನ್ನುವುದರಿಂ ಭಕ್ತಿಯ ರಸತೈಲವಿಲ್ಲದಿದ್ದರೆ ಸಂಸಾರ ಸಾಗರದಲ್ಲಿ ಜೀ ಬಹುಮುಖವಾಗಿ ತೊಳಲಾಡಬೇಕಾಗುತ್ತದೆ. ಆ ರಿಂದ ಹೇಗಾದರೂ ಮಾಡಿ ಭಕ್ತಿಯನ್ನು ದೊರಕಿಸಿಕೆ ಳ್ಳಬೇಕು.

"ಭಕ್ತಿಯೇ ಸಾರ, ನಿಜವಾದ ಭಕ್ತರಿಗೆ ಯಾ ಭಯವೇ ಆಗಲಿ, ಯಾವ ಚಿಂತನೆಯಾಗಲಿ ಇರದ ಅವನಿಗೆ ಗೊತ್ತಿದೆ ತನ್ನ ಯೋಗಕ್ಷೇಮವನ್ನೆಲ್ಲಾ ಭಗವ ತನೇ ನೇಡಿಕೊಳ್ಳುತ್ತಾನೆ ಎಂಬುದಾಗಿ; ಬೆಕ್ಕು ಇ ಯನ್ನು ಒಂದು ವಿಧದಲ್ಲಿ ಕಚ್ಚಿಕೊಂಡಿರುತ್ತದೆ, ಆದ ತನ್ನ ಮರಿಯನ್ನು ಬೇರೇ ವಿಧದಲ್ಲಿ"

ರಾಮಕೃಷ್ಣಪರಮಹಂಸರ ಈ ಉದಾಹರ ಯಂತೆ ನಮ್ಮ ಹೃದಯದಲ್ಲಿ ಭಕ್ತಿ ಅಂಕುರವಾಯಿತ ಎಂದರೆ ನಾವು ತಾಯಿ-ಬೆಕ್ಕಿನ ಬಾಯಿನಲ್ಲಿರುವ ಬೆಕ್ಕಿ ಮರಿಯಂತೆ ಭಗವಂತನ ಆಶ್ರಯದಲ್ಲಿ ನಿರ್ಭಯರಾಗಿ ಬಹುದು. ಆದರೆ ಭಕ್ತಿಯನ್ನು ದೊರಕಿಸಿಕೊಳ್ಳುವುದ ಹೇಗೆ? ಅದು ಮಾರುವ ವಸ್ತುವಲ್ಲ. ಚಿನ್ನ ಮಣ್ಣಿ ಗರ್ಭದಲ್ಲಿ ಅಡಕವಾಗಿರುವಂತೆ ಭಕ್ತಿ ಪ್ರತಿಯೊಬ್ಬ ಮಾ ವನ ಹೃದಯದ ಅಂತರಾಳದಲ್ಲಿ ಅಡಕವಾಗಿದೆ ಪ್ರಾಪಂಚಿಕ ಮೋಹದ ಕಲ್ಲು-ಮಣ್ಣು ಅದನ್ನು ಆವರಿ ಕೊಂಡುಬಿಟ್ಟಿವೆ. ಮಾನವನ ಹೃದಯದಲ್ಲಿರು

ಪ್ರೀತಿಯೇ ಭಕ್ತಿಯ ಕುರುಹು. ಎಲ್ಲಾ ಮಾನವರಿಗೂ ಪ್ರೀತಿಯ ವಸ್ತು ಒಂದು ಇರಲೇಬೇಕು. ಹೊನ್ನು-ಹೆಣ್ಣು-ಮಣ್ಣು" ಎಂದೇನೋ ಅದನ್ನು ಗುರುತಿಸಬಹುದು. ಇವು ಮೂರೂ ಅನಿತ್ಯವಸ್ತುಗಳಾದ್ದರಿಂದ ಮಾನವನ ಪ್ರೀತಿ ಘಾಸಿಗೊಳ್ಳುತ್ತದೆ. ತತ್ತರಿಸುತ್ತದೆ. ನಿರಾಶೆಗೊಳ್ಳುತ್ತದೆ. ಆದರೆ ಯಾವಾಗ ಪ್ರೀತಿ ಭಗವಂತನತ್ತ ಹರಿಯುವುದೋ ಆಗ ಅದು ಭಕ್ತಿ ಎನ್ನಿಸಿಕೊಳ್ಳುತ್ತದೆ. ಪೂಜ್ಯಭಾವಪೂರ್ಣ ಪ್ರೀತಿಯೇ ಭಕ್ತಿ. ನಮ್ಮ ಹೃದಯದಲ್ಲೇ ಗುಪ್ತಗಾಮಿನಿಯಾಗಿರುವ ಈ ಭಕ್ತಿಯ ಜರಿಯನ್ನು ಸಮೀಪಿಸುವ ದಾರಿ ಯಾವುದು?

ಅದಕ್ಕೆ ಮಾರ್ಗವನ್ನು ರಾಮಕೃಷ್ಣ ಪರಮಹಂಸರೇ ತೋರಿಸಿಕೊಟ್ಟಿದ್ದಾರೆ.


"ಸತತ ಭಗವಂತನ ನಾಮಗುಣ ಕೀರ್ತನೆ ಮತ್ತು ಪ್ರಾರ್ಥನೆ ಮಾಡುತ್ತಿರಬೇಕು.

ಹಳೆಯ ಚೊಂಬನ್ನು ದಿನವೂ ಬೆಳಗುತ್ತಿರಬೇಕು. ಎಲ್ಲೋ ಒಂದು ದಿನ ಬೆಳಗಿ ಬಿಟ್ಟರೆ ಏನಾದ ಹಾಗಾಯಿತು."

ಶ್ರೀ ರಾಮಕೃಷ್ಣಪರಮಹಂಸರು ಹೀಗೆ ಸರಳ; ಸುಲಭ ಮಾರ್ಗವನ್ನು ನಮಗೆ ತೋರಿಸಿಕೊಟ್ಟಿದ್ದಾರೆ.

"ಒಂದೇ ಅಖಂಡ ಆತ್ಮ, ಒಂದೇ ಶರೀರ, ಇವುಗಳಿಂದ ಪರಮಾತ್ಮ ಅನೇಕ ವಸ್ತುಗಳನ್ನು ರಚಿಸಿದ್ದಾನೆ. ಅವನ್ನು ಕಂಡು ಬಗೆಬಗೆಯ ಪರಸ್ಪರ ವಿರೋಧವಾದ ಒಳಿತು - ಕೆಟ್ಟ ಭಾವನೆಗಳೆಷ್ಟೋ ನಮಗೆ ಉಂಟಾಗುತ್ತವೆ. ಅವುಗಳಾಚೆ ನೆಗೆದು ನೈಜ ಶಾಂತಿಯನ್ನು ಅನುಭವಿಸಬೇಕಿದ್ದರೆ ಆ ವಸ್ತುಗಳನ್ನು ನಿರ್ಮಿಸುವವನನ್ನು ಹಿಡಿದುಕೊಳ್ಳಬೇಕು. ಅವನ ಗುರುತು ಮಾಡಿಕೊಳ್ಳಬೇಕು. ಆ ಗುರುತು ಆದರೆ ಈ ಭೇದ-ಜನಕ ಆಸಕ್ತಿ-ಜನಕ ಮೋಹವನ್ನು ತೊಡೆದುಹಾಕಲು ಸಾಧ್ಯವಾದೀತು. ಭಗವಂತನನ್ನು ಅರಿತುಕೊಳ್ಳುವ ಮಹಾ ಸಾಧನೆಯೇ ಭಕ್ತಿ. ಅದು ಸಾರ್ವಭೌಮ ಉಪಾಯ"

ಗೀತಾ ಪ್ರವಚನದಲ್ಲಿ ವಿನೋಬಾ ಕೊಟ್ಟಿರುವ ಅಮೂಲ್ಯ ಸಲಹೆ ಇದು. ಈ ಮೂವರು ಮಹನೀಯರು ತಾವು ಭಕ್ತಿಮಾರ್ಗದಲ್ಲಿ ನಡೆದು, ತಮ್ಮ ಅನುಭವದ ನಡಿಮುತ್ತುಗಳನ್ನು ನಮ್ಮ ಮಾರ್ಗದರ್ಶನಕ್ಕಾಗಿ ನೀಡಿದ್ದಾರೆ. ಅವರ ಆಶೀರ್ವಾದದ ನಮ್ಮ ಪ್ರಯತ್ನವನ್ನು ವಿಫಲವಾಗಿಸಲಾರದು. ನಮ್ಮನ್ನು ಭಕ್ತಿಯ ಭವ್ಯ ಬಾಗಿಲಿನಲ್ಲಿ ತಂದುಬಿಡುವ ಭಕ್ತರ ಶ್ರೀಚರಣಗಳಲ್ಲಿ ಈ ಕುಸುಮ ಅರ್ಪಿತ.



8. ಶ್ರೀಮಂತ ಮತ್ತು ಸಂತೋಷದಾಯಕ ನಾಗರಿಕತೆಯ ನಿರ್ಮಾಣದ ಮಹಾನ್ ಪ್ರಯತ್ನದಲ್ಲಿ ಕಾನೂನು ಮಹತ್ವದ ಮತ್ತು ಅನಿವಾರ್ಯದ ಪಾತ್ರವನ್ನಾಡುತ್ತದೆ. [ಈ. ಬೊ. ಹೀವರ್]

9. ಕಾನೂನು ಕೇವಲ ನ್ಯಾಯವಲ್ಲ ಅಥವ ಶಕ್ತಿಯಲ್ಲ,ಅದು ಇವೆರಡರ ಪರಿಪೂರ್ಣ ಸಂಗಮ. ಸರ್ಕಾರದ ಮುಖೇನ ಜನತೆಯೊಂದಿಗೆ ಮಾತನಾಡುವ ನ್ಯಾಯವದು. [ಸಾಮಂಡ್]

10. ಕಾನೂನಿನ ಕಾರ್ಯಗಳು ನಾಲ್ಕು: ಜೀವನಾಂಶವನ್ನು ಒದಗಿಸುವುದು; ಸಮೃದ್ಧಿಯನ್ನು ಸೃಷ್ಟಿಸುವುದು, ಸ್ವಾತಂತ್ರ್ಯವನ್ನು ಮನ್ನಿಸುವುದು, ಸುರಕ್ಷತೆಯನ್ನು ಕಾಪಾಡುವುದು. [ಜೆ. ಬೆಂಥಾಮ್]

ಅಪ್ಪಯ್ಯ ದೀಕ್ಷಿತ

—ರಾಜೀವ

ನೂರಾರು ಗ್ರಂಥಗಳನ್ನು ಬರೆದಿರುವವರಲ್ಲಿ ಅಪ್ಪಯ್ಯ ದೀಕ್ಷಿತರೂ ಒಬ್ಬರು. ಅಲಂಕಾರ ಶಾಸ್ತ್ರದಲ್ಲಿ ಮೂರು ಗ್ರಂಥಗಳು ಇವರ ಕಾಣಿಕೆ. ಕುವಲಯಾನಂದವು ಅಲಂಕಾರ ಶಾಸ್ತ್ರದ ಪ್ರಾರಂಭಿಕ ಗ್ರಂಥಗಳಲ್ಲೊಂದು. ಅಮುಂ ಕುವಲಯಾನಂದಂ ಅಕರೋದಪ್ಪದೀಕ್ಷಿತಃ। ನಿಯೋಗಾದ್ವೇಂಕಟಪತೇರ್ನಿರುಪಾಧಿಕೃಪಾನಿಧೇಃ।। ಚಂದ್ರಾಲೋಕದ ಲಕ್ಷ್ಯಲಕ್ಷಣ ಶ್ಲೋಕಗಳಲ್ಲದೆ ತನ್ನ ಸ್ವಂತ ಅಭಿಪ್ರಾಯಗಳನ್ನೂ ಇತರರಿಂದ ಆರಿಸಿದ ಉದಾಹರಣೆಗಳನ್ನೂ ಕುವಲಯಾ ನಂದದಲ್ಲಿ ಕೊಡುತ್ತಾನೆ. ಚಂದ್ರಾಲೋಕದ ನೂರು ಅಲಂಕಾರಗಳಿಗೆ ಮತ್ತೆ ಹದಿನೈದು ಅಲಂಕಾರಗಳನ್ನು ಸೇರಿಸಿ ನೂರ ಹದಿನೈದು ಅಲಂಕಾರಗಳ ವಿವರಣೆ ಕುವಲಯಾನಂದದಲ್ಲಿದೆ. ವೃತ್ತಿವಾರ್ತಿಕ, ಕುವಲಯಾನಂದಗಳನ್ನು ಬಿಟ್ಟರೆ ಚಿತ್ರ ಮೀಮಾಂಸೆಯು ಇವರ ಮೂರನೇ ಕೃತಿ. ಇದು ಅರ್ಧಾಂತಕವಾಗಿದ್ದರೂ ಸಂತೋಷಜನಕವಾಗಿದೆ–

> ಅಪ್ಯರ್ಧಚಿತ್ರಮೀಮಾಂಸಾ ನ ಮುದೇ ಕಸ್ಯ ಮಾಂಸಲಾ।
>
> ಅನೂರುರಿವ ಧರ್ಮಾಂಶೋರರ್ಧೇಂದುರಿವ ಧೂರ್ಜಟೇಃ।।

ಲಕ್ಷಣರತ್ನಾವಳೀ ಎಂಬ ಮತ್ತೊಂದು ಕೃತಿಯಲ್ಲಿ ನಾಟಕದ ಪಾರಿಭಾಷಿಕ ಪದಗಳಾದ ನಾಂದೀ, ಸೂತ್ರಧಾರಿ, ಪೂರ್ವರಂಗ, ಪ್ರಸ್ತಾವನಾದಿ ಪದಗಳ ವಿವರಣೆಗಳನ್ನು ಕೊಟ್ಟಿದ್ದಂತೆ ತಿಳಿಯಬರುತ್ತದೆ. ಅಪ್ಪದೀಕ್ಷಿತ ಅಪ್ಪಯದೀಕ್ಷಿತ, ಅಪ್ಪಯ್ಯದೀಕ್ಷಿತ ಎಂಬ ಮೂರು ಹೆಸರುಗಳಿಂದ ದೀಕ್ಷಿತರು ಕರೆಯಲ್ಪಡುತ್ತಾರೆ.

ಜಗನ್ನಾಥ ಪಂಡಿತನು ದೀಕ್ಷಿತರ ಮೇಲೆ ಆರಿಸಿದ ಬೈಗುಳ ಮಳೆ ಸುರಿಸಿದ್ದಾನೆ. ದೀರ್ಘಶ್ರವಸ್, ದ್ರವಿಡಪುಂಗವ, ದ್ರವಿಳಳಶಿಶು ಇತ್ಯಾದಿ. ಅದ್ವೈತವೇದಾಂತ ಪ್ರತಿಪಾದಕರಲ್ಲಿ ಅಗ್ರಗಣ್ಯನೂ, ಶಿವಭಕ್ತಾಗ್ರೇಸರನೂ ಆದ ದೀಕ್ಷಿತನು ಎಪ್ಪತ್ತೆರಡು ವರ್ಷಗಳ ಕಾಲ ಬಾಳಿ ನೂರು ಕೃತಿಗಳ ರಚನೆ ಮಾಡಿದನೆಂದು ತಿಳಿಯ ಬರುತ್ತದೆ–ಕಾಲೇನ ಶಂಭುಃ ಕಿಲ ತಾವತಾಪಿ ಕಲಾಶ್ಚತುಷ್ಷಷ್ಟಿಮಿತಾಃ ಪ್ರಣಿನ್ಯೇ। ದ್ವಾಸಪ್ತತಿಂ ಪ್ರಾಪ್ಯ ಸಮಾಃ ಪ್ರ।। ಬಂಧಾನ್ ಶತಂ ವ್ಯಧಾದಪ್ಪಯದೀಕ್ಷಿತೇಂದ್ರ।। ಕ್ರಿ.ಶ. 1554–1626 ಸಾಮಾನ್ಯವಾಗಿ ಸರ್ವಮಾನ್ಯವಾದ ದೀಕ್ಷಿತರ ಜೀವಿತ ಕಾಲ. ಚಿನ್ನಬೊಮ್ಮ, ವೆಂಕಟರು ವೆಲ್ಲೂರಿನ ದೊರೆಗಳೂ ದೀಕ್ಷಿತರ ಆಶ್ರಯದಾತರೂ ಆದ ಪ್ರಭುವರ್ಯರುಗಳು. ಶಿವಾದ್ವೈತ ನಿರ್ಣಯವು ದೀಕ್ಷಿತರ ವೇದಾಂತ ಕೃತಿ. ರಂಗರಾಜ ಎಂಬುವರು ದೀಕ್ಷಿತರ ತಂದೆ. ಇತ್ತೀಚಿನ ಸಂಶೋಧನೆಗಳಿಂದ ಅಪ್ಪಯದೀಕ್ಷಿತರೆಂಬ ಹೆಸರುಳ್ಳ ಮೂವರು ವಿದ್ವಾಂಸರು ಅದೊಂದೇ ವಂಶದಲ್ಲಿ ಹುಟ್ಟಿದ್ದರೆಂದು ತಿಳಿಯಬರುವುದರಿಂದ ದೀಕ್ಷಿತರ ಕಾಲ, ಕೃತಿಗಳ ನಿರ್ಣಯ ವಿಚಾರವು ಮತ್ತಷ್ಟು ಗೊಂದಲವಾಗುತ್ತದೆ.

ಶಿಕ್ಷಣದಲ್ಲಿ ಪ್ರೇರಣೆ ಪ್ರಯತ್ನ

ಡಾ|| ಡಿ.ಎಸ್. ಕರ್ಕಿ

ಕ್ಷಣದಲ್ಲಿ ಅತ್ಯಂತ ಪ್ರಯೋಜನಕರವಾದ ಅಂಶಗ ಲ್ಲಿ 'ಪರಂಪರೆ' ಮತ್ತು 'ಪ್ರಯತ್ನ' ಇವು ಎರಡು ುಖ್ಯವಾದವುಗಳು ಎಂದು ನಾನು ಬಗೆದಿದ್ದೇನೆ. ರಂಪರೆಯ ಪ್ರಕಾಶ ದೊರೆಯಬೇಕಾದರೂ ಅದು ಾಧನೆಯಿಂದಲೇ ಸಾಧ್ಯ· ಹೀಗೆ ಶಿಕ್ಷಣ ಒದಗಿಸುವ ್ತಿತ್ವದ ವಿಕಾಸಕ್ಕೆ ಸಾಧನೆ ಅತ್ಯಾವಶ್ಯಕ. ವ್ಯಕ್ತಿ ್ತಿಯ ಜೀವನದ ಉದ್ದಕ್ಕೂ ಸಾಗುವ ಹಾಗೂ ಾಗಬೇಕಾದ ಸಾಧನೆಯದು. ಈ ಸಾಧನೆಗೆ ಮೊದ ೊದಲು ಬಾಹ್ಯಪ್ರೇರಣೆ ಬೇಕಾಗುವದೇನೋ ನಿಜ. ದರೆ ಬರಬರುತ್ತ ಬಾಹ್ಯಪ್ರೇರಣೆ ಸ್ವಯಂ ಪ್ರೇರಣೆಗೆ ಾರಿ ಮಾಡಬೇಕು. ಎಂದರೆ ಬಾಳಿನ ಗುರಿಗೆ ಮುನ್ನ ಸುವ ಶಕ್ತಿ ಮುಖ್ಯವಾಗಿ ಒಳಗಿನಿಂದ ಧಾವಿಸಿಬರ ೇಕು, ಹಾಗಾದಾಗ ಅದು ಸ್ವಯಂಪ್ರೇರಣೆಯಾಗಿ ಿಣಮಿಸುವುದು. ಸ್ವಯಂ ಪ್ರೇರಣೆ ಉಂಟಾದಾಗ ೇಸರವೆಂಬುದು ಇರದು. ಅದು ಸಂತೋಷದ ದಾರಿ ುಲ್ಲಿ ಮನುಷ್ಯನನ್ನು ಸಂತತವಾಗಿ ಮುನ್ನಡಿಯಿಡಿ ುತ್ತ ಹೋಗುತ್ತದೆ. ಮುಂದೆ ಅಡಿ ಇಡೆ ಸ್ವರ್ಗ ಂದು ಸರ್ವಜ್ಞನು ಆಡಿದ ಮಾತು ಈ ದೃಷ್ಟಿಯಿಂದಲೂ ತ್ಯ.

ಪರಂಪರೆಯ ದೃಷ್ಟಿಯಿಂದ ನಾವು ನಿಜವಾಗಿಯೂ ಭಾಗ್ಯವಂತರು. ನಮ್ಮ ಸಂಸ್ಕೃತಿಯ ಪರಂಪರೆ ಸುದೀರ್ಘವಾದುದು. ಅದೆಷ್ಟೋ ಧೀಮಂತರು ಸದ್ಭಾವ ಶ್ರೇಷ್ಠರು, ಸತ್‌ಕ್ರಿಯಾ ನಿಷರು ತಮ್ಮ ತಮ್ಮ ರೀತಿಯಲ್ಲಿ ಜೀವನ ಸಾಫಲ್ಯವನ್ನು ಸಾಧಿಸಿ ನಮಗಾಗಿ ನಮ್ಮ ಬೆಳವಣಿಗೆಗಾಗಿ ಬೆಳಕನ್ನು ಬಿಟ್ಟು ಹೋಗಿದ್ದಾರೆ. ಆ ಬೆಳಕಿಗೆ ನಮ್ಮ ಮನ ತೆರೆದಾಗ ತೆರೆದ ಮನದಲ್ಲಿ ಬೆಳಕು ಸುಳಿದು ಬಂದಾಗ ಅದು ನಮಗೆ ಶಿಕ್ಷಣದ ಒಂದು ಮಹತ್ವದ ಅಂಶವಾಗಿ ಪರಿಣಮಿಸುತ್ತದೆ. ಮನ ತೆರೆಯುವುದೇ ಪ್ರೇರಣೆ. ತೆರೆದ ಮನದಲ್ಲಿ ಬೆಳಕನ್ನು ತುಂಬಿಕೊಳ್ಳುತ್ತ ಹೋಗುವುದೇ ಸಾಧನೆ. ಈ ಸಾಧನೆಯಿಂದ ಒಬ್ಬ ವ್ಯಕ್ತಿಗೆ ಮಾತ್ರ ಕಲ್ಯಾಣವಾಗುವದೆಂದಲ್ಲ. ಆತನ ಸುತ್ತಮುತ್ತಲೂ ಜೀವಿಸುವ ಜೀವಿಗಳ ಕಲ್ಯಾಣಕ್ಕೂ ಅದು ದಾರಿ ಮಾಡಬಹುದು. ದಾರಿ ಮಾಡಬಲ್ಲದು. ಹಣತೆಯಿಂದ ಹಣತೆ ಹೊತ್ತಿಕೊಳ್ಳುವುದು, ಒಂದು ಜ್ಯೋತಿಯಿಂದ ಉಳಿದ ಕಿರುಜ್ಯೋತಿಗಳು ಬೆಳಗುವುದು; ಬೆಳಗಬೇಕಾದುದು ಹೀಗೆ. ನಮ್ಮ ಸಂಸ್ಕೃತಿಯ ಪರಂಪರೆಯ ದಾರಿಯನ್ನು ದೀಪಿಸಿದ ಜ್ಯೋತಿ ಹಿರಿ-ಕಿರಿಯ ಜ್ಯೋತಿಗಳು ಉಂಟೇ ಉಂಟುಬೆ ಗುರು ಶಿಷ್ಯರಲ್ಲಿ ಇದು ಸರಿಯಾದ ಶಿಕ್ಷಣದಲ್ಲಿ ಇರಬೇಕಾದ ಜೀವಂತತನದ ಲಕ್ಷಣ. ಹೃದಯ ವಂತಿಕೆಯ ಹವಣ.



'ಸಮರವೀರ'

ರಣರಂಗದಲಿ ತನ್ನ ಹರಣವನು ತೃಣ
ಮಾಡಿ ಹೆಣಗಾಡುವನು ವೀರಾಗ್ರಣಿ;
ನೋವ ಕಾವಿನಲಿ ಬೆಂದು ನೊಂದರೂ
ತನ್ನ ಛಲದ ನಿಲುವನು ಬಿಡನು ಕರ್ಮವೀರ!
ಶತ್ರುವನು ಹೊಡೆದಟ್ಟಿ ಮೃತ್ಯುವನು ಗೆದ್ದು,
ರಕುತಮೋಕಳಿಯಲಿ ಮಿಂದು ಬಂದವನು ಯೋಧ!
ತನ್ನ ದೇಹ ಶಕ್ತಿಯ ಬಲದಿ, ಟ್ಯಾಂಕುಗಳ ಪುಡಿಗುಟ್ಟಿ
ಸಿಡಿಗುಂಡುಗಳ ಗುಡುಗಾಡಿ, ಮುಷ್ಟಿಯನು ಕಟ್ಟಿ
ನೆತ್ತರಿನ ತೊರೆಯಲ್ಲಿ ಮುಂದಿಟ್ಟಡಿಯ ಹಿಂದೆಗೆಯದವ ಶೂರ.
ದೇಶ ಭಕ್ಷಕರ ಸೀಳಿ, ಬಿರುಗಾಳಿಯಂತೇಳಿ
ರಾಷ್ಟ್ರರಕ್ಷಣೆಯ ಹೊಣೆಯಲ್ಲಿ ಮುಂದಾಳುತನ ತಾಳಿ;
ಮಾತೃ ಭೂಮಿಯ ಸುಖಕೆ,ತನ್ನ ಜೀವವನೆ ತೆರುವವನು ಸಮರವೀರ!
ಶತ್ರುಗಳ ದರ್ಪದಾ ದಬ್ಬಾಳಿಕೆಗೆ ಮಣಿಯದೆಯೆ,
ಸ್ವಾರ್ಥ-ಬುದ್ಧಿಯ ತ್ಯಜಿಸಿ, ಶಕ್ತಿ ಮೀರುತೆದುಡಿದು
ಮುಕ್ತಿಯನು ಪಡೆಯುವವ, ನಾಯಕನ ನುಡಿಯಂತೆ
ನಡೆಯುವ ಸಾಹಸಿಯೆ ಸಂಗ್ರಾಮ ವೀರ
ವೀರ ಮರಣವ ನಪ್ಪುವವ ಕೊಳುಗುಳದಿ ಧೀರ,
ಅಮರ-ಕಾಯನೆ ನಮ್ಮ ಸಮರ ಪ್ರಿಯ!!
ಶಿಸ್ತಿನಿಂ ಕೂಡಿ. ಗಸ್ತು ಹೊಡೆಯುತ ನಿಂತು;
ಜನನಿ-ಜನ್ಮ ಭೂಮಿಯ ಭದ್ರತೆಯ ಬಿಗಿಮಾಡಿ
ಬರಿಕಾಳಗದ ಕೆಚ್ಚಿಂದ, ಅರಿಯ ಕಿಚ್ಚನು ಕೊಚ್ಚಿ;
ತನ್ನ ಮಾತೃ ಭೂಮಿಯ ಗೌರವಕೆ ಊಣ ಬರದಂತೆ,
ನಡೆಯುವ ದೇಶಪಾಲಕನೆ ನಮ್ಮ ವೀರ ಸೈನಿಕನಲೆ!
ಗುಡುಗಿನಂತಹ ಗುಂಡ ಶಬ್ದಕೆ ತನ್ನ ಗಂಡೆದೆಯನೊಡ್ಡಿ
ಹೇಡಿ ವೈರಿಯ ಗೊಡ್ಡು ಬೆದರಿಕೆಯ ಪುಡಿಮಾಡಿ,
ಗಡಿನಾಡ ಎಡೆಬಿಡದೆ ಧೀರತನದಲಿ ಕಾಯ್ವ,
ಸಮರ-ಲೋಲನೆ ನಮ್ಮ ಧೀರ ವೀರಾಗ್ರಣಿ!
ಕಲಿಯುಗದ ಕಾಳಗದಿ ಕಲ್ಕಿ ಯೋಧಾಗ್ರಣಿ!!

—ಎಂ ಎಸ್. ಜಯರಾಮ ರಾಜ ಅರಸ್.

ಗೀತಾ ಸಂದೇಶ

H. G. ಹುಚ್ಚಯ್ಯ

ಸಂದೇಶವೆಂದರೆ ಸಮಾಚಾರ. ಸಮಾಚಾರವೆಂದರೆ ಯಾವುದಾದರೂ ಒಂದು ವಿಚಾರವನ್ನು ತಿಳಿಸುವುದು; ಗೀತಾ ಸಂದೇಶವೆಂದರೆ ಶ್ರೀ ಕೃಷ್ಣನು ಗೀತೆಯ ಮೂಲಕ ಮನುಷ್ಯ ವರ್ಗಕ್ಕೆ ತಿಳುಹಿಸಿದ ಅಂದರೆ ಉಪದೇಶಿಸಿದ ವಿಷಯ. "ಯದಾ ಯದಾಹಿಧರ್ಮಸ್ಯಗ್ಲಾನಿರ್ಭವತಿ ಭಾರತ| ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಂ|| ಪರಿತ್ರಾಣಾಯ ಸಾಧೂನಾಂ, ವಿನಾಶಾಯಚ ದುಷ್ಕೃತಾಂ|| ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ||"

ಎಂದುದಾಗಿ ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿರುವಂತೆ ದ್ವಾಪರಯುಗದ ಅಂತ್ಯದಲ್ಲಿ ಧರ್ಮಕ್ಕೆ ಹಾನಿಯೂ ಅಧರ್ಮಕ್ಕೆ ಶ್ರೇಯಸ್ಸೂ ಉಂಟಾದುದರಿಂದ ದುಷ್ಟರನ್ನು ನಾಶಮಾಡಿ ಶಿಷ್ಟರನ್ನು ಕಾಪಾಡುವುದರ ಮೂಲಕ ಭಗವಂತನು ಶ್ರೀ ಕೃಷ್ಣನ ಅವತಾರ ಮಾಡಿದನು. ಈ ಕಾಲದಲ್ಲಿ ಎಲ್ಲೆಲ್ಲಿ ನೋಡಿದರೂ ನಾಸ್ತಿಕತೆಯು ಹೆಚ್ಚುತ್ತಾ ಬಂದು ಅನೇಕರಿಗೆ ದೇವರು ಎಂಬುದೇ ನಂಬಿಕೆ ಇಲ್ಲದೆ ಹೋಗುವುದು, ಆದರೆ ಮುಂದಿನ ಕಾರಣಗಳಿಂದ ದೇವರು ಇರುವಿಕೆಯು ನಿಜವೆಂದು ಸಿದ್ಧವಾಗುವುದು.

ಎಂಬತ್ತನಾಲ್ಕು ಲಕ್ಷ ಜೀವರಾಶಿಗಳಲ್ಲಿ ಮನುಷ್ಯನೇ ಅತ್ಯಂತ ಶ್ರೇಷ್ಠನೆಂಬುದು ನಿರ್ವಿವಾದವಾಗಿರುತ್ತೆ. ಪ್ರತಿಯೊಂದು ಜೀವರಾಶಿಯೂ ಅದರದರ ಪುಣ್ಯ ಪಾಪಂಗಳಿಗನುಸಾರವಾಗಿ ಜನ್ಮವನ್ನು ಎತ್ತಲೇಬೇಕಾಗುವುದು. ಹೇಗೆಂದರೆ ದ್ರಾಕ್ಷಿಯ ಗಿಡವನ್ನು ಬೆಳಸಿದವನು ದ್ರಾಕ್ಷಿಯ ಹಣ್ಣನ್ನೂ ಬೇವಿನ ಬೀಜವನ್ನು ಬಿತ್ತಿದವನು ಬೇವಿನ ಹಣ್ಣನ್ನೂ ಹೇಗೆ ಪಡೆಯುವನೋ ಹಾಗೆಯೇ ಪುಣ್ಯದಿಂದ ಸುಖಗಳಾಗಿಯೂ ಪಾಪವನ್ನು ಮಾಡಿದವರು ದು:ಖವನ್ನೂ ಅನುಭವಿಸಿಯೇ ತೀರಬೇಕಾಗುತ್ತದೆ. ಈ ಪುಣ್ಯ ಪಾಪಗಳು ಜಡವಾದುವು-ಇವು ಸುಖವನ್ನು ಅಥವಾ ದು:ಖವನ್ನೂ ಕೊಡಲಾರವು. ಹೇಗೆಂದರೆ ಒಬ್ಬ ತಪ್ಪಿತಸ್ಥನಿಗೆ ತಾನು ಮಾಡಿದ ತಪ್ಪೇ ಶಿಕ್ಷೆಯನ್ನು ಕೊಡಲಾರದು. ಅದಕ್ಕೆ ತಕ್ಕ ಶಿಕ್ಷೆಯು ಲಭಿಸುವುದು ನ್ಯಾಯಾಧೀಶನಿಂದ. ಇದನ್ನು ಚೈತನ್ಯವೆಂದರೂ ತಪ್ಪಾಗಲಾರದು. ಈ ಚೈತನ್ಯವೇ ದೇವರು ಎಂದು ಕರೆಯಲ್ಪಡುತ್ತಾನೆ.

ಅನೇಕ ಕೋಟಿ ಪ್ರಾಣಿಗಳು ಆಚರಿಸುವ ಕರ್ಮಗಳನ್ನು ತಿಳಿದು ಅವರವರ ಕರ್ಮಕ್ಕನುಗುಣವಾಗಿ ಫಲವನ್ನು ಕೊಡಲು ಅಗಾಧವಾದ ಪ್ರಪಂಚವನ್ನು ನಿರ್ಮಿಸಿರುವುದರಿಂದ ದೇವರು ಸರ್ವಜ್ಞನೂ ಸರ್ವಶಕ್ತನೂ ಆಗಿರುತ್ತಾನೆ. ಪ್ರಪಂಚಕ್ಕೆಲ್ಲಾ ದೇವರು ಒಬ್ಬ ನಾವು ಹಲವು ಎಂಬುಕ್ತಿಯಂತೆ ದೇವರೊಬ್ಬನೇ ಹೊರತು ಅನೇಕ ದೇವರುಗಳು ಇಲ್ಲ-ಅವನು ಅಖಂಡನೂ ನಿರಾಕಾರನೂ ಅಣುರೇಣು ತೃಣ ವ್ಯಾಪಕನೂ ಆಗಿರುತ್ತಾನೆ. ''ಚಿನ್ಮಯಸ್ಯಾದ್ವಿತೀಯಸ್ಯ ನಿಷ್ಕಳಸ್ಯಾ ಶರೀರಿಣಃ ಉಪಾಸಕಾನಾಂ ಕಾರ್ಯಾರ್ಥಂ ಬ್ರಹ್ಮಣೋ ರೂಪಕಲ್ಪನಾ", ಮತ್ತು "ಸದೇವಸೌ

ಮ್ಯೇದಮಗ್ರ ಆಸೀತ್, ಏಕಮೇವಾದ್ವಿತೀಯಂ, ಏಕಂ ಸದ್ವಿಪ್ರಾ ಬಹುಧಾ ವದಂತಿ, ಏಕಂ ರೂಪಂ ಬಹು ಧಾಯಃ ಕರೋತಿ॥ ಎಂಬ ಶೃತಿಗಳಂತೆಯೂ ಒಬ್ಬ ದೇವರೇ ಶಿವ, ವಿಷ್ಣು, ಶಂಕರ, ರಂಗ ಇತ್ಯಾದಿ ನಾಮಂಗಳಿಂದ ಕರೆಯಲ್ಪಡುತ್ತಾನೆ. ಈ ಕಾರಣಗ ಳಿಂದ ಭಗವಂತನು ಇರುವುದು ಯಾವ ಸಂದೇಹಕ್ಕೂ ಅವಕಾಶವಿಲ್ಲ.

ಭಗವಂತನು ಅರ್ಜುನನನ್ನು ಮುಂದುಮಾಡಿ ಕೊಂಡು ಜನರ ಉದ್ಧಾರಕ್ಕೋಸ್ಕರ ಉಪದೇಶಮಾಡಿ ದ್ದಾನೆ. ಗೀತೆಯಲ್ಲಿನ ವಿಷಯಗಳನ್ನು ಶ್ರೀ ಕೃಷ್ಣನು ಅರ್ಜುನನಿಗೆ ಯುದ್ಧಭೂಮಿಯಲ್ಲಿ ಉಪದೇಶಿಸಿದ್ದಾನೆ. ''ಮಮೈವಾಂಶೋಜೀವ ಲೋಕೇ ಜೀವ ಭೂತಸ್ಸನಾ ತನ:" ಎಂಬುದಾಗಿ ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿರು ವಂತೆ ಮನುಷ್ಯನೇ ಆದಿಯಾಗಿ ಸರ್ವವೂ ಭಗವಂತನ ಅಂಶವಾಗಿದೆ. "ಜಂತೂನಾಂ ನರಜನ್ಮದುರ್ಲಭಂ" ಎಂಬುದಾಗಿ ಶ್ರೀಮಚ್ಛಂಕರಭಗವತ್ಪಾದರು ಅಪ್ಪಣೆ ಕೊಡಿಸಿದ ಪ್ರಕಾರ ಎಲ್ಲಾ ಪ್ರಾಣಿಗಳ ಜನ್ಮಗಳಿ ಗಿಂತಲೂ ಮನುಷ್ಯ ಜನ್ಮವೇ ಶ್ರೇಷ್ಠವಾದುದು. ಆದರೆ ''ಆಹಾರ ನಿದ್ರಾಭಯ ಮೈಥುನಂಚ ಸಾಮಾನ್ಯ ಮೇತತ್ಪಶುಭಿರ್ನರಾಣಾಂ", ಧರ್ಮೋಹಿತೇಷಾಮಧಿ ಕೋವಿಶೇಷೋ ಧರ್ಮೇಣಹೀನಾ: ಪಶುಭಿಸ್ಸಮಾನಾ, ಎಂಬ ವಾಕ್ಯದಂತೆ ತಿನ್ನುವುದರಲ್ಲಿಯೂ ನಿದ್ರಿಸುವುದರ ಲ್ಲಿಯೂ ಮತ್ತು ಮರಣಕ್ಕೆ ಭಯಪಡುವುದರಲ್ಲಿಯೂ ಮೈಥುನದಲ್ಲಿಯೂ ಸಹ ಪಶುಗಳಿಗೂ ಮನುಷ್ಯರಿಗೂ ಯಾವ ವ್ಯತ್ಯಾಸವೂ ಇಲ್ಲ. ವಿಚಾರ ಮಾಡಿದರೆ ಮನುಷ್ಯನಲ್ಲಿ ಧರ್ಮವಿರುವುದರಿಂದ ಅವರು ಇತರ ಪ್ರಾಣಿಗಳಿಗಿಂತ ಶ್ರೇಷ್ಠರಾಗುತ್ತಾರೆ. ಆದರೆ ಯಾರಲ್ಲಿ ಧರ್ಮವಿಲ್ಲವೋ ಅವರು ಖಂಡಿತ ಪಶುಸಮಾ ನರಾಗುವರು.

''ಧರ್ಮ ಏವ ಹತೋ ಹಂತಿ ಧರ್ಮೋರಕ್ಷತಿ ರಕ್ಷಿತ:" ಅಂದರೆ ಧರ್ಮವನ್ನು ಯಾರು ಕಾಪಾಡುತ್ತಾರೋ ಅವರನ್ನು ಧರ್ಮವು ಕಾಪಾಡು ತ್ತದೆ; ಧರ್ಮವನ್ನು ಯಾರು ಕೊಲ್ಲುತ್ತಾರೋ ಅವರನ್ನು ಧರ್ಮವು ಕೊಲ್ಲುತ್ತದೆ. ಆದುದರಿಂದ ಮಾನವನು ಧರ್ಮವನ್ನು ಕೊಲ್ಲದೆ ಧರ್ಮವನ್ನು ಕಾಪಾಡುವುದು ಅವನ ಕರ್ತವ್ಯವಾಗಿರುತ್ತದೆ. ಅಲ್ಲದೆ ಪುರುಷರು ಸಂಪಾದಿಸುವುದು ಪುರುಷಾರ್ಥವೆನ್ನಲ್ಪಡು ವುದು. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬಿವೇ ಪುರುಷಾರ್ಥಗಳು. ಈ ನಾಲ್ಕರಲ್ಲಿ ಮೊದಲನೆಯ ದಾದ ಧರ್ಮವೇ ಮುಖ್ಯವಾದುದರಿಂದ ಮೊದಲು ಅದನ್ನು ಸಂಪಾದಿಸಬೇಕಾಗಿದೆ. ಏತಕ್ಕೆಂದರೆ ಭೋಗಕ್ಕೆ ಸಾಧನವಾದುದೇ ಕಾಮವು. ಇದನ್ನು ಹೊಂದುವ ಸಾಧನವೇ ಅರ್ಥವು. ಈ ಅರ್ಥವನ್ನು ಹೊಂದುವ ಸಾಧನವೇ ಧರ್ಮವು, ಯಾವನು ಧರ್ಮ ದಿಂದ ಅರ್ಥವನ್ನು ಸಂಪಾದಿಸಿ ಧರ್ಮಕ್ಕೆ ಲೋಪವಿಲ್ಲ ದಂತೆ ವಿಷಯಗಳನ್ನು ಅನುಭವಿಸುತ್ತಾನೋ ಅವನು ಮೋಕ್ಷ ಅಂದರೆ ಸರ್ವದುಃಖರಹಿತವಾಗಿ ನಿತ್ಯಾನಂದ ವನ್ನು ಹೊಂದುತ್ತಾನೆ. ಆದಕಾರಣ ಧರ್ಮವು ಅರ್ಥ ಕಾಮ ಮೋಕ್ಷ ಇವುಗಳಿಗೆ ಸಾಧನವಾದುದರಿಂದ ಮನುಷ್ಯನನ್ನು ಇದು ಇಹಪರಗಳೆರಡರಲ್ಲಿಯೂ ಕಾಪಾ ಡುತ್ತದೆ.

''ಕಾಮಾರ್ಥಾವನುಪಾಯೇನ ಅಪ್ಸಮಾನೋ ವಿನಶ್ಯತಿ। ಕಾಮಾರ್ಥೌ ಲಿಪ್ಸಮಾನಸ್ತು ಧರ್ಮಮೇ ವಾದಿತಶ್ಚರೇತ್॥ ನಹಿಧರ್ಮಾದಪೈತ್ಯರ್ಥ ಕಾಮೋ ನಾಸ್ತಿ ಕದಾಚನ। ಉಪಾಯಂ ಧರ್ಮಮೇ ವಾಹುರ್ನ ತ್ರಿವರ್ಗಪ್ಯವಿಶಾಂಸತೇ ಎಂಬುದಾಗಿ ಶ್ರೀ ಕೃಷ್ಣನು ಯಾರು ಧರ್ಮದಲ್ಲಿ ದೃಷ್ಟಿಯಿಲ್ಲದೆ ಕೇವಲ ಅರ್ಥಕಾಮಗಳನ್ನು ಅಪೇಕ್ಷಿಸುತ್ತಾನೋ ಅವನು ಖಂಡಿತವಾಗಿಯೂ ದುಃಖವನ್ನು ಅನುಭವಿಸದೆ ಇರು ವುದಿಲ್ಲ ಎಂದಿದ್ದಾನೆ. ಏಕೆಂದರೆ ಮೋಸದಿಂದಾಗಲಿ ಕಳ್ಳ ತನದಿಂದಲಾಗಲಿ ಸಂಪಾದಿಸಿದ ಹಣವು ಕ್ಷೇಮವನ್ನು ಸರ್ವತ್ರ ಉಂಟುಮಾಡಲರಿಯದು. ಇದರಂತೆಯೇ ಅನ್ಯ ಸ್ತ್ರೀ ವಿಷಯದಲ್ಲಿಯೂ ಸಹ ಅಪೇಕ್ಷೆಪಡುವವನು, ಇಂದ್ರಿಯ ನಿಗ್ರಹವಿಲ್ಲದೆ ಮಾನ ಪ್ರಾಣಗಳ ಅನರ್ಥವನ್ನು ತಾನಾಗಿ ತಂದುಕೊಳ್ಳುವನು. ಆದುದರಿಂದ ಕಾಮ ಅರ್ಥಗಳನ್ನು ಹೊಂದಬೇಕಾದರೆ ಧರ್ಮದಿಂದ ಸಾಧ್ಯವೇ ಹೊರತು ಮತ್ಯಾವುದರಿಂದಲೂ ಹೊಂದಲಾರನು. "ಧರಿ

ಲೋಕಾನಿತಿಧರ್ಮ:" ಎಂಬ ವಚನದಂತೆ ಸಮಸ್ತ ಪ್ರಪಂಚಕ್ಕೂ ಧರ್ಮವೇ ಆಧಾರವಾಗಿದೆ. "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ತಸ್ಮಾದ್ಧರ್ಮಂ ಪರಮಂ ವದಂತಿ ಧಾರಣಾದ್ಧರ್ಮಮಿತ್ಯಾಹುಃ ಧರ್ಮೋಧಾರಯತೇ ಪ್ರಜಾಃ॥ ಯತ್ಸ್ಯಾತ್ ಧಾರಣ ಸಂಯುಕ್ತ: ಸಧರ್ಮ ಇತಿನಿಶ್ಚಯ:॥ ಎಂಬ ಅರ್ಥವು ಶೃತಿವಾಕ್ಯದಲ್ಲಿ ಘೋಷಿಸುತ್ತಿರುವುದರಿಂದ ಮಾನವನು ಇದನ್ನು ಆರಿತು ಸರ್ವಪ್ರಯತ್ನದಿಂದಲೂ ಧರ್ಮವನ್ನು ಸಂಪಾದಿಸಿ ಆ ಮೂಲಕ ತಮ್ಮ ಇಷ್ಟಾರ್ಥಗಳನ್ನು ಹೊಂದಬೇಕೇ ವಿನಾ ಅರ್ಥ ಕಾಮಗಳು ಸನ್ನಿಹಿತವಾಗುವುದಿಲ್ಲ; ಕೊನೆಗೆ ನಿರ್ವಿಕಾರವು ಅಲಭ್ಯವಾಗಿ ಎಷ್ಟು ಯುಗಗಳನ್ನು ಕಳೆದರೂ ಜನನ ಮರಣಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.

ಜಾಣ ನುಡಿಗಳು

ಸ್ವಾತಂತ್ರ್ಯರಹಿತ ಕಾನೂನು ತನ್ನ ಹೆಸರು ಮತ್ತು ಸ್ವರೂಪವನ್ನು ಕಳೆದುಕೊಂಡು ದಬ್ಬಾಳಿಕೆಯಾಗುತ್ತದೆ. ಕಾನೂನು ಇಲ್ಲದ ಸ್ವಾತಂತ್ರ್ಯವು ತನ್ನ ಹೆಸರು ಮತ್ತು ಸ್ವರೂಪವನ್ನು ಕಳೆದುಕೊಂಡು ಸ್ವೇಚ್ಛಾಚಾರವಾಗುತ್ತದೆ.

ಕಾನೂನು ನಿಸ್ಸಂದೇಹವಾಗಿ ದೊಡ್ಡ ದೋಷಗಳ ಸಂಹಾರಕ. ಆದರೆ ಅದು ಕೆಲವು ದೋಷಗಳಿಂದ ಪೀಡಿತವಾಗಿದೆ.

ಕಾನೂನಿನ ಲಾಭಗಳು ಹೆಚ್ಚಾಗಿದ್ದಂತೆ-ಅತ್ಯಧಿಕ ಕಾನೂನಿನ ಕೆಡಕುಗಳೂ ಹೆಚ್ಚು.

ಜ್ಞಾನಾನುಭವಗಳ ಸಮುದಾಯವೇ ಕಾನೂನು-ಅದರ ಒಪ್ಪಂದವೇ ಕಾನೂನು.

ವ್ಯಕ್ತಿ ಮತ್ತು ಸಮಾಜದ ನಡುವೆ ನಡೆದ ಒಪ್ಪಂದವೇ ಕಾನೂನು.

ಸಮಾಜ ಶಾಸ್ತ್ರ ಹಾಗೂ ಅರ್ಥಶಾಸ್ತ್ರವನ್ನು ಅಭ್ಯಸಿಸದ ವಕೀಲ ಸಾರ್ವಜನಿಕ ಶತ್ರು ಆಗುವ ಸಂಭವವುಂಟು.

ನಿಶ್ಶಬ್ದವಾಗಿ ಚಲಿಸುವ ಆಂತರಿಕ ಶಕ್ತಿಯೇ ಕಾನೂನು.

ಸಮರ ಕಾಲದಲ್ಲಿ ಕಾನೂನು ಮೌನವಾಗಿರುತ್ತದೆ.


ಆವಶ್ಯಕತೆಯು ಕಾನೂನು ಅರಿಯದು.

ನ್ಯಾಯ ಸಮ್ಮತ ಸಂಗತಿಗಳೆಲ್ಲವೂ ಗೌರವಾರ್ಹವೆನಿಸುವುವು.

ಇನ್ನೊಬ್ಬರ ಕೆಲಸದಲ್ಲಿ ಕೈ ಹಾಕದೆ ತನ್ನ ಕರ್ತವ್ಯವನ್ನು ತಾನು ನಿರ್ವಹಿಸುವುದೇ ನ್ಯಾಯ.

ನ್ಯಾಯವು ಒಂದು ಗುಣ. ಅದರ ಮೂಲಕ ಮಾನವನು ಪ್ರತಿಯೊಬ್ಬನಿಗೂ ಆತನ ನ್ಯಾಯವಾದ ಪಾಲು ನೀಡುತ್ತಾನೆ. ಇದು ಅವನ ಶಾಶ್ವತವಾದ ಮತ್ತು ನಿರಂತರವಾದ ಅಭಿಲಾಷೆಯಾಗಿದೆ.

ನಿಸರ್ಗದೊಂದಿಗೆ ಹೊಂದಿಕೊಂಡ ಸದ್ವಿವೇಕವೇ ಕಾನೂನು. ಅದು ವಿಶ್ವವ್ಯಾಪಕ, ಪರಿವರ್ತಿತ ಮತ್ತು ಶಾಶ್ವತ



ರಾಜನೀತಿ-ಶಾಸ್ತ್ರಕ್ಕೆ ಅರಿಸ್ಟಾಟಲ್ ಮಹಾಶಯನ ಕಾಣಿಕೆ

ಲೇಖಕ : ಆರ್ ಬ್ಯಾಡರಹಳ್ಳಿ ಶಿವಲಿಂಗಯ್ಯ, ಬಿ.ಎ.,

ಅರಿಸ್ಟಾಟಲ್ ಕಾಲ ಕ್ರಿ. ಪೂ. 384 ರಿಂದ 322. ಇವನು ಇಪ್ಪತ್ತು ವರ್ಷಗಳ ಕಾಲ ಪ್ಲೇಟೋವಿನ ವಿದ್ಯಾಪೀಠದಲ್ಲಿ (Plato Acadamy) ಉಪಾಧ್ಯಾಯನಾಗಿದ್ದು, ಅನಂತರ "ಅಥೆನ್ಸ್" ನಲ್ಲಿ "ಆಸಿಯಂ" ಎಂಬ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದನು. ಇದು ತತ್ತ್ವಶಾಸ್ತ್ರಜ್ಞರ ಕೇಂದ್ರನಾಗಿದ್ದಿತು.

ಅರಿಸ್ಟಾಟಲ್ ಒಬ್ಬ ಮಧ್ಯಮ ವರ್ಗದ ಸಂಸಾರಿ. ಇವನು ಸಾಮಾಜಿಕ ಜೀವನದಲ್ಲಿ ರಾಜ್ಯವೇ ಮನುಷ್ಯ ಜೀವನದ ಗುರಿಯೆಂದು ತಿಳಿಸಿದನು. ರಾಜ್ಯದಲ್ಲಿ ದುಷ್ಟ ಶಿಕ್ಷಣ, ಶಿಷ್ಟ ಪರಿಪಾಲನಾಕ್ರಮ ಸಮಾಜದ ಗುರಿ ಎಂದು ವಾದಿಸಿದನು. ಇವನು ಪ್ಲೇಟೋವಿನಂತೆ ಆದರ್ಶ ರಾಜ್ಯವನ್ನು ಪ್ರತಿಪಾದಿಸಲಿಲ್ಲ. ಆದರ ಬದಲು ನೈತಿಕ, ಧಾರ್ಮಿಕ, ಭಾವಗರ್ಭಿತ ದೃಷ್ಟಿಯಿಂದೊಡಗೂಡಿದ ಮನುಷ್ಯನ ಬಾಳ್ವೆಯೇ ಸುಖ ಜೀವನವೆಂದು ಸಾರಿದನು. ಇವನು ರಾಜ್ಯ ಶಾಸ್ತ್ರವನ್ನು ಸಮಾಜಶಾಸ್ತ್ರದಂತೆ ನಿರೂಪಿಸಿದ್ದಲ್ಲದೆ, ರಾಗದ್ವೇಷ ಪೂರಿತವಾದ ರಾಜ್ಯಕ್ಕೆ ಪರಮಾಧಿಕಾರವನ್ನು ಕೊಡುವ ಬದಲು ದೇಶದ ಕಾನೂನುಗಳಿಗೆ ಅಗ್ರಸ್ಥಾನವೀಯುವುದು ಒಳ್ಳೆಯದೆಂದನು

ರಾಜ್ಯ ಸರ್ಕಾರ ಮತ್ತು ಪ್ರಜಾಪ್ರಭುತ್ವದ ಬಗೆಗೆ ಇವನ ಅಭಿಪ್ರಾಯ.

ಮನುಷ್ಯನು ಸಮಾಜದಲ್ಲಿ ಹುಟ್ಟಿ; ಸಮಾಜದಲ್ಲಿಯೇ ಬೆಳೆದದ್ದರಿಂದ ಇವನು ಸಾಮಾಜಿಕ ಪ್ರಾಣಿ. ಮೊದಲು ಕಾಡುಪ್ರಾಣಿಗಳಂತೆ ವಾಸಿಸುತ್ತಿದ್ದ ಮನುಷ್ಯನು ಪ್ರಗತಿ ಹೊಂದಿದಂತೆಲ್ಲ ಕುಲಗಳು; ಗ್ರಾಮಗಳು ತಲೆದೋರಿದವು. ಮನುಷ್ಯನ ಸಾಮಾಜಿಕ ಜೀವನದಲ್ಲಿ ಸಂಸಾರ (ಕುಟುಂಬ) ಪ್ರಥಮ ಸೋಪಾನ; ರಾಜತ್ವ ಕೊನೆಯ ಹಂತ.

ರಾಜ್ಯದ ಉಗಮ ಸ್ವಾಭಾವಿಕ, ಕೃತಕವಲ್ಲ. ಇಚ್ಛೆಯೇ ರಾಜ್ಯೋತ್ಪತ್ತಿಗೆ ಕಾರಣ. ಕುಟುಂಬಗಳಿಂದ ಗ್ರಾಮಗಳೂ. ಗ್ರಾಮಗಳಿಂದ ರಾಜ್ಯಗಳೂ ನಿರ್ಮಾಣವಾಗಿವೆ. ರಾಜ್ಯದ ಸುಖವೇ ಪ್ರಜೆಗಳ ಸುಖ.

ಜನರು ಸುಖವಾಗಿರಲು ಕಾನೂನು ಅತ್ಯಗತ್ಯ. ಕಾನೂನಿನ ಪ್ರಕಾರ ವರ್ತಿಸದ ಜನರು ಕ್ರೂರರೂ ಅಪಾಯಕಾರಿಗಳೂ ಆಗಿರುತ್ತಾರೆ, ರಾಜ್ಯದ ಅಂಗವಾದ ಪ್ರಜೆಗಳು ರಾಜ್ಯಾಭಿವೃದ್ಧಿಗಾಗಿ ಶ್ರಮಿಸಬೇಕು. ಮನುಷ್ಯನ ಜನ್ಮಸ್ಥಳ ಮುಖ್ಯವಲ್ಲ. ಯಾವನು ಜನರಿಗೆ ತೀರ್ಪು (ಮತ) ಕೊಡಲು ಆಡಳಿ... ಹಾಗೂ ಅಭಿವೃದ್ಧಿಗೆ ಸೇವೆ ಸಲ್ಲಿಸಿರುವನೋ ಅವನೇ ನಿಜವಾದ ಪೌರ. ಪ್ರತ್ಯೇಕವಾದ, ಸ್ವತಂತ್ರ ಸರಕಾರ ಪಡೆದಿರುವುದೇ ರಾಜ್ಯದ ಮುಖ್ಯ ಲಾಂಛನ. ಸರ್ಕಾರಕ್ಕನುಗುಣವಾಗಿ ವರ್ತಿಸಬೇಕಾದ್ದು ಪೌರ...

ಕರ್ತವ್ಯ. ನೀತಿ ವಿರುದ್ಧವಾದ ಕಾನೂನನ್ನು ಜಾರಿಗೆ ತರುವ ರಾಜ್ಯ (ಸರ್ಕಾರ) ಬಹುಕಾಲ ನಿಲ್ಲದು. ಪ್ರಜಾ ಪ್ರಭುತ್ವದಲ್ಲಿನ ರಾಜ್ಯಾಡಳಿತದಲ್ಲಿ ಪ್ರತಿ ಪ್ರಜೆಗೂ ಅವಕಾಶವಿದ್ದೇ ಇದೆ. ಆದರೆ ಅದಕ್ಕೆ ತಕ್ಕ ಅರ್ಹತೆ ಯನ್ನು ಗಳಿಸಲು ವಿದ್ಯೆ ಕಲಿಯಬೇಕು.

ಸರಕಾರದ ಪದ್ಧತಿಗಳು

ಸಾಧನೆ ರಾಜ್ಯದ ಪ್ರಧಾನ ಕರ್ತವ್ಯ. ಸಾಧನೆ ಮಾಡುವ ಶಕ್ತಿಯೇ ಪ್ರಭುತ್ವವೆನಿಸುವುದು. ರಾಜ್ಯದ ಅಧಿಕಾರವನ್ನು ಪ್ರಯೋಗಿಸುವ ಮಾಧ್ಯಮವೇ ಸರ್ಕಾರ· ಪರಮಾಧಿಕಾರ ಒಬ್ಬನಲ್ಲಿ ಕೆಲವರಲ್ಲಿ ಅಥವಾ ಬಹುಜನ ಗಳಲ್ಲಿ ಇರುವುದು·

ರಾಜತ್ವ (Monorchy), ಶ್ರೀಮಂತ...... ಪ್ರಭುತ್ವ (Aristocracy), ಬಹುಜನ ಪ್ರಭುತ್ವ (Democracy)—ಇವು ಕ್ರಮಬದ್ಧ—ಸರ್ಕಾರ ಗಳು. ದಬ್ಬಾಳಿಕೆ (Tyranny), ಏಕ ಜಾತೀಯ ಪ್ರಭುತ್ವ (Oligarcly), ಬಹುನಾಯಕ ಪ್ರಭುತ್ವ --ಇವು ಕ್ರಮಬದ್ಧವಲ್ಲದ ಸರ್ಕಾರಗಳು.

ಶ್ರೀಮಂತ ಪ್ರಭುತ್ವ ಅತ್ಯಂತ ಶ್ರೇಷ್ಠವಾದದ್ದು. ಕೆಲವು ಪೌರರ ಪ್ರಭುತ್ವ ಸಮಾಜದ ಹಿತಸಾಧನೆಗಾಗಿ ಪ್ರಯೋಗ ನಡೆಸುವ ಪರಮಾಧಿಕಾರ. ಬಹುಸಂಖ್ಯಾತ ರಾದ ಶ್ರೀಮಂತರು, ಶ್ರೀಮಂತರ ಹಿತಸಾಧನೆಗೇ ಪರಮಾಧಿಕಾರ ಪ್ರಯೋಗಿಸಬಹುದು. ದಬ್ಬಾಳಿಕೆಯ್ರ ಪ್ರಭುತ್ವವಂತೂ ಅಕ್ರಮ ಸರ್ಕಾರ--ಪದ್ಧತಿ.

ಸರ್ಕಾರದ ಪದ್ಧತಿಗಳನ್ನು ಒರೆಗಲ್ಲಿನಿಂದ ಪರೀಕ್ಷಿ ಸುವುದು ಒಳ್ಳೆಯದು. ರಾಜ್ಯ (ಸರ್ಕಾರ) ವಿರುವುದು ಕೇವಲ ದ್ರವ್ಯಕ್ಕಲ್ಲ: ರಕ್ಷಣಾಬಲಗಳಿಗಲ್ಲ. ಬರಿಯ್ರ ವ್ಯಾಪಾರಕ್ಕಾಗಿಯೂ ಅಲ್ಲ; ಪ್ರಜೆಗಳನ್ನು ಸತ್ಪ್ರಜೆ ಗಳನ್ನಾಗಿ ಮಾಡುವುದೇ ಅದರ ಪರಮಧ್ಯೇಯ. ಇದಕ್ಕೆ ಸೌಶೀಲ್ಯ--ಸತ್ಯಗಳಿಂದೊಡಗೂಡಿದ ಅಧಿಕಾರ--ಸೂತ್ರ ಅತ್ಯಾವಶ್ಯಕ.

ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ--ಸ್ವಾತಂತ್ರ್ಯ ಮುಖ್ಯ. ಆಡಳಿತದಲ್ಲಿ ಸರದಿ ಪ್ರಕಾರ ಕೆಲಸಮಾಡುವ ಅಧಿಕಾರ ಪ್ರಜೆಗಳಿಗಿರಬೇಕು. ಅಧಿಕಾರಿಗಳನ್ನು ಅದೃಷ್ಟ ಸಂಖ್ಯೆಯಿಂದ ನೇಮಿಸಬೇಕು. ಆಡಳಿತ ಸ್ಥಾನಗಳಿಗೆ ನಿಲ್ಲುವ ಉಮೇದುವಾರರಿಗೆ ಆಸ್ತಿ-ಪಾಸ್ತಿಗಳಿರಬೇಕೆಂಬ ನಿಬಂಧನೆಗಳನ್ನು ರದ್ದು ಮಾಡಬೇಕು. ಒಮ್ಮೆ ಆಡಳಿತ ನಡೆಸಿದವರಿಗೆ ಮತ್ತೆ ಆ ಸ್ಥಾನಕ್ಕೆ ಬರಲು ಅವಕಾಶವಿರ ಕೂಡದು. ನ್ಯಾಯಾಂಗ ಶಾಖೆಯನ್ನು ಸಾಮಾನ್ಯ ಜನರಿಗೆ ವಹಿಸಬೇಕು. ರಾಜಕೀಯ ವಿಷಯಗಳನ್ನು ಬಹುಸಂಖ್ಯಾತರ ಒಪ್ಪಿಗೆಯಿಂದಲೇ ನಿರ್ಣಯಿಸಬೇಕು. ನ್ಯಾಯ ದೊರಕಿಸುವುದು, ಅಧಿಕಾರಿಗಳನ್ನು ಚುನಾಯಿ ಸುವುದು, ಆಡಳಿತದ ಮೇಲೆ ನಿಯಂತ್ರಣ ವಹಿಸುವುದು --ಮುಂತಾದ ಅಧಿಕಾರಗಳನ್ನು ಪ್ರಜೆಗಳಿಗೆ ಕೊಡ ಬೇಕೆಂಬುದು ಅರಿಸ್ಟಾಟಲನ ಅಭಿಪ್ರಾಯ.

ಅರಿಸ್ಟಾಟಲನ ಉತ್ತಮ ರಾಜ್ಯಕ್ಕೆ ಪೊಲಿಟಿ ಎಂದು ಹೆಸರು ಪೊಲಿಟಿ ಒಂದು ಸಮರ್ಪಕ ಹಾಗೂ ವ್ಯಾಜ್ಯ ರಹಿತ ರಾಜ್ಯ. ಇದು ರಾಜ್ಯಗಳ ವಿಡಂಬನವೂ ಹೌದು. ಪೊಲಿಟಿ; ಶ್ರೀಮಂತ ಪ್ರಭುತ್ವಕ್ಕೆ ಅನು ಗುಣವಾಗಿರುವುದು. ಇದು ಮನುಷ್ಯನ ಉತ್ತಮ ಜೀವನವನ್ನು ರೂಪಿಸುವ ಸಲುವಾಗಿ ಸ್ಥಾಪಿತವಾದದ್ದು. ಇವನು ಕೂಡ ಪ್ಲೇಟೋವಿನಂತೆ ಗುಲಾಮಗಿರಿಯನ್ನು ಸಮರ್ಥಿಸಿರುವನು. ಆಲೋಚನಾಸಭೆ, ಕಾರ್ಯಾಂಗ, ಶಾಸಕಾಂಗ—ಇವು ಪಾಲಿಟಿಯ ಮುಖ್ಯಾಂಶಗಳು.

ಒಟ್ಟಿನಲ್ಲಿ ಅರಿಸ್ಟಾಟಲ್ ಅಂದಿನ ರಾಜಕೀಯ ಸಂಪ್ರದಾಯ, ಸರ್ಕಾರದ ಕರ್ತವ್ಯ. ಜನತೆ ಮತ್ತು ಸರ್ಕಾರಗಳಲ್ಲಿ ಹೊಂದಾಣಿಕೆ, ಆಡಳಿತದ ಪರಮಾಧಿ ಕಾರ--ಮುಂತಾದ ವಿಷಯಗಳಲ್ಲಿ ರಾಜನೀತಿ ಶಾಸ್ತ್ರಕ್ಕೆ ಅಮೋಘವಾದ ಕಾಣಿಕೆಯನ್ನು ಸಲ್ಲಿಸಿ ಆ ಚಂದ್ರಾರ್ಕ ವಾದ ಕೀರ್ತಿ ಗಳಿಸಿದ್ದಾನೆ.



ಸಾಹಿತ್ಯ ಸಮೀಕ್ಷೆ

—ಸು. ರುದ್ರಮೂರ್ತಿಶಾಸ್ತ್ರಿ

ದೃಷ್ಟಿ :— ಕವಿ : ವಸಂತ ; ಪ್ರ : ಕೃಪಾಂಜಲಿ ಕಲಾವಿದರು, ಜಯನಗರ, ಬೆಂಗಳೂರು-೧೧.
ಪುಟಗಳು : ೪೪+೬ ; ಬೆಲೆ : ರೂ. ೨-೦೦.

ಈ ಸಂಕಲನದಲ್ಲಿ ಒಟ್ಟು ೨೮ ಕವನಗಳಿವೆ. ಕವಿಯ ದೃಷ್ಟಿ ಕೇವಲ ಬದುಕಿನ ಒಂದು ಭಾಗಕ್ಕೇ ಸೀಮಿತವಾಗಿರದೆ, ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯವನ್ನೂ ವಿಶಿಷ್ಟತೆಯನ್ನೂ ಸಾಧಿಸಿದೆ. ಸರಳವಾಗಿ ನೋಡುವ ಇವರ ವಿಚಾರಧಾರೆ ಕವನಗಳಿಗೆ ಒಂದು ನಿರಾಭರಣ ಸೌಂದರ್ಯವನ್ನು ಕೊಟ್ಟಿದೆ. ಕವಿಯ ಮನಸ್ಸು ಹಿಂದಿನ ಕಾವ್ಯಗಳಿಂದ ಸಾಕಷ್ಟು ಸಂಸ್ಕಾರ ಪಡೆದಿದ್ದರೂ ಅನನ್ಯತೆಯನ್ನು ಸಾಧಿಸಲು ಪ್ರಯತ್ನಿಸಿದೆ ಭಾವದ ಉತ್ಕಟತೆಯಿಂದ ಅರ್ಥ ಅಸ್ಪಷ್ಟವಾಗದೆ, ಹೇಳಬೇಕೆಂದಿರುವುದನ್ನು ನೇರವಾಗಿ ಹೇಳಲು ಪ್ರಯತ್ನಿಸಿದ್ದಾರೆ.

ಇಲ್ಲಿನ ಪ್ರಕೃತಿ ಗೀತೆಗಳಲ್ಲಿ ಒಂದು ಬಗೆಯ ನವಿರನ್ನೂ, ಕಲ್ಪಕತೆಯನ್ನೂ ಕಾಣಬಹುದು. 'ಪ್ರಕೃತಿಯ ಕರೆ' ಎನ್ನುವ ಕವನದಲ್ಲಿನ 'ಜೀವಿಯೆ ಪ್ರಕೃತಿಯು, ಜೀವವೆ ಪುರುಷನು, ಸಮರಸದಲ್ಲಿಯೆ ಜೀವನವು' ಎಂಬ ಸಾಲುಗಳು 'ಸರಸ ಜನನ, ವಿರಸ ಮರಣ ಸಮರಸವೇ ಜೀವನ' ಎನ್ನುವ ಬೇಂದ್ರೆಯವರ ಪದ್ಯದ ನೆನಪನ್ನು ಕೊಟ್ಟರೂ ಇಲ್ಲಿ ಒಂದು ಹೊಸ ಅರ್ಥದೊಡನೆ ಬಂದಿದೆ. 'ಜೀವಿಯೆ ಪ್ರಕೃತಿಯು, ಜೀವವೆ ಪುರುಷನು' ಎನ್ನುವ ಕಲ್ಪನೆ ಚೆನ್ನಾಗಿದೆ. 'ಪ್ರಕೃತಿಯ ಒಸಗೆ' ಒಂದು ಸಾರ್ಥಕ ಕವನ: ವಿಜ್ಞಾನ, ನೂರೆಂಟು ಭಯಾನಕ ಸಂಶೋಧನೆಗಳ ಫಲವಾಗಿ ಮಾನವ ಕೋಟಿಯನ್ನು ನಾಶಮಾಡುವ ಸಾಧನಗಳನ್ನು ಕಂಡು ಹಿಡಿದು ತನ್ನ ವಿಜಯ ಪತಾಕೆಯನ್ನು ಹಾರಿಸಿದಾಗ 'ಮಾನವೀಯತೆ ನಕ್ಕಿತು' ಹೃದಯವಿಲ್ಲದ ರೀತಿಯ ಈ ಸಾಹಸವನ್ನು ಕಂಡು. ಇಂದಿನ ನಮ್ಮ ವೈಜ್ಞಾನಿಕ ವಿಶ್ವದಲ್ಲಿ ಮಾನವೀಯತೆ ಮರೆಯಾಗುತ್ತಿದೆ. ಮಹಾತ್ಮರ ವಾಣಿಯನ್ನು 'ಎಲ್ಲರೂ ಹೇಳಿದರು ಎಲ್ಲರೂ ಕೇಳಿದರು ತಲೆದೂಗಿ ದೂರದಾ ಕಾಗೆ ಕೇಳಿತು.' ಕಾಗೆಯೇನೋ ಅರಿಯಲಾರದು. ಆದರೆ ಹೃದಯವಿರುವ ಮನುಷ್ಯನೂ ಕೇಳಿ ಅರಿಯಲಾರದಂತಾದನಲ್ಲಾ ಎನ್ನುವ ಅಂತರಂಗ ಕೊರಗು ಇಲ್ಲಿದೆ. 'ಪುಷ್ಪ' ಇನ್ನೊಂದು ಉತ್ತಮ ಕವನ. ವಿವಿಧ ಹೂಗಳ ಮಧುರ ಕಂಪಿನಂತೆ ಇಲ್ಲಿನ ಸಾಲುಗಳೂ ಇಂಪಾಗಿವೆ.

ದೇಶಭಕ್ತಿ ಗೀತೆಗಳಲ್ಲಿ ಅಷ್ಟಾಗಿ ಬಿಸಿ ಇಲ್ಲ. ವ್ಯಕ್ತಿಗೀತೆಗಳಲ್ಲಿ 'ಬಾಳಿ, ಸ್ನೇಹದ ಬಂಧದಿ' ಕವಿಯ ಧ್ಯೇಯ ಆದರ್ಶಗಳಿಗೆ ಕನ್ನಡಿ ಹಿಡಿಯುತ್ತವೆ.

'ತೊಟ್ಟಿಲಾಟದ ಮಗುವು ಥಿಕ್ಕನೇ ನಕ್ಕಂತೆ; ಬಟ್ಟ ಬಯಲಲಿ ಚಿತ್ರ ಥಟ್ಟನೇ ಹೊಳೆದಂತೆ' ಎನ್ನುವ ಚಿತ್ರ ಚೆನ್ನಾಗಿದೆ. 'ವಿಜ್ಞಾನ ಯುಗದಲ್ಲಿ, ಅಜ್ಞಾನಿಯಾಗಿಯೇ, ನಿನ್ನ ನಂಬದೆ ಕುಳಿತೆ, ಇನ್ನು ಸಾಕಿನ್ನು ಈ ಬಾಳ ಬವಣೆಯ ಭ್ರಮೆ ಕೈಹಿಡಿದು ಕಾಪಾಡೋ' ಇಂಥ ಆರ್ತತೆ ಅಲ್ಲಲ್ಲಿ ಕಂಡುಬರುತ್ತದೆ. ಒಂದು ಸಣ್ಣ ಜೀವಿಯೂ ಕವಿಯ ಮನಸ್ಸನ್ನು ಸೆಳೆಯ ಬಲ್ಲುದೆಂಬುದಕ್ಕೆ 'ಹೋಗಿಬಾ ಕಂದ ಹೋಗಿಬಾ" ಎನ್ನುವ ಕವನ ಸಾಕ್ಷಿ. ನಾಯಿಮರಿ ಸತ್ತಾಗ ಕವಿಗೆ ಅನಿಸಿದೆ : ಅದು ಬಂದೆ ಕೆಲವು ದಿನ ಬದುಕಿದ್ದು ಸಾಯುತ್ತಿಲ್ಲ, ಕೆಲವೆಡೆ ಪ್ರಾಸಗಳ ದಾಂದಲೆಯಿಂದ ಅರ್ಥ ಅಸ್ಪಷ್ಟವಾಗಿದೆ. ಆದರೂ ಕೆಲವೆಡೆ ಇವರ ಪ್ರತಿಭೆ ಮಿಂಚಿವೆ, ಸಹಜ ಕವಿ ಹೃದಯ ಗೋಚರವಾಗಿದೆ.

ಗುರುಕುಲಾಶ್ರಮವೂ. ಬೃಹದ್ ವಿದ್ಯಾಸಂಸ್ಥೆಗಳನ್ನೊಳಗೊಂಡ
ಜ್ಞಾನಪೀಠವೂ, ಪುಣ್ಯಕ್ಷೇತ್ರವೂ ಆದ ಶ್ರೀ ಸಿದ್ಧಗಂಗಾ
ಕ್ಷೇತ್ರದಿಂದ ನಿತ್ಯ ಜ್ಞಾನಾನ್ನದಾಸೋಹಿಗಳಾದ

ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರ
ಕೃಪಾಶ್ರಯದಲ್ಲಿ

'ಸಿದ್ಧಗಂಗಾ'

ಎಂಬ ತ್ರೈಮಾಸಿಕ ಪತ್ರಿಕೆ ಪ್ರಕಟವಾಗುತ್ತಿರುವ ಸಂತೋಷಪ್ರದ ಸಂಗತಿ
ಯನ್ನು ತಿಳಿಸಲು ನಮಗೆ ಅತೀವ ಹೆಮ್ಮೆಯಾಗುತ್ತಿದೆ.

ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಹಿತ್ಯಪೂರ್ಣ ವಿಚಾರ ಗಳನ್ನೊಳಗೊಂಡ ಈ ಪತ್ರಿಕೆ ಕನ್ನಡನಾಡಿನ ದೊಡ್ಡ ದೊಡ್ಡ ಸಾಹಿತಿಗಳ, ವಿದ್ವಾಂಸರ ಹಾಗೂ ಉನ್ನತಾಧಿಕಾರಿಗಳ ಪ್ರಶಂಸೆಗೆ ಪಾತ್ರವಾಗಿ ವಾಚಕರ ಜ್ಞಾನಜ್ಯೋತಿಯಾಗಿ ಬೆಳಗುತ್ತಿದೆ.

ಆದ್ದರಿಂದ ತಾವು ಈ ಪತ್ರಿಕೆಯ ಸರ್ವತೋಮುಖವಾದ ಅಭಿವೃದ್ಧಿಗೆ ಚಂದಾದಾರ ರಾಗುವುದರ ಮೂಲಕ ಆರ್ಥಿಕ ಸಹಾಯ ನೀಡಿ ಪ್ರೋತ್ಸಾಹಿಸಲು ಪ್ರಾರ್ಥಿಸುತ್ತೇವೆ.

ನಮ್ಮ ಸರ್ಕಾರದ ವಿದ್ಯಾ ಇಲಾಖೆಯ ಮಾನ್ಯ ಡೈರೆಕ್ಟರ್ ಅವರು CL 417-4/65-66 (29-4-66) ಮೂಲಕ ಪ್ರೌಢಶಾಲೆ, ಶಿಕ್ಷಣಶಾಲೆ ಹಾಗೂ ಸಾರ್ವಜನಿಕ ಗ್ರಂಥ ಭಂಡಾರಗಳು ಈ ಪತ್ರಿಕೆಯನ್ನು ಕೊಂಡುಕೊಳ್ಳಬಹುದೆಂದು ಆಜ್ಞೆ ಹೊರಡಿಸಿರುವರು.

ವಾರ್ಷಿಕ ಚಂದಾ: ರೂ 5-00.

ಶ್ರೀ ಸಿದ್ಧಗಂಗಾ ಕ್ಷೇತ್ರ
ತುಮಕೂರು ಜಿಲ್ಲೆ

ಪ್ರಕಾಶಕರು
ಹಳೆಯ ವಿದ್ಯಾರ್ಥಿ ಸಂಘ

ಸಂಸ್ಕೃತ ಸೂಕ್ತಿಗಳು

—ಟಿ. ಎಸ್. ಕೃಷ್ಣಮೂರ್ತಿ

ಶ್ರೇಷ್ಠ ಕವಿಗಳ ಕಾವ್ಯಗಳು ಮಹಾ ಸಾಗರಗಳಂತೆ. ಈ ರತ್ನಾಕರಗಳಲ್ಲಿ ಅನರ್ಘ್ಯರತ್ನಗಳಂತಿರುವ ವಿವೇಕದ ಮಾತುಗಳು ಎಷ್ಟೋ ಅಡಗಿವೆ. ಸುಂದರವಾದ, ರಸಭರಿತವಾದ, ಹೃನ್ಮನೋರಂಜಕವಾದ ಇಂತಹ ಮಾತುಗಳಿಗೆ ''ಸದುಕ್ತಿ" ಎಂದು ಹೆಸರು. ಇವನ್ನೇ "ಸುಭಾಷಿತ" ಅಥವ "ಸೂಕ್ತಿ" ಎಂದೂ ಕರೆಯುತ್ತಾರೆ. ಇವು ಕವಿಗಳ ಆಳವಾದ ಲೋಕಾನುಭವ, ಜ್ಞಾನ ಮತ್ತು ತಪಸ್ಸಿನ ಪರಿಪಕ್ವ ಫಲಗಳು. ಆದ್ದರಿಂದಲೇ ಇವುಗಳು ತುಂಬಾ ಸ್ವಾದ್ಯವಾಗಿಯೂ ಹೃದಯವಾಗಿಯೂ ಇರುವುದು. ಪ್ರಪಂಚದ ಅನುಭವಗಳಿಗೂ ರಾಗಭಾವಗಳಿಗೂ ಒಂದು ರೂಪು ಕೊಟ್ಟು, ಮಾನವ ಹೃದಯದಲ್ಲೇಳುವ ಅನಂತಾನಂತರೂಪಿಯಾದ ಆಶೆ-ನಿರಾಶೆ, ಉತ್ಸಾಹ-ನಿರ್ವೇದ, ಸುಖ-ದುಃಖ, ವೈರ-ವಾತ್ಸಲ್ಯ, ಕ್ರೋಧ-ಪ್ರೇಮ ಮೊದಲಾದುವುಗಳನ್ನು ಪ್ರತಿಧ್ವನಿಸುವ ಮರುದನಿ ಕೊಡುವ ಸೂಕ್ತಿಗಳು ಯಾರ ಮನಸ್ಸನ್ನು ತಾನೆ ಆಕರ್ಷಿಸಲಾರವು ? ಸು+ಉಕ್ತಿ=ಸೂಕ್ತಿ ಅಂದರೆ, ಸಮೀಚೀನವಾಣಿ ಅಥವಾ ಒಳ್ಳೆಯ ಮಾತು ಎಂದರ್ಥ. ಈ ಮಾತು ಯಾವುದಾದರೂ ಆಗಿರಬಹುದು. ಒಂದು ವಸ್ತುವನ್ನೋ ಒಂದು ವ್ಯಕ್ತಿಯನ್ನೋ ವರ್ಣಿಸಿರಬಹುದು. ಒಂದು ಸನ್ನಿವೇಶವನ್ನು ಚಿತ್ರಿಸಿರಬಹುದು. ಒಂದು ಭಾವವನ್ನು ವ್ಯಕ್ತಪಡಿಸಬಹುದು. ವಿಷಯ ಮತ್ತು ಸನ್ನಿವೇಶಗಳು ನಮಗೆ ಬಳಕೆಯಾದವುಗಳೇ ಆದರೂ ಇಲ್ಲಿನ ವೈಚಿತ್ರ್ಯ ಅಥವಾ ಚಮತ್ಕಾರದಿಂದ ಇಲ್ಲಿ ಬರುವ ಅನುಭವಗಳೂ ವರ್ಣನೆಗಳೂ ಒಂದು ಹೊಸ ರೂಪವನ್ನೂ ಸಂಸ್ಕಾರವನ್ನೂ ಪಡೆದಿರುತ್ತವೆ; ಇದೇ ಇವುಗಳ ಹಿರಿಮೆ.

ಸಾಮಾನ್ಯವಾಗಿ ಈ ಸೂಕ್ತಿಗಳು ಮೂರು ವಿಧಗಳಾಗಿರುತ್ತವೆ. ವಿಧಿ, ನಿಷೇಧ ಮತ್ತು ಅನ್ಯೋಕ್ತಿ. ಮನುಷ್ಯನು ಧರ್ಮದಲ್ಲಿರಬೇಕು, ಸತ್ಯಮಾರ್ಗದಲ್ಲಿರಬೇಕು, ಆನಂದಜೀವನ ನಡೆಸಬೇಕು-ಎಂದು ಮುಂತಾಗಿ ತಿಳಿಸುವುವು. ವಿಧಿ ರೂಪದವು. ಮನುಷ್ಯನು ಅಧರ್ಮಿಯಾಗಬಾರದು, ಅನೃತವಾಡಬಾರದು, ಕೃಪಣಜೀವನ ಮಾಡಬಾರದು-ಎಂದು ಮುಂತಾಗಿ ತಿಳಿಸುವುವು. ನಿಷೇಧರೂಪದ ಜನರಲ್ಲಿ ಸಾಧಾರಣವಾಗಿ ಕಂಡುಬರುವ ಲೋಪ ದೋಷಗಳನ್ನು ಹೊರಗೆಡಹುವುದಕ್ಕಾಗಿ ಮೃಗಪಕ್ಷಿ ಸಸ್ಯಗಳ ನೆಪಮಾಡಿಕೊಂಡು ಸಮಾಜಕ್ಕೆ ಕನ್ನಡಿ ಹಿಡಿಯಬಲ್ಲವು-ಅನ್ಯೋಕ್ತಿಗಳು. ಒಟ್ಟಿನಲ್ಲಿ ಇವು ಸಮಾಜದ ಕನ್ನಡಿಯೂ ಹೌದು; ಉನ್ನತಿ ಸಾಧಕವೂ ಹೌದು.

ಸಂಸ್ಕೃತ ಸಾಹಿತ್ಯ ಇಂತಹ ಸೂಕ್ತಿಗಳಿಗೆ ತೌರೂರೆನಿಸಿದೆ. ಇವು ಸಾಧಾರಣವಾಗಿ ಪದ್ಯರೂಪದಲ್ಲಿದ್ದು ಜನರ ಜಿಹ್ವಾಗ್ರದಲ್ಲಿ ನೆಲಸಲು ಸುಲಭವಾಗಿವೆ. ಇಂತಹ ಸೂಕ್ತಿಗಳ ಸ್ವಾರಸ್ಯವನ್ನು ವರ್ಣಿಸುತ್ತಾ ಕವಿಯೊಬ್ಬ ಹೇಳಿರುವ ಮಾತಿದು :

ಸಶೇಸ.



ವ್ಯವಸಾಯ ಮತ್ತು ಕೈಗಾರಿಕಾ
ವಸ್ತು ಪ್ರದರ್ಶನ

ಶ್ರೀ ಸಿದ್ಧಲಿಂಗೇಶ್ವರಾಯ ನಮಃ

ವ್ಯವಸಾಯ ಮತ್ತು ಕೈಗಾರಿಕಾ ವಸ್ತುಪ್ರದರ್ಶನ

ಶ್ರೀ ಸಿದ್ಧಗಂಗಾಕ್ಷೇತ್ರ — ತುಮಕೂರು ಜಿಲ್ಲಾ

ದಿನಾಂಕ 22-2-1968 ರಿಂದ 5-3-68ರವರೆಗೆ

ಮಹನಿಯರೇ,

ದಕ್ಷಿಣಭಾರತದ ಸುಪ್ರಸಿದ್ಧ ಜಾತ್ರೆಗಳಲ್ಲಿ ಒಂದಾದ ಶ್ರೀ ಸಿದ್ಧಗಂಗೆಯ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಜಾತ್ರೆಯ ಸಮಯದಲ್ಲಿ ಪ್ರತಿವರ್ಷ ಏರ್ಪಡಿಸುತ್ತಿರುವ ವಸ್ತುಪ್ರದರ್ಶನದಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ಇಲಾಖೆಯವರೂ, ಖಾಸಗಿ ಸಂಘ ಸಂಸ್ಥೆಗಳವರೂ ಜನೋಪಯುಕ್ತ ಅನೇಕ ಪ್ರದರ್ಶನಗಳನ್ನೇರ್ಪಡಿಸಿ ಸುಮಾರು ಐದಾರುಲಕ್ಷ ಜನ ಪ್ರೇಕ್ಷಕವರ್ಗಕ್ಕೆ ವ್ಯವಸಾಯ, ಕೈಗಾರಿಕೆ, ಕುಶಲಕಲೆ, ವಾಣಿಜ್ಯ, ವಿಜ್ಞಾನ, ಭೌಗೋಳಿಕ, ಆರೋಗ್ಯ, ಸಾಂಸ್ಕೃತಿಕ, ರಾಜಕೀಯ, ಮನರಂಜಕಗಳೇ ಮೊದಲಾದ ವಿವಿಧ ಮುಖಗಳಲ್ಲಿ ಜ್ಞಾನಾಭಿವೃದ್ಧಿಗೊಳಿಸುತ್ತಿರುತ್ತಾರೆ.

ತಾವು ನಮ್ಮ ಈ ವಸ್ತುಪ್ರದರ್ಶನದಲ್ಲಿ ತಮ್ಮ ಆಕರ್ಷಣೀಯ ' ಸ್ಟಾಲ್ 'ನ್ನು ತೆರೆದು ಜನಜಾಗೃತಿಗೊಳಿಸುವುದರ ಮೂಲಕ ಒಳ್ಳೆಯ ಲಾಭವನ್ನು ಪಡೆದು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ. ಸಮಸ್ತ ಮಹನಿಯರೂ, ಮಹಿಳೆಯರೂ ಈ ವಸ್ತು ಪ್ರದರ್ಶನಕ್ಕೆ ಒಮ್ಮೆ ಭೇಟಿ ಕೊಟ್ಟು ಜ್ಞಾನಾಭಿವೃದ್ಧಿ ಪಡೆಯಬೇಕೆಂದು ಆಶಿಸುತ್ತೇವೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ,
ವಸ್ತುಪ್ರದರ್ಶನ ಸಮಿತಿ,
ಶ್ರೀ ಸಿದ್ಧಗಂಗಾ ಕ್ಷೇತ್ರ,
ತುಮಕೂರು ಜಿಲ್ಲಾ.

Printed by T. B. Dharnendraiah at Prithvi Printers, Balepet, B'lore-2,